
ಗೌರಿ ಲಂಕೇಶರ

ಲಂಕೇಶ್

ಏಪ್ರಿಲ್ 25, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಹೊಸ ವಿವಾದ


ಬಸವಣ್ಣ ಮಾದಿಗನೇ?

ನ್ಟಿ ನಾಣಿಗೆ ಪೋಲೀಸ್ ಶರಣು

ಹುಬ್ಬಳ್ಳಿ: ಹೇಮಕ್ಕನ ದರ್ಬಾರು







ಕತೆಯಲ್ಲ ಹೇಸರಗತ್ತೆ!

ಅಯ್ಯೋ ಅಣ್ಣನ ಸಮಾಧಿ!

ಜೇವರ್ಗಿ ರೈತರಿಗೆ ವಿಷ ಕೊಟ್ಟಿದ್ದು ಸರ್ಕಾರವಲ್ಲವೇ?

ಚಾರ್ವಾಕ

ಶಿವಸುಂದರ್

ನಮ್ಮ ದೇಶದಲ್ಲಿ ಸರ್ಕಾರಗಳು ಕೊಟ್ಟ ಮಾತಿಗೆ ತಕ್ಕಂತೆ ನಡೆದುಕೊಳ್ಳದೇ ಇದ್ದರೂ ನಮ್ಮ ರೈತರು ಮಾತ್ರ ಕೊಟ್ಟ ಮಾತಿಗೆ ನಡೆದುಕೊಂಡೇ ಬದುಕುತ್ತಾರೆ. ಅದು ಸಾಲದ ವಿಷಯವಿರಬಹುದು, ಅಥವಾ ಸಾಲ ತೀರಿಸಲಾಗದೆ ಪ್ರಾಣ ತೆಗೆದುಕೊಳ್ಳುವ ವಿಷಯವಿರಬಹುದು!

ಮೊನ್ನೆ ಜೇವರ್ಗಿಯಲ್ಲಿ ಒಂಭತ್ತು ರೈತರು ಹಾಡು ಹಗಲೇ ಸರ್ಕಾರದ ಎದುರಲ್ಲೇ ವಿಷ ಕುಡಿದು ಪ್ರಾಣ ತೆಗೆದುಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಕಳೆದ ಹಲವಾರು ದಿನಗಳಿಂದ ಜೇವರ್ಗಿಯ ರೈತರು ಅಲ್ಲಿನ ಸಕ್ಕರೆ ಕಾರ್ಖಾನೆಯು ತಾವು ಬೆಳೆದ ಕಬ್ಬನ್ನು ಕೊಂಡು ಅರೆಯುತ್ತಿಲ್ಲ ಎಂದು ನಿರಶನ ಮಾಡುತ್ತಿದ್ದರು. ಆದರೂ ಸರ್ಕಾರವಾಗಲೀ, ಕಾರ್ಖಾನೆಯ ಆಡಳಿತ ಮಂಡಳಿಯವರಾಗಲೀ ಜಗ್ಗದ ಕಾರಣ ಮೊನ್ನೆ ತಾವೆಲ್ಲರೂ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಘೋಷಿಸಿದ್ದರು. ಕೊನೆಗೂ ಒಂಭತ್ತು ಮಂದಿ ರೈತರು ಆತ್ಮಹತ್ಯೆಗೆ ಯತ್ನಿಸಿಯೇ ಬಿಟ್ಟರು.



ಆಗ ಕಣ್ಣು ತೆರೆದ ಸರ್ಕಾರ ದಿಢೀರನೆ ಒಂದಷ್ಟು ಹುಸಿ ಯೋಜನೆಗಳನ್ನು ಪ್ರಕಟಿಸಿತು. ಈ ಹುಸಿ ಭರವಸೆಗಳನ್ನಾದರೂ ಸರ್ಕಾರವು ರೈತರು ಸಾಯುವ ಪ್ರಯತ್ನ ನಡೆಸುವ ಮುಂಚೆಯೆ ಮಾಡಬಹುದಿತ್ತಲ್ಲವೇ? ರೈತರು ಸುಳ್ಳು ಹೇಳುತ್ತಿದ್ದಾರೋ ಅಥವಾ ನಿಜವಾಗಿಯೂ ಆತ್ಮಹತ್ಯೆ ಮಾಡಿಕೊಳ್ಳುತ್ತಾರೋ ಎಂದು ಪರೀಕ್ಷಿಸಿ ಆ ನಂತರ ಕ್ರಮ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿತ್ತೇ?

ಇರಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಕಬ್ಬು ಬೆಳೆಗಾರರ ಆತ್ಮಹತ್ಯೆ ಪ್ರಯತ್ನವನ್ನು ನಿಲ್ಲಿಸುವಷ್ಟು ಪರಿಣಾಮಕಾರಿಯಾಗಿದೆಯೇ? ಮುಖ್ಯಮಂತ್ರಿ ಕುಮಾರಸ್ವಾಮಿ ಸಕ್ಕರೆ ಕಾರ್ಖಾನೆ ಕಬ್ಬು ಅರೆಯಲಿಲ್ಲವೆಂದರೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಅಧಿಕಾರಿಗಳ ಮೇಲೆ ಗುಟುರು ಹಾಕಿದ್ದಾರೆ ಮತ್ತು ಮೇ 31ರ ತನಕ ಅರೆಯುವ ಕಬ್ಬಿಗೆ ಟನ್ನಿಗೆ 100 ರೂ. ಸಹಾಯಧನವನ್ನೂ ಘೋಷಿಸಿದ್ದಾರೆ. ಆದರೆ ಇದು ಸಮಸ್ಯೆಯನ್ನು ಪರಿಹರಿಸುತ್ತದೆಯೇ? ಇದು ಸಮಸ್ಯೆಯ ಹೆಡೆಗೆ ಹೊಡೆಯುವ ಬದಲು ಬಾಲಕ್ಕೆ ಹೊಡೆಯುವ ಮೋಸದ ಪ್ರಯತ್ನವಷ್ಟೆ.

ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಏಕೆ ಅರೆಯುತ್ತಿಲ್ಲ? ಇಂದು ದೇಶಾದ್ಯಂತ ಸಕ್ಕರೆ ದಾಸ್ತಾನು ನಮ್ಮ ಅಗತ್ಯಕ್ಕೆ ಮೀರುವಷ್ಟಿದೆ. ಒಟ್ಟಾರೆ ದೇಶದ ಸಕ್ಕರೆ ಅಗತ್ಯ 190 ಲಕ್ಷ ಟನ್ ಆದರೆ ಕಳೆದ ಬಾರಿ ದೇಶದಲ್ಲಿ 240 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗಿದೆ. ಕಳೆದ ಬಾರಿಯ ದಾಸ್ತಾನೇ 40 ಲಕ್ಷ ಟನ್ ಬಾಕಿ ಉಳಿದಿದೆ ಮತ್ತು ಸರ್ಕಾರ ಸಕ್ಕರೆ ರಫ್ತನ್ನು ನಿಷೇಧಿಸಿದೆ.

ಹೀಗಾಗಿ ಕಬ್ಬು ಹೆಚ್ಚು ಅರೆದಷ್ಟೂ ಸಕ್ಕರೆ ಹೆಚ್ಚು ದಾಸ್ತಾನಾಗುತ್ತದೆಯೇ ವಿನಃ ಕಾರ್ಖಾನೆಗಳಿಗೆ ಲಾಭ ದೊರೆಯುವುದಿಲ್ಲ. ಆದ್ದರಿಂದಲೇ ಈಗಾಗಲೇ ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 56 ಸಕ್ಕರೆ ಕಾರ್ಖಾನೆಗಳಲ್ಲಿ 10ಕ್ಕೂ ಹೆಚ್ಚು ಮುಚ್ಚಿಕೊಂಡಿವೆ.

ಇದು ಸಮಸ್ಯೆ. ಆದರೆ ಸರ್ಕಾರ ಈ ಸಮಸ್ಯೆಯನ್ನೇ ಗುರುತಿಸದೆ ಅಧಿಕಾರಿಗಳ ಅಥವಾ ಆಡಳಿತ ಮಂಡಳಿಯ ಉದ್ಧಟತನವೇ ಇದಕ್ಕೆ ಕಾರಣವೆಂಬಂತೆ ಚಿತ್ರಿಸಿ ಅಸಲಿ ಕಾರಣವನ್ನು ಮರೆಮಾಚುತ್ತಿದೆ. ಇದಕ್ಕೆ ಪರಿಹಾರವೇನು?

ಪರಿಹಾರಗಳೆಲ್ಲಾ ಸರ್ಕಾರದ ಬಳಿ ಇವೆ. ಮೊದಲನೆಯದಾಗಿ ಕೇಂದ್ರ ಸರ್ಕಾರ ಹೊರ ದೇಶದಿಂದ ಆಮದು ಮಾಡಿಕೊಳ್ಳುತ್ತಿರುವ ಸಕ್ಕರೆಯನ್ನು ನಿಷೇಧಿಸಬೇಕು ಮತ್ತು ದೇಶದ ಅಗತ್ಯವನ್ನು ಪೂರೈಸಿ ಉಳಿಯುವಷ್ಟು ಸಕ್ಕರೆಗೆ ರಫ್ತು ಮಾರುಕಟ್ಟೆಯನ್ನು ಗಳಿಸಿಕೊಳ್ಳಬೇಕು. ಎರಡನೆಯದಾಗಿ ಸಕ್ಕರೆಗೆ ಆಂತರಿಕ ಮಾರುಕಟ್ಟೆಯನ್ನಾದರೂ ಹೆಚ್ಚಿಸಬೇಕು. ಇದು ಕರ್ನಾಟಕ ಸರ್ಕಾರದ ವ್ಯಾಪ್ತಿಗೇ ಬರುವ ಪರಿಹಾರೋಪಾಯ. ಸಕ್ಕರೆ ದಾಸ್ತಾನು ಎಷ್ಟು ಹೆಚ್ಚಿದರೂ, ಪೂರೈಕೆ ಎಷ್ಟು ಹೆಚ್ಚಿದರೂ ಸಕ್ಕರೆಯ ಬೆಲೆ ಮಾತ್ರ ಕಳೆದ ಒಂದು ದಶಕದಿಂದ ಇಳಿಯುವ ಬದಲು ಹೆಚ್ಚುತ್ತಲೇ ಹೋಗುತ್ತಿದೆ. ಇದಕ್ಕೆ ಕಾರಣವಾಗಿರುವ ಮಾರುಕಟ್ಟೆ ಶಕ್ತಿಗಳನ್ನು ಮೊದಲು ಸರ್ಕಾರ ಮಟ್ಟ ಹಾಕಬೇಕು.


ಕೆಲವು ವರ್ಷಗಳ ಹಿಂದೆ ಸಕ್ಕರೆಯ ಬೆಲೆ ಕೇಜಿಗೆ 10-12 ರೂಪಾಯಿಗಳಿತ್ತು. ಆಗ ವಾಸ್ತವವಾಗಿ ಸಕ್ಕರೆ ಉತ್ಪಾದನೆ ಅಗತ್ಯಕ್ಕೆ ತಕ್ಕಷ್ಟು ಇರಲಿಲ್ಲ. ಬೇಡಿಕೆ ಹೆಚ್ಚಿತ್ತು, ಪೂರೈಕೆ ಕಮ್ಮಿ ಇತ್ತು. ಈಗ ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆ ಇದೆ. ಆದರೆ ಬೆಲೆ? ಕೇಜಿಗೆ 20ರಿಂದ 25 ರೂಪಾಯಿಗಳಷ್ಟಿದೆ! ಹೀಗಾಗಿ ಸಕ್ಕರೆಗೆ ದೇಶದ ಹೊರಗಿನ ಮಾರುಕಟ್ಟೆಯೂ ಇಲ್ಲ. ದೇಶದ ಒಳಗಿನ ಮಾರುಕಟ್ಟೆಯೂ ಕುಸಿಯುತ್ತಾ ಬಂದಿದೆ.

ನಿಜಕ್ಕೂ ಈ ಮಣ್ಣಿನ ಮಕ್ಕಳ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇದ್ದದ್ದೇ ಆದಲ್ಲಿ ಸಕ್ಕರೆ ಮಾರುಕಟ್ಟೆಯನ್ನು ದಲ್ಲಾಳಿಗಳ ಹಿಡಿತದಿಂದ ವಿಮೋಚನೆ ಮಾಡಬೇಕು ಮತ್ತು ಸರ್ಕಾರವೇ ಸಕ್ಕರೆ ಬೆಲೆಯನ್ನು ಕಡಿಮೆ ಮಾಡಿ ಪಡಿತರ ಅಂಗಡಿಗಳ ಮೂಲಕ ವಿತರಣೆ ಮಾಡಬೇಕು. ಆಗ ಮಗ್ಗಲು ಹಿಡಿಯುತ್ತಿರುವ ಸಕ್ಕರೆಗೆ ವಿಮೋಚನೆ. ಸಕ್ಕರೆ ಕಾರ್ಖಾನೆಗೂ ಕಾಸು..ರೈತರಿಗೂ ಕಾಸು.

ಆದರೆ ಇಲ್ಲೂ ಒಂದು ಸಮಸ್ಯೆ ಇದೆ. ಸರ್ಕಾರ ಖಂಡಿತಾ ರೈತರಿಗೆ ಬೆಂಬಲ ಬೆಲೆ ಒದಗಿಸಬೇಕು. ಅದಕ್ಕಾಗಿ ಸರ್ಕಾರ 200 ಕೋಟಿ ತೆಗೆದಿಟ್ಟಿದೆಯೆಂದು ಮುಖ್ಯಮಂತ್ರಿ ಕುಮಾರಸ್ವಾಮಿ ಘೋಷಿಸಿದ್ದಾರೆ. ಆದರೆ ಇದಕ್ಕಾಗಿ ಬಜೆಟ್ಟಿನಲ್ಲಿ ಮಾತ್ರ ಅಷ್ಟು ಹಣ ಎತ್ತಿಟ್ಟಿಲ್ಲ! ಆದ್ದರಿಂದ ಇದು ಹೆಚ್ಚುವರಿ ಹಣ ಸಂಪನ್ಮೂಲ ಸಂಗ್ರಹಣೆಯಿಂದ ಮಾತ್ರ ಬರಬೇಕಾದ ಮೊತ್ತ. ಅದಕ್ಕೆ ಸರ್ಕಾರದ ಬಳಿ ಯಾವುದೇ ಮಾರ್ಗಗಳಿಲ್ಲ. ಏಕೆಂದರೆ ಹಣ ಬರಬೇಕಾದ ಸ್ವದೇಶಿ ಮತ್ತು ವಿದೇಶಿ ಕೈಗಾರಿಕೋದ್ಯಮಿಗಳಿಗೆ ಇದೇ ಸರ್ಕಾರ ತೆರಿಗೆ ರಿಯಾಯತಿಗಳ ದೊಡ್ಡ ಪಟ್ಟಿಯನ್ನೇ ಘೋಷಿಸಿದೆ. ಇನ್ನು ಅಧಿಕ ಸಂಪನ್ಮೂಲ ರೂಢಿಸಿಕೊಳ್ಳಲು ಸರ್ಕಾರದ ಬಳಿ ಉಳಿಯುವ ಮಾರ್ಗ ಸಾಮಾನ್ಯ ಜನರ ಮೇಲೆ ತೆರಿಗೆ ಹಾಕುವುದಾಗಿದೆ...ಅಂದರೆ ರೈತನ ಮೇಲೆ ತೆರಿಗೆ ಹಾಕುವುದೇ ಆಗಿದೆ!

ಟೊಮ್ಯಾಟೊ ಬೆಳೆದ ರೈತರಾಗಲೀ, ಕಡಲೆಕಾಯಿ ಬೆಳೆದ ರೈತರಾಗಲೀ, ಕಬ್ಬು ಬೆಳೆದ ರೈತರಾಗಲೀ ಸ್ವದೇಶಿ ಮತ್ತು ವಿದೇಶಿ ಮಾರುಕಟ್ಟೆ ಶಕ್ತಿಗಳ ಪರವಾದ ಒಪ್ಪಂದಕ್ಕೆ ಸಹಿ ಹಾಕಿದ ಕೊಲೆಗಡುಕ ಸರಕಾರಗಳಿಂದ ನಿರೀಕ್ಷಿಸಬಹುದಾದದ್ದು ಬಹಳ ಕಡಿಮೆ. ಈ ದೇಶವನ್ನು ಈ ಶಕ್ತಿಗಳಿಂದ ಕಿತ್ತುಕೊಳ್ಳದೇ ರೈತರ ಬದುಕಿಗೆ ಅಂದರೆ ಈ ದೇಶಕ್ಕೆ ಸ್ವಾತಂತ್ರ್ಯಕ್ಕೆ ಅರ್ಥವಿರುವುದಿಲ್ಲ!

ಭಾರತಿ- ವಾಲ್ ಮಾರ್ಟ್ ಲಾಲ್‌ಸಲಾಂ..ಲಾಲ್‌ಸಲಾಂ



ಏನೆಂದು ಹೇಳುವುದು, ಎಷ್ಟೆಂದು ಹೇಳುವುದು ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಸರ್ಕಾರದ ಪುರಾಣವನ್ನ! ಅಂತರಂಗಕ್ಕೊಂದು, ಬಹಿರಂಗಕ್ಕೊಂದು ಎಂಬ ಆಷಾಢಭೂತಿತನದ ಕಥೆಯನ್ನ! ತಮ್ಮದು ಏಕಮಾತ್ರ ರೈತಪರ ಸರ್ಕಾರ ಎನ್ನುತ್ತಲೆ ಸಿಂಗೂರಿನ ರೈತರ ಬದುಕನ್ನು ಟಾಟಾಗಳಿಗೆ ಒತ್ತೆಯಿಟ್ಟರು. ಸಿಂಗೂರಿನಲ್ಲಿ ಬರುತ್ತಿರುವುದು ಎಸ್‌ಇಜೆಡ್ ಅಲ್ಲ ಎನ್ನುತ್ತಲೇ, ತಾವು ಎಸ್‌ಇಜೆಡ್‌ಗಳ ವಿರುದ್ಧ ಎನ್ನುತ್ತಲೇ ನಂದೀಗ್ರಾಮದಲ್ಲಿ ಎಸ್‌ಇಜೆಡ್‌ಗಾಗಿ ರೈತರನ್ನು ಗುಂಡಿಟ್ಟು ಕೊಂದರು.

ಕೊನೆಮಾತು

ಸಾವಿರಾರು ಕಾರ್ಮಿಕರ ಹತ್ಯೆಗೆ ಕಾರಣವಾದ ಯೂನಿಯನ್ ಕಾರ್ಬೈಡ್ ಕಂಪನಿಯನ್ನು ಕೊಂಡ ಡೌ ಕಂಪನಿಯ ವಿರುದ್ಧ ದೇಶಾದ್ಯಂತ ಹೋರಾಟ ಮಾಡುತ್ತಿದ್ದೇವೆ ಎಂದು ಪ್ರಚಾರ ಮಾಡುತ್ತಲೇ ಅದೇ ಡೌ ಕಂಪನಿಗೆ 'ಡಾ' ಹೊಡೆಯುತ್ತಾ ಅದನ್ನು ಪಶ್ಚಿಮ ಬಂಗಾಳಕ್ಕೆ ಕರೆತರುತ್ತಿದ್ದಾರೆ. ಅದೇರೀತಿ ದೇಶಾದ್ಯಂತ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ವಿರುದ್ಧ ಹೋರಾಡುತ್ತಿದ್ದೇವೆ ಎನ್ನುವ ಸಿಪಿಎಂ ಪಕ್ಷ ಅದರ ಮೊದಲ ಮಳಿಗೆಯನ್ನು ತೆರೆಯಲು ಬಂಗಾಳದಲ್ಲೇ ಅವಕಾಶ ಮಾಡಿಕೊಟ್ಟಿದೆ ಎನ್ನುವ ಸುದ್ದಿ ಹೊರಬಿದ್ದಿದೆ!

ಸಂದರ್ಭ ಹೇಗಿದೆಯೆಂದರೆ ಇದರ ಬಗ್ಗೆ ಹೇಳಿದಾಗ ರಾಜಕೀಯ ಗೊತ್ತಿಲ್ಲದ ಸ್ನೇಹಿತರೊಬ್ಬರು "ಅದರಲ್ಲಿ ಆಶ್ಚರ್ಯವೇನಿದೆ? ಇವತ್ತು ವಿದೇಶಿ ಹೂಡಿಕೆದಾರರಿಗೆ ಅತ್ಯಂತ ಪ್ರಿಯವಾದ ರಾಜ್ಯ ಪಶ್ಚಿಮ ಬಂಗಾಳವೇ" ಎಂದು ಉದ್ಗರಿಸಿದರು. ಇದನ್ನು ಕಾಮ್ರೇಡ್ ಬುದ್ಧದೇವರು ಹೊಗಳಿಕೆ ಎಂದು ಸ್ವೀಕರಿಸುತ್ತಾರೋ ಅಥವಾ ತೆಗಳಿಕೆ ಎಂದು ಸ್ವೀಕರಿಸುತ್ತಾರೋ ಎಂಬ ಪ್ರಶ್ನೆಯೇ ಅಸಂಬದ್ಧ ಅಲ್ಲವೇ?

No Comments



"ಬಿಸ್ ಸುಡೋದ್ರಿಂದ ನ್ಯಾಯ ಸಿಗಲ್ಲ"


- ನಾರಾಯಣಮೂರ್ತಿ

"ವಿಧೀಸಲಾತಿಗೆ ತಡೆಯಾಜ್ಞೆ ನೀಡಿದ ದ್ವಿಸದಸ್ಯ ಪೀಠದ ತೀರ್ಪು ಸಂವಿಧಾನದ ಉಲ್ಲಂಘನೆ ಮಾತ್ರವಲ್ಲದೆ ಸುಪ್ರೀಂಕೋರ್ಟಿನ ಒಂಬತ್ತು ಸದಸ್ಯರ ಪೀಠ ನೀಡಿದ ತೀರ್ಪಿಗೆ ವಿರುದ್ಧವಾಗಿದೆ."

- ಸಿದ್ದರಾಮಯ್ಯ

"ಬಿಜೆಪಿಯನ್ನು ಕೋಮುವಾದಿ ಪಕ್ಷವೆಂದರೆ ನಮಗೇನೂ ಅವಮಾನವಿಲ್ಲ"

- ರಾಜನಾಥ್ ಸಿಂಗ್




"ನಾರಾಯಣಮೂರ್ತಿ ರಾಷ್ಟ್ರಪತಿ ಆದರೆ ಫೆಂಟಾಸ್ಟಿಕ್."

- ಅಬ್ದುಲ್ ಕಲಾಂ, ರಾಷ್ಟ್ರಪತಿ

"ಸಮಾಜದ ಅಸಮಾನತೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಹಿಂದುಳಿದ ವರ್ಗ ಮತ್ತು ದಲಿತರು ಹಲವು ವರ್ಷಗಳಿಂದ ಧರಣಿ, ಪ್ರತಿಭಟನೆಗಳನ್ನು ಮಾಡುತ್ತಲೇ ಬಂದಿದ್ದಾರೆ. ಇದರಿಂದ ಈವರೆಗೆ ಪ್ರಯೋಜನಗಳನ್ನು ಕಂಡಿಲ್ಲ. ಆದ್ದರಿಂದ ಸಮಾಜದಲ್ಲಿ ಸಮಾನತೆಯನ್ನು ಪಡೆಯಲು ಬೇರೆ ದಾರಿಯನ್ನು ಹಿಡಿಯಬೇಕು."

- ಎಲ್. ಹನುಮಂತಯ್ಯ



"ನಾವು ಯಾವತ್ತೂ ಟಿಬೆಟ್ಟಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿಲ್ಲ, ನಮಗೆ ಬೇಕಾಗಿರುವುದು ಸ್ವಾಯತ್ತತೆ"

- ದಲೈಲಾಮಾ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ನಾರಾಯಣಮೂರ್ತಿ ರಾಷ್ಟ್ರಗೀತೆಗೆ ಅವಮಾನ ಮಾಡಿದ ಪ್ರಸಂಗದ ವಿರುದ್ಧ ಸರ್ಕಾರ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಲಿದೆ."

- ಎಂ. ಪಿ. ಪ್ರಕಾಶ್

"ಅಧಿಕಾರಿಗಳು ಜಮೀನ್ದಾರರುಗಳಲ್ಲ, ಜನರು ಅವರ ಆಳುಗಳಲ್ಲ."

- ಎಚ್. ದಿ. ಕುಮಾರಸ್ವಾಮಿ

"ಈ ವರ್ಷ ಸಮ್ಮಿಶ್ರ ಸರ್ಕಾರ 5312 ಕೋಟಿ ರೂ. ಹೆಚ್ಚು ಆದಾಯ ಗಳಿಸಿದೆ."

- ಬಿ. ಎಸ್. ಯದಿಯೂರಪ್ಪ

"ಪ್ರಧಾನಿಯ ಭೇಟಿ ಸಿಕ್ಕ ತಕ್ಷಣ ರಾಜೀನಾಮೆ ಕೊಡುವುದು ಖಚಿತ."

- ಅಂಬರೀಶ್

"ಪಕ್ಷದ ಶಾಸಕರು ನನ್ನ ಮಾತನ್ನು ಕೇಳುತ್ತಿಲ್ಲ, ಅಧಿಕಾರ ಬಂದ ಮೇಲೆ ನಾನೇ ಅವರಿಗಾಗಿ ಕಾಯಬೇಕಾದ ಪರಿಸ್ಥಿತಿ ಬಂದಿದೆ."


- ದೇವೇಗೌಡ



"ದಲಿತರ ಸಮಸ್ಯೆಯನ್ನೂ, ಎಲ್ಲವನ್ನೂ ಸಮಭಾವದಿಂದ ಸ್ವೀಕರಿಸುವ ಮನಸ್ಥಿತಿಗೆ ತಲುಪಿದ್ದೇನೆ. ಯಾವುದೇ ಸಮಸ್ಯೆಯನ್ನು ಅಂಶಿಕವಾಗಿ ಅಲ್ಲದೆ ಸಮಗ್ರವಾಗಿ ನೋಡಬೇಕು."

- ಕವಿ ಸಿದ್ದಲಿಂಗಯ್ಯ


ವಾರದ ವಿವೇಕ



"ನನ್ನ ಆಟ ಮುಗಿಯಿತು. ನಾನು ಸ್ಥಾನ ಖಾಲಿ ಮಾಡಲೇ ಬೇಕು..ಯುವಕರಿಗೆ ಅವ[illegible]ಮಾಡಿಕೊಡಲೇ ಬೇಕು."

- ಬ್ರಿಯಾನ್ ಲಾರಾ, ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ಕ್ಯಾಪ್ಟನ್


ವಾರದ ಅಪಹಾಸ್ಯ



"ಎಚ್.ಡಿ.ಕುಮಾರಸ್ವಾಮಿ, ಅಂಬರೀಶ್, ವಿಷ್ಣುವರ್ಧನ್, ಶಿವರಾಜ್ ಕುಮಾರ್ ನೇತೃತ್ವದಲ್ಲಿ ಪ್ರಾದೇಶಿಕ ಪಕ್ಷ ಕಟ್ಟಿದರೆ ದಿಲ್ಲಿಯಲ್ಲಿ ಕನ್ನಡದ ಧ್ವನಿ ಮೊಳಗಲು ಸಾಧ್ಯ."

- ಚಿತ್ರನಟ ಅಶೋಕ್


ವಾರದ ಅಸಂಬದ್ಧ



"ನಾನು ಬಜೆಟ್ಟಿನಲ್ಲಿ ತಂದಿರುವಂತೆ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡುವಾಗ ಈ ರೀತಿ ವಿರೋಧ ಬರುವುದು ಸಹಜ."

- ಯದಿಯೂರಪ್ಪ

ವಾರದ ಅವಿವೇಕ



"ನಾರಾಯಣಮೂರ್ತಿಯವರನ್ನು ಬಂಧಿಸುವಂತಹ ದೇಶದ್ರೋಹದ ಕೆಲಸ ಅವರು ಯಾವುದೂ ಮಾಡಿಲ್ಲ, ಹಾಗೆಯೇ ಅವರು ಸ್ಥಳೀಯರಿಗೆ ಕೆಲಸ ಕೊಡುವುದಿಲ್ಲ ಎನ್ನುವ [illegible]ರೋಪವೂ ತಪ್ಪು. ಸ್ಥಳೀಯರಿಗೆ ಕೆಲಸ ಕೊಡಿ ಎಂದರೆ ಅರ್ಹತೆ ಇರಬೇಕಲ್ಲ."

- ಎಸ್. ಎಲ್. ಭೈರಪ್ಪ


ಸತ್ಯದ ಹಾದಿಯಲ್ಲಿನ ಅಡೆತಡೆಗಳು



ಕಂಡಹಾಗೆ

ಮೊನ್ನೆ ಬೆಂಗಳೂರಿನಲ್ಲಿ ಕುತೂಹಲಕಾರಿ ರ್ಯಕ್ರಮವೊಂದು ನಡೆಯಿತು. ಸಂಘ ರಿವಾರದವರು ಏರ್ಪಡಿಸಿದ್ದ 'ಅಂಬೇಡ್ಕರ್ ಸ್ಕೃತ ಶೋಭಾಯಾತ್ರೆ' ಎಂಬ ಆ ರ್ಯಕ್ರಮದಲ್ಲಿ ಒಂದು ಕರಪತ್ರವನ್ನೂ ಂಚಿದ್ದರು. ಯಾರಿಗೂ ಬಾರದ ಸಂಸ್ಕೃತ ಾಷೆಯಲ್ಲೇ ಬರೆಯಲಾಗಿದ್ದ ಆ ಕರಪತ್ರದಲ್ಲಿ ಂದೇ ಒಂದು ಸಾಲು ಕನ್ನಡದಲ್ಲಿದ್ದು ಅದು ೀಗಿತ್ತು: "1949 ರ ಪ್ಟೆಂಬರ್ 10 ರಂದು ಡೆದ ಸಂವಿಧಾನ ರಚನಾ ಭೆಯಲ್ಲಿ ಂಬೇಡ್ಕರ್‌ರವರು ಂಸ್ಕೃತವೇ ರಾಷ್ಟ್ರಭಾಷೆ ಗಬೇಕೆಂದಿದ್ದರಲ್ಲದೆ, ತಮ್ಮ ಅಭಿಪ್ರಾಯವನ್ನು ಂಸ್ಕೃತದಲ್ಲೇ ಂಡಿಸಿದ್ದರು".





ಇದರ ಬಗ್ಗೆ ಪತ್ರಕರ್ತೆ ್ನೇಹಿತೆಯೊಬ್ಬರು ಹೇಳಿದಾಗ ಚ್ಚರಿ ಆಯಿತು. ಎಲ್ಲಿ ಂಬೇಡ್ಕರ್, ಎಲ್ಲಿ ಸಂಸ್ಕೃತ ಾಷೆ ಅನ್ನಿಸಿತು. ಅಷ್ಟೇ ಲ್ಲ, ದಲಿತ ಅಂಬೇಡ್ಕರ್ ವರನ್ನು ಇತ್ತೀಚಿನತನಕ ್ವೇಷದಿಂದ ನಿರ್ಲಕ್ಷಿಸುತ್ತಿದ್ದ ಚಡ್ಡಿಗಳು, ಮನುಸ್ಮೃತಿ ಂವಿಧಾನವಾಗಲಿಲ್ಲವಲ್ಲಾ ಎಂದು ಕೊರಗುತ್ತಾ ನಮ್ಮ ಂವಿಧಾನವನ್ನು ಅಂಬೇಡ್ಕರ್ ಸ್ಮೃತಿ' ಎಂದು ಮೂದಲಿಸುತ್ತಿದ್ದ ಚಡ್ಡಿಗಳು ಈಗ ಇದ್ದಕ್ಕಿದ್ದಂತೆ ಅವರ ಜನ್ಮದಿನವನ್ನು ಬಾವುಟ ಹಾರಿಸುವ ಮೂಲಕ ಆಚರಿಸಿದರಲ್ಲದೆ, ಈಗ ಅವರಿಗೂ ಸಂಸ್ಕೃತಕ್ಕೂ ಂಟು ಬೆಳೆಸಿದ್ದಾರಲ್ಲಾ ಎಂಬ ಸೋಜಿಗವೂ ಆಯಿತು.

ಹೌದು ಅಂಬೇಡ್ಕರ್‌ರವರು ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಕಲಿತಿದ್ದರು. ಆದರೆ ಅವರು ಅದನ್ನು ಕಲಿತದ್ದು ಸ್ವ ಇಚ್ಛೆ ಮತ್ತು ಶ್ರದ್ಧೆಯಿಂದ. ಅಂಬೇಡ್ಕರ್ ಚಿಕ್ಕವರಾಗಿದ್ದಾಗ ಅವರು ದಲಿತರಾದ್ದರಿಂದ ಅವರಿಗೆ ಶಾಲೆಯಲ್ಲಿ ಸಂಸ್ಕೃತ ಹೇಳಿಕೊಡುವುದಿಲ್ಲ ಎಂದು ಮಾಸ್ತರರು ಹೇಳಿದ್ದರು. ಜನರ ಶೋಷಣೆಯ ಭಾಷೆಯೇ ಆಗಿದ್ದ ಸಂಸ್ಕೃತದಲ್ಲಿ ಮತ್ತು ಸಂಸ್ಕೃತದಲ್ಲೇ ರಚಿಸಿದ್ದ ಪುಸ್ತಕಗಳಲ್ಲಿ ಏನಿರಬಹುದು ಎಂದು ಅರಿಯಲಿಕ್ಕೇ ಅವರು ಆ ಭಾಷೆಯನ್ನು ಕಲಿತಿದ್ದರು.

ಅಂದಮಾತ್ರಕ್ಕೆ ಅವರು ಸಂಸ್ಕೃತವೇ ರಾಷ್ಟ್ರಭಾಷೆಯಾಗಲಿ ಎಂದು ಸಂಸ್ಕೃತದಲ್ಲೇ ವಾದ ಮಂಡಿಸಿದ್ದರೆ?

ಇದರ ಬಗ್ಗೆ ಇಂಟರ್‌ನೆಟ್‌ನಲ್ಲಿ ಹುಡುಕಾಡಿದೆ. ಅದರಲ್ಲಿ ಸಿಕ್ಕ ಹಲವು ವೆಬ್‌ಸೈಟುಗಳಲ್ಲಿ 1949 ರ ಸೆಪ್ಟೆಂಬರ್ 10 ರಂದು ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಸಂಸ್ಥೆಯು "ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್‌ರವರು ಈ ಪ್ರಸ್ತಾವನೆಯನ್ನು ಮಂಡಿಸಿದರು" ಎಂದು ವರದಿ ಮಾಡಿತ್ತು ಎಂದು ಯಾರೋ ಹೇಳಿದ್ದರು. ಆ ಹೇಳಿಕೆಯೇ ಕೆಲವು ವೆಬ್‌ಸೈಟ್‌ಗಳಲ್ಲಿ ಯಥಾವತ್ತಾಗಿ ಪ್ರಕಟಣೆಗೊಂಡಿತ್ತು, ಹಿಂದೂಮುಂದೂ ಇಲ್ಲದ ಈ ವರದಿಯನ್ನೇ ಆಧರಿಸಿ ಹೀಗೆ ಪ್ರಚಾರ ಮಾಡಲಾಗುತ್ತಿದೆಯಲ್ಲಾ ಎಂದು ಯೋಚಿಸಿದೆ.

ಯಾವುದಕ್ಕೂ ಇರಲಿ ಎಂದು ನಮ್ಮ ಪತ್ರಿಕೆ ಬಳಗಕ್ಕೆ ಸೇರಿರುವ, ತುಂಬಾ ಜಾಣೆಯಾದ ರಾಜಲಕ್ಷ್ಮಿ ಅಂಕಲಗಿ ಎಂಬ ಯುವ ವಕೀಲೆಗೆ ಫೋನ್ ಮಾಡಿ ವಿಷಯ ತಿಳಿಸಿದೆ. "ಸಂವಿಧಾನ ರಚನಾ ಸಭೆಯ ಚರ್ಚೆಗಳನ್ನು ಕುರಿತ ಐದು ಪುಸ್ತಕಗಳೂ ನಮ್ಮ ಆಫೀಸಿನಲ್ಲಿವೆ. ಅವನ್ನು ನೋಡಿ ನಿಮಗೆ ತಿಳಿಸುತ್ತೇನೆ" ಎಂದಳು ಆಕೆ. ಅರ್ಧ ಗಂಟೆಯ ನಂತರ ಆಕೆ ನೀಡಿದ ಮಾಹಿತಿ ಹೀಗಿತ್ತು:

"1949 ರ ಸೆಪ್ಟೆಂಬರ್ ಎಂಟನೇ ಮತ್ತು ಒಂಬತ್ತನೇ ತಾರೀಖು ನಡೆದ ಸಂವಿಧಾನ ರಚನಾ ಸಭೆಯಲ್ಲಿ ಚರ್ಚಿಸಿದ ವಿಷಯಗಳೆಂದರೆ ತೆರಿಗೆ ನಿಯಮಗಳು. ರಾಜ್ಯ ತೆರಿಗೆ, ಕೇಂದ್ರ ತೆರಿಗೆ ಕುರಿತ ಚರ್ಚೆಗಳು 10 ನೇ ತಾರೀಖಿನವರೆಗೂ ಸಾಗಿದವು. 10 ನೇ ತಾರೀಖು ಆಸ್ತಿ ಹೊಂದುವ ನೀತಿಗಳನ್ನು ಕುರಿತಂತೆ article 24 ರ ಬಗ್ಗೆ ಚರ್ಚೆಗಳಾದವು. ಅಂದು ಶನಿವಾರವಾದ್ದರಿಂದ ಸಭೆ ಮಧ್ಯಾಹ್ನ ನಿಂತಿತು. 11 ನೇ ತಾರೀಖು ಭಾನುವಾರವಾದ್ದರಿಂದ ಸಭೆ ಮತ್ತೆ 12 ನೇ ತಾರೀಖಿನಂದು ಸೇರುತ್ತದೆ. ಅವತ್ತೂ ಸಂಜೆ ನಾಲ್ಕು ಗಂಟೆಯ ತನಕ ಆಸ್ತಿ ಕುರಿತಂತೆ ಚರ್ಚೆ ನಡೆಯುತ್ತದೆ. ಆನಂತರ ಪ್ರಾದೇಶಿಕ ಭಾಷೆಗಳನ್ನು ಕುರಿತ ಚರ್ಚೆ ಆರಂಭವಾಗಿ ಅದು 13 ಮತ್ತು 14 ನೇ ತಾರೀಖಿನವರೆಗೂ ನಡೆಯುತ್ತದೆ. ಆಗಲೂ ಹೇಗೆ ಪ್ರಾದೇಶಿಕ ಭಾಷೆಗಳಿಗೆ ಮಾನ್ಯತೆ ಕೊಡಬೇಕು ಮತ್ತು ಹಿಂದಿಯನ್ನು ಯಾಕೆ ಹೇರಬಾರದು ಎಂಬುದರ ಬಗ್ಗೆಯೇ ಚರ್ಚೆ ನಡೆಯುತ್ತದೆ.

8 ರಿಂದ 14 ನೇ ತಾರೀಖಿನವರೆಗೂ ನಡೆದ ಚರ್ಚೆಗಳಲ್ಲಿ ಎರಡು ಮುಖ್ಯ ಅಂಶಗಳು ಇವೆ: ಮೊದಲನೆಯದಾಗಿ, ಸಂಸ್ಕೃತ ಭಾಷೆಯಲ್ಲಿ ಮಾತನಾಡಿದವರು ಬಿಹಾರದ ಗುಪ್ತನಾಥ್ ಸಿಂಗ್ ಎಂಬುವವರು. ಆಸ್ತಿ ಹೊಂದುವ ವಿಚಾರ ಕುರಿತಂತೆ ಸಮಾಜವಾದಿ ಸಂವಿಧಾನವನ್ನು ನಿರೂಪಿಸುವ ಕಾರ್ಯದಲ್ಲಿ ಎಲ್ಲರೂ ತೊಡಗಿರುವಾಗ ಅವರು ಮನುಶಾಸ್ತ್ರದಲ್ಲಿ ಹೇಗೆ ಬಂಡವಾಳಶಾಹಿ ಪರ ಸಿದ್ಧಾಂತಗಳು ಅಡಗಿವೆ ಎಂದು ವಿವರಿಸುತ್ತಾರೆ. ಎರಡನೆಯದು: ಅಂಬೇಡ್ಕರ್‌ರವರು ಸಂಸ್ಕೃತದ ಪರವಾಗಿ ಸಂಸ್ಕೃತದಲ್ಲಿ ಮಾತನಾಡುವುದಿರಲಿ, ಪ್ರಾದೇಶಿಕ ಭಾಷೆಗಳನ್ನು ಕುರಿತ ಚರ್ಚಾಸಭೆಗಳಲ್ಲಿ ಅವರು ಭಾಗವಹಿಸಿಯೇ ಇರಲಿಲ್ಲ!!"

ಇದು ಅಧಿಕೃತವಾಗಿ ದಾಖಲಾಗಿರುವ ಸತ್ಯ! ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ವರದಿ ಮಾಡಿತ್ತೆನ್ನಲಾದ ತಲೆ-ಬುಡ ಇಲ್ಲದ ಊಹಾಪೋಹವಲ್ಲ!

ಆದರೆ ಚಡ್ಡಿಗಳು ಎಂತಹ ಕುತಂತ್ರಿಗಳು ನೋಡಿ. ಒಂದೆಡೆ ಮನುಸ್ಮೃತಿಯೇ ನಮ್ಮ ಸಂವಿಧಾನವಾಗಬೇಕಿತ್ತು ಎಂದು ವಾದಿಸಿದ್ದ ಗೋಲ್ವಾಲ್ಕರ್ ಎಂಬ ದ್ವೇಷದ ಗುರುವಿನ ನೂರನೇ ಜನ್ಮೋತ್ಸವವನ್ನು 'ಹಿಂದೂ ಸಮಾವೇಶ' ಎಂದು ಆಚರಿಸುತ್ತಾರೆ. ಇನ್ನೊಂದೆಡೆ ದಲಿತರ ನಾಯಕ ಮತ್ತು ಆತ್ಮಪ್ರಜ್ಞೆಯಾಗಿದ್ದ ಅಂಬೇಡ್ಕರ್ ಅವರೇ ಸ್ವತಃ ಸಂಸ್ಕೃತದ ಪರವಾಗಿದ್ದರು ಎಂದು ಕಲ್ಪಿಸಿಕೊಂಡು ಸಭೆ ಏರ್ಪಡಿಸುತ್ತಾರೆ. ಇದನ್ನೆಲ್ಲ ಪೆದ್ದ ಶೂದ್ರರು, ದಲಿತರು ನಂಬುತ್ತಾರೆ. ಗೋಲ್ವಾಲ್ಕರ್‌ನ ಸಭೆಗಳಲ್ಲಿ ಶೂದ್ರರು ಭಾಗವಹಿಸಿದರೆ, ಚಡ್ಡಿಗಳ ಅಂಬೇಡ್ಕರ್ ಕಾರ್ಯಕ್ರಮಗಳಲ್ಲಿ ದಲಿತರು ಪಾಲ್ಗೊಳ್ಳುತ್ತಾರೆ.

ಇದು ಮೊದಲಿನಿಂದಲೂ ಪುರೋಹಿತಶಾಹಿಗಳು ಮಾಡಿಕೊಂಡು ಬಂದಿರುವ ಕುತಂತ್ರ. ಹಿಂದೊಮ್ಮೆ ಬುದ್ಧ ಕೂಡ ವಿಷ್ಣುವಿನ ಹನ್ನೊಂದನೇ ಅವತಾರ ಎಂದು ವಾದಿಸಿ ಆತನನ್ನು co-opt ಮಾಡಿಕೊಂಡಿದ್ದರು. ಈಗ ಬಸವಣ್ಣ, ಕನಕ, ಅಂಬೇಡ್ಕರ್‌ರಂತಹ ಹಿಂದುಳಿದ ಮತ್ತು ದಲಿತರ ನಾಯಕರನ್ನೇ co-opt ಮಾಡಿಕೊಳ್ಳುತ್ತಿದ್ದಾರೆ. ಇದನ್ನೆಲ್ಲ ನೋಡಿ ಪ್ರತಿಭಟಿಸಬೇಕಾದ ಜನರು ಬಸವಣ್ಣ ಪುರೋಹಿತಶಾಹಿಗಳನ್ನು ಲೇವಡಿ ಮಾಡಿದ್ದನ್ನು, ಕನಕನಿಗೆ ದೇಗುಲಕ್ಕೆ ಪ್ರವೇಶ ನೀಡದೆ ಹೊರಗೆ ನಿಲ್ಲಿಸಿದ್ದನ್ನು, "ನಾನು ಹಿಂದೂ ಆಗಿ ಹುಟ್ಟಿರಬಹುದು. ಆದರೆ ಹಿಂದೂ ಆಗಿ ಮಾತ್ರ ಸಾಯುವುದಿಲ್ಲ" ಎಂದು ಅಂಬೇಡ್ಕರ್ ಪ್ರತಿಭಟಿಸಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದನ್ನು ಶೂದ್ರರು, ದಲಿತರು ಮರೆಯುತ್ತಾರೆ.


ಹಿಂದೂ ಧರ್ಮವೆಂಬುದೇ ಇಲ್ಲ, ಬ್ರಿಟಿಷರು ಭಾರತಕ್ಕೆ ಬರುವವರೆಗೂ ಅದಕ್ಕೆ ಹೆಸರಾಗಲಿ ಅಥವಾ ಧರ್ಮ ಎಂಬ ಸ್ಥಾನವಾಗಲಿ ಇರಲಿಲ್ಲ, ಶ್ರೇಣೀಕೃತ ಜಾತಿ ವ್ಯವಸ್ಥೆಯೇ ಇವರ ಧರ್ಮ ಮತ್ತು ಅದರ ತಿರುಳೇ ಮಾನವ, ಮಹಿಳೆ, ದಲಿತ ವಿರೋಧಿಯಾದ ಮನುವಾದ ಎಂಬ ಸರಳ ಸತ್ಯವನ್ನು ನಮ್ಮ ಜನ ಅರ್ಥ ಮಾಡಿಕೊಳ್ಳುವುದೆಂದು?

ಮರೆಯುವ ಮುನ್ನ ಒಂದು ಮಾತು. ಇವತ್ತು ಹೇಗೆ ಅಂಬೇಡ್ಕರ್ ಪುರೋಹಿತಶಾಹಿಗಳ ಸಂಸ್ಕೃತ ಭಾಷೆ ಪರವಾಗಿದ್ದರು ಎಂದು ಚಡ್ಡಿಗಳು ವಾದಿಸಲು ಹೊರಟಿದ್ದಾರೆಯೋ, ಹಾಗೆಯೇ ಅವರು ತಮ್ಮವರ ಕಳಂಕಗಳನ್ನೂ ಅಷ್ಟೇ ಸುಲಭವಾಗಿ ಮರೆಮಾಚುತ್ತಾರೆ. ಉದಾಹರಣೆಗೆ, "ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕೆ ಹೋರಾಡುವ ಅಗತ್ಯವಿಲ್ಲ. ಹಿಂದೂ ಮಹಾಸಭಾದವರ್‍ಯಾರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಬಾರದು" ಎಂದು ಹೇಳಿದ್ದ ಸಾವರ್ಕರ್ ಎಂಬ ಹೇಡಿಯೇ ಚಡ್ಡಿಗಳ ಕಣ್ಣಲ್ಲಿ 'ವೀರ'ನಾಗುತ್ತಾನೆ. ಹಾಗೆಯೇ, ಸಾವರ್ಕರ್ ಸ್ಥಾಪಿಸಿದ್ದ ಹಿಂದೂ ಮಹಾಸಭಾದ ಸದಸ್ಯನಾಗಿ ಸ್ವಾತಂತ್ರ್ಯ ಸಂಗ್ರಾಮದಿಂದ ದೂರ ಉಳಿದಿದ್ದ ಮಾಜಿ ಪ್ರಧಾನಿ ವಾಜಪೇಯಿಯೂ ಸ್ವಾತಂತ್ರ್ಯ ಹೋರಾಟಗಾರನಾಗುತ್ತಾನೆ. ಸತ್ಯವನ್ನು ತಿರುಚುವುದರಲ್ಲಿ ಚಡ್ಡಿಗಳು ತಮ್ಮ ಅಘೋಷಿತ ಗುರು ಗೋಬೆಲ್ಸ್‌ನನ್ನೇ ಮೀರಿಸುತ್ತಿದ್ದಾರೆ!


* * * * * * *

2004 ರಲ್ಲಿ ಚುನಾವಣೆಗಳು ನಡೆದಾಗ ಲಕ್ನೋದಲ್ಲಿ ವಾಜಪೇಯಿಯ ಶಿಷ್ಯ ಲಾಲ್ಜಿ ಟಂಡನ್ ಎಂಬಾತ ತನ್ನ ಗುರುವಿನ ಹುಟ್ಟುಹಬ್ಬದಂದು ಸೀರೆ ಹಂಚುವ ಕಾರ್ಯಕ್ರಮವನ್ನು ಏರ್ಪಡಿಸಿ ಇಪ್ಪತ್ತಕ್ಕೂ ಹೆಚ್ಚು ಮಹಿಳೆಯರ ಪ್ರಾಣ ತೆಗೆದುಕೊಂಡಿದ್ದು ನೆನಪಿರಬೇಕಲ್ಲವೆ?

ಈಗ ಅದೇ ಟಂಡನ್ ಅಲ್ಪಸಂಖ್ಯಾತರ ವಿರುದ್ಧ ವಿಷ ಕಾರುವ ಸಿಡಿಯನ್ನು ಚುನಾವಣಾ ಪ್ರಚಾರದ ತಂತ್ರವಾಗಿ ಅಧಿಕೃತವಾಗಿ ವಿತರಿಸಿ ಮತ್ತೊಮ್ಮೆ ಗದ್ದಲವೆಬ್ಬಿಸಿದ್ದಾನೆ. ಆ ಸಿಡಿಯಲ್ಲೇನಿದೆ ಎಂಬುದರ ಬಗ್ಗೆ ಇದೇ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಆ ಸಿಡಿಯಲ್ಲಿ ಮುಸಲ್ಮಾನರು ಭಯೋತ್ಪಾದಕರೆಂದೂ, ಗೋಹತ್ಯೆ ಮಾಡುವವರೆಂದೂ, 'ಕುನ್ನಿ'ಗಳಿಗೆ ಜನ್ಮ ಕೊಡುವವರೆಂದೂ, ಹಿಂದೂ ಹುಡುಗಿಯರನ್ನು ಅಪಹರಿಸಿ ಬಲವಂತವಾಗಿ ಮತಾಂತರಗೊಳಿಸುವವರೆಂದೂ ಬಿಂಬಿಸಲಾಗಿದೆ.



ಲಾಲ್ಜಿ ಟಂಡನ್



ವುಲ್ಫೋವಿಟ್ಜ್

ಅಂದಹಾಗೆ ಹಿಂದೂತ್ವವಾದಿ ಸಿದ್ಧಾಂತದ ಬಜೆಪಿಯಲ್ಲಿ ನಾಯಕ ಪಟ್ಟವನ್ನು ಏರಿರುವ ಶಾನವಾಜ್ ಹುಸೇನ್, ಮುಖ್ತಾರ್ ಅಬ್ಬಾಸ್ ನಖ್ವಿ ಮತ್ತು ಸಿಕಂದರ್ ಭಕ್ತ್ (ಈತ ಈಗ ದಿವಂಗತನಾಗಿದ್ದಾನೆ) ಎಂಬ ಮೂವರು ಮುಸಲ್ಮಾನರೂ ಹಿಂದೂ ಮಹಿಳೆಯರನ್ನು ಮದುವೆ ಆಗಿರುವವರು. ಅಂದರೆ ಆ ಕೋಮುದ್ವೇಷ ಭರಿತ ಸಿಡಿಯ ಪ್ರಕಾರ ಈ ಮೂವರೂ ಬಜೆಪಿ ನಾಯಕರು ತಾವು ಹಿಂದೂಗಳಂತೆ ನಟಿಸಿ, ಹಿಂದೂ ಹುಡುಗಿಯರನ್ನು ವಂಚಿಸಿ, ಅವರನ್ನು ಬಲಾತ್ಕಾರದಿಂದ ಮತಾಂತರಗೊಳಿಸಿ, ಬುರ್ಖಾಗೆ ದೂಡಿದ ದುಷ್ಟರು! ಹೇಗಿದೆ ಬಜೆಪಿಯ ಲಾಜಿಕ್?!

* * * * * * *

ಇವತ್ತು ಭಾರತ ಸೇರಿದಂತೆ ಜಗತ್ತಿನ ಬಡದೇಶಗಳ ಆರ್ಥಿಕ ನೀತಿಗಳನ್ನು ನಿರ್ಧರಿಸುತ್ತಿರುವುದು ವಿಶ್ವ ಬ್ಯಾಂಕ್ ಮತ್ತು ಐಎಂಎಫ್. ಯಾವ ಯೋಜನೆಗೆ ಎಷ್ಟು ಹಣ ಎಂಬಲ್ಲಿಂದ ಹಿಡಿದು ಎಷ್ಟು ಜನಕ್ಕೆ ಪಡಿತರ ಚೀಟಿ ಹಂಚಬೇಕೆಂದು ನಿರ್ಧರಿಸುತ್ತಿರುವವರು ಇದೇ ಸಂಸ್ಥೆಯನ್ನು ನಡೆಸುತ್ತಿರುವ ಅಧಿಕಾರಿಗಳು.

ಆದರೆ ಆ ಅಧಿಕಾರಿಗಳೇ ಎಷ್ಟು ನೀತಿವಂತರು, ಸಾಚಾಗಳು? ಇದಕ್ಕೆ ವಿಶ್ವ ಬ್ಯಾಂಕಿನ ಅಧ್ಯಕ್ಷ ಪಾಲ್ ವುಲ್ಫೋವಿಟ್ಜ್ ಈಗ ಸಿಲುಕಿಕೊಂಡಿರುವ ಹಗರಣವೇ ಉದಾಹರಣೆ. ಈ ವುಲ್ಫೋವಿಟ್ಜ್ ಸಾಮಾನ್ಯ ವ್ಯಕ್ತಿಯಲ್ಲ. ಈತ ಪೆಂಟಗಾನ್‌ನ ನಿರ್ದೇಶಕನಾಗಿದ್ದಾಗ ಇರಾಕಿನ ಮೇಲೆ ಅಮೆರಿಕ ನಡೆಸಿದ ದಾಳಿಯ ಸೂತ್ರಧಾರನಾಗಿದ್ದ. ಹಾಗೇ ಇರಾಕನ್ನು ಆಕ್ರಮಿಸಿ, ಸಾವಿರಾರು ಜನರ-ಅಮೆರಿಕನ್ನರೂ ಸೇರಿದಂತೆ-ಸಾವಿಗೆ ಕಾರಣನಾದ ವುಲ್ಫೋವಿಟ್ಜ್ ಅಧ್ಯಕ್ಷ ಜಾರ್ಜ್ ಬುಷ್‌ಗೆ ಆಪ್ತಮಿತ್ರ. ಆ ಕಾರಣದಿಂದಾಗಿಯೇ ಆತನಿಗೆ ವಿಶ್ವ ಬ್ಯಾಂಕಿನ ಅಧ್ಯಕ್ಷ ಸ್ಥಾನವನ್ನು ಬುಷ್ ನೀಡಿದ.

ವಿಶ್ವ ಬ್ಯಾಂಕನ್ನು ಸೇರುತ್ತಿದ್ದಂತೆ ವುಲ್ಫೋವಿಟ್ಜ್ ಭ್ರಷ್ಟಾಚಾರದ ವಿರುದ್ಧ ಕೆಂಡಕಾರಿದ, ಭಾರತದಂತಹ ದೇಶಗಳಿಗೆ ಹಣ ನೀಡುವುದಿಲ್ಲ ಎಂದು ಗುಡುಗಿದ. ಆದರೆ ಅದೇ ಹೊತ್ತಿಗೆ ಈತ ಏನು ಮಾಡಿದ ಗೊತ್ತೆ? ಅದೇ ವಿಶ್ವ ಬ್ಯಾಂಕಿನಲ್ಲಿ ಶಾಹಾ ರಿಜಾ ಎಂಬ ಈತನ ಪ್ರೇಯಸಿ ಕೆಲಸ ಮಾಡುತ್ತಿದ್ದಳು. ತಾವಿಬ್ಬರೂ ಒಂದೇ ಕಡೆ ಕೆಲಸ ಮಾಡುವುದು ಸರಿಯಲ್ಲ ಎಂದು ಆಕೆಯನ್ನು ಮತ್ತೊಂದು ವಿಭಾಗಕ್ಕೆ ವರ್ಗಾಯಿಸಿದ. ಆದರೆ ಹಾಗೆ ವರ್ಗಾಯಿಸುವಾಗ ಆಕೆಯ ಸಂಬಳವನ್ನು ಮತ್ತು ಇತರೆ ಸೌಲಭ್ಯಗಳನ್ನು ಎರಡು ಪಟ್ಟು ಹೆಚ್ಚಿಸಿದ!

ನೈತಿಕತೆ ಎಂದೆಲ್ಲಾ ಪೋಸ್ ಕೊಡುತ್ತಾ ಭ್ರಷ್ಟಾಚಾರದ ವಿರುದ್ಧ ಗುಡುಗಿದ್ದ ವುಲ್ಫೋವಿಟ್ಜ್ ಸ್ವತಃ ಅನೈತಿಕ ವರ್ತನೆಯಲ್ಲಿ ಮತ್ತು ಭ್ರಷ್ಟಾಚಾರದಲ್ಲಿ ತೊಡಗಿದ್ದ. ಈಗ ಈತ ರಾಜೀನಾಮೆ ನೀಡಬೇಕೆಂದು ಬ್ಯಾಂಕಿನ ಸದಸ್ಯ ದೇಶಗಳು ಒತ್ತಾಯಿಸುತ್ತಿದ್ದರೆ, ಅವನಿಗೆ ಬೆಂಬಲ ಸೂಚಿಸಿ ಹೆಗಲು ಕೊಟ್ಟು ನಿಂತಿರುವವನು ಯಾರು ಗೊತ್ತಾ? ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಷ್!

-ಗೌರಿ ಲಂಕೇಶ್

ಯಮಳ ಪ್ರಶ್ನೆ

ಸ್ಥೇ: ಮೇಲಿನ ಲೋಕ

ಲಂಕೇಶ್, ಡಿ.ಆರ್. ನಾಗರಾಜ್ ವಿಸ್ಕಿ ಹೀರುತ್ತಾ ಕುಳಿತಿದ್ದಾರೆ. ಆಗ ತೇಜಸ್ವಿ ಆಗಮನ.

ಲಂಕೇಶ್: (ಕನ್ನಡಕ ಸರಿ ಮಾಡಿಕೊಂಡು ನೋಡುತ್ತಾ) ಇದೇನ್ರಿ ತೇಜಸ್ವಿ, ನೀವಿನ್ನೂ ಇಪ್ಪತ್ತು ವರ್ಷ ಲೇಟಾಗಿ ಬರ್ತೀರಾ ಅನ್ಕೊಂಡಿದ್ವಲ್ರಿ. strange fellow ಕಣ್ರೀ ನೀವು... ಛೇ...

ತೇಜಸ್ವಿ: ನಾವು ವಿನಾಕಾರಣ ಯಾರನ್ನೂ ಸಾಯಿಸಬಾರದು ಕಣ್ರಿ. ಕಾಯ್ಲೆ ಬಿದ್ದು ಕೆಮ್ಮೊಂಡು ಕ್ಯಾಕರಿಸಿಕೊಂಡು ಸಾಯೋದು ಏನ್ ಚೆಂದಾ? ನನ್ ಕೆಲ್ಸ ಮುಗೀತು ಅನ್ನಿಸ್ತು, ಅದ್ಕೆ ಚಕ್ಕಂತ ಜಾಗ ಖಾಲಿ ಮಾಡಿಬಟ್ಟೆ.

ಡಿ.ಆರ್. (ಏನನ್ನೋ ಧ್ಯಾನಿಸುತ್ತಾ) ಕನ್ನಡ ಸಾರಸ್ವತ ಲೋಕದೊಳಗೆ ನಿಮ್ಮ ಆಗಮನ-ನಿರ್ಗಮನ ಎರಡೂ ವಿಸ್ಮಯ ತೇಜಸ್ವಿಯವರೆ. ಯುಟೋಪಿಯಾ ದೇಶದ ಚುಂ ಬಿಟ್ಸಂ ಪುಂ ಎಂಬ ದಾರ್ಶನಿಕ ಏನ್ ಹೇಳಿದ್ದಾನೆ ಅಂದರೆ....

ಲಂಕೇಶ್: (ಬೇಸರದಿಂದ) ಲೇಯ್ ಕೊರೀಬೇಡಾ ಸ್ವಲ್ಪ ಸುಮ್ನಿರಯ್ಯ....

ತೇಜಸ್ವಿ: (ಸುತ್ತಾಮುತ್ತಾ ಗಮನಿಸುತ್ತಾ) ಅದ್ಸರಿ, ಈಗ ನಿಮ್ಮನ್ನ ಸ್ವರ್ಗಕ್ಕಾಕಿದ್ದಾರೊ ಇಲ್ಲಾ ನರಕಕ್ಕೊ!?

ಲಂಕೇಶ್: (ಲವಲವಿಕೆಯಿಂದ ನಗುತ್ತ) ನರಕದಲ್ಲಿದೀವಿ ಕಣ್ರಿ.

ತೇಜಸ್ವಿ: ನಿಮಗೆ ಸರಿಯಾದ ಶಾಸ್ತಿಯಾಯ್ತು ಬಿಡಿ. ಭೂಲೋಕದಲ್ಲಿದ್ದಾಗ ಎಲ್ರೂನೂ ಬೈಯ್ಕೊಂಡು ತಿರುಗ್ತಿದ್ರಲ್ಲ ಇನ್ನೇನಾಗುತ್ತೆ?

ಲಂಕೇಶ್: ಸುಮ್ನಿರ್ರಿ, ಈಗ ನೀವು ಬಂದಿರೋದೂ ನರಕಕ್ಕೇನೆ ತಿಳ್ಕೊಳಿ.

ತೇಜಸ್ವಿ: (ಕಂಗಾಲಾಗಿ) ಆಂ... ನಾನೇನ್ ತಪ್ಪು ಮಾಡ್ದೇರಿ? ಈ ಮುಂಡೇಗಂಡರಿಗೆ ಬುದ್ಧಿ ಭಾಷೆ ಇದೆಯಾ? ಯಾವನಿದ್ದಾನೆ ಇಲ್ಲಿ, ಕರೀರಿ ಅವನ್ನಾ.

ಯಮಧೂತ: ನೀವು ಮತ್ತೆ ಕಿವಿ ನಾಯಿ ಬೇಕಾದಷ್ಟು ಕಾಡುಪ್ರಾಣಿಗಳನ್ನು ಶಿಕಾರಿ ಮಾಡಿ ಸ್ವಾಹ ಮಾಡಿದ್ದಕ್ಕೆ ನರಕಕ್ಕೆ ಬಂದಿದ್ದೀರಿ ಸಾರ್.

ತೇಜಸ್ವಿ: (ಧೂತನ ಮಾತು ನಿರ್ಲಕ್ಷಿಸಿ ಖುಷಿಯಾಗಿ) ಕಿವಿನೂ ಇಲ್ಲೇ ಇದಾನಾ ಎಲ್ಲಿ ಎಲ್ಲಿ ತೋರುಸ್ರಿ.....

ಲಂಕೇಶ್: ಮೊನ್ನೆ ಇಲ್ಲೇ ಎಲ್ಲೋ ನೋಡ್ದೆ. ಕಳೆದ ತಿಂಗಳು ನಮ್ಮ ತೋಟದ ನಾಯಿ ಚಿನ್ನಿನೂ ಇಲ್ಲಿಗೇ ಬಂದಳು. ಅವಳ ಜೊತೆಲೇ ಓಡಾಡುತ್ತಿರಬಹುದು . ಬಿಡಿ.

ಧೂತ: ಅವೆರಡೂ ಕಳೆದೋಗಿವೆ ಸಾರ್. ಮೊನ್ನೆ ತಾನೆ 10 ಸಾವಿರ ನಾಯಿಗಳು ಒಟ್ಟಿಗೆ ಬಂದ್ವಲ್ಲಾ, ಆಗ......

ತೇಜಸ್ವಿ: ಇದೇನಯ್ಯ ವಿಚಿತ್ರ, ನೆಟ್ಟಗೆ ಒದರು.

ಧೂತ: ಬೆಂಗಳೂರು ಸಿಟಿ ಕಾರ್ಪೊರೇಷನ್ನಿನವರು ಒಂದೇ ಸಾರಿ ಅಷ್ಟು ನಾಯಿಗಳನ್ನು ಕಳಿಸಿಬಿಟ್ಟರು. ನಮ್ಗೂ ಫಜೀತಿಯಾಗಿ ಬಿಟ್ಟದೆ.

ತೇಜಸ್ವಿ: ಥೂತ್ ದರಿದ್ರ ಜನ, ಹೋಗಲಿ ಇಲ್ಲೇಲಾದ್ರು ಮೀನಿಗೆ ಗಾಳ ಹಾಕೋಕೆ ಜಾಗ ಇದೆಯಾ?

ಡಿ.ಆರ್. (ತುಂಟತನದಿಂದ): ಗಾಳ ಹಾಕಬಹುದು. ಆದ್ರೆ ಮೀನು ಸಿಗಲ್ಲ, ಲಕ್ ಇದ್ರೆ ಮುತ್ತು, ರತ್ನ ಸಿಗಬಹುದು. ಟ್ರೈ ಮಾಡಿ.

ತೇಜಸ್ವಿ: ....!!!

ಲಂಕೇಶ್: ರತ್ನ ಅಂದ್ರೆ ಸ್ತ್ರೀರತ್ನ ಅಂತಾ, ಮುತ್ತು ಅಂದ್ರೆ ಅದೇ ಡಿಪಾರ್ಟ್‌ಮೆಂಟ್‌ದು ಕಣ್ರೀ ತೇಜಸ್ವಿ.

ತೇಜಸ್ವಿ: ಅಪಾಪೋಲಿಗಳು ನೀವು, ನರಕಕ್ಕೆ ಹಾಕಿದ್ರೂ ನಿಮ್ ಬುದ್ಧಿ ಬಿಡಲ್ವಲ್ಲಾ ಏನ್ ಕೆಟ್ಟ ಜನಾರಿ ನೀವು ಮಾನ ಮರ್ಯಾದೆ ಇಲ್ದೋರು.

ಲಂಕೇಶ್: ರೀ ತೇಜಸ್ವಿ ಕನ್ನಡ ಪೇಪರ್‌ಗಳೆಲ್ಲಾ ನಿಮ್ ಬಗ್ಗೆ ಏನೇನ್ ಬರ್ದಿದ್ದಾರೆಂತಾ ನೋಡಿ, ಎಲ್ರೂ ದೊಡ್ಡ ನ್ಯೂಸ್ ಮಾಡಿಬಟ್ಟಿದ್ದಾರೆ.

ತೇಜಸ್ವಿ: (ಎಲ್ಲಾ ದಿನಪತ್ರಿಕೆ, ವಾರಪತ್ರಿಕೆ ತಿರುವಿ ಹಾಕಿ) ಏನ್ರಿ ಇದು ಅಸಯ್ಯ?

ಡಿ.ಆರ್.: ಯಾಕೆ ಏನಾಯ್ತು ಸಾರ್?

ತೇಜಸ್ವಿ: (ಬೇಸರದಿಂದ) ನಾನೇನೊ ಬರೀ ಮೀನು ಹಿಡೀತಾ ಮೀನು ಮಾರ್‍ತಾ ಬದುಕಿದೆ ಅನ್ನೋ ಥರ ಎಲ್ರೂ ಅದೊಂದನ್ನೆ ಬರ್ದಿದಾರೆ. ನನ್ನ ಸಾಹಿತ್ಯ ಜೀವನ, ಬೇರೆ ಕೆಲಸ ಎಲ್ಲಾ ವೇಸ್ಟ್ ಆಯ್ತಲ್ರೀ.

ಡಿ.ಆರ್.: ಬೇಜಾರ್ ಮಾಡಿಕೋಬೇಡಿ ಸಾರ್. ಇಲ್ನೋಡಿ ವಾರಪತ್ರಿಕೆ ಸಂಪಾದಕನೊಬ್ಬ ನೀವು ಕರ್ನಾಟಕ ಪೂರ್ತಿ ಓಡಾಡುತ್ತಾ ಎಲ್ಲಾ ಚಳವಳಿಗಳ ಬಗ್ಗೆ ಅಧ್ಯಯನ ಮಾಡಿದ್ದಿರಿ ಅಂತಾ ಬರೆದಿದ್ದಾನೆ.

ಲಂಕೇಶ್: ಯಾವನ್ರಿ ಅವನು ಈಡಿಯಟ್, ನಂ ಪ್ರಗತಿ ರಂಗಕ್ಕೇ ತೇಜಸ್ವಿ ಬರ್ತಿರಲಿಲ್ಲ, ಅವನ್ಯಾರೋ ನಿನ್ನ ಶಿಷ್ಯಾನೇ ಇರಬೇಕು!

ತ ಮಾ ಷಿ ತೇಜಸ್ವಿ ಇಲ್ಲಿಂದ ನಿರ್ಗಮಿಸಿದ ಮೇಲೆ 'ಅಲ್ಲಿ' ಅವರನ್ನು ದುಗುಡದಿಂದ ಬರಮಾಡಿಕೊಂಡ ಲಂಕೇಶ್, ಡಿ.ಆರ್.ನಾಗರಾಜ್ ಹಾಗೂ ನಂಜುಂಡಸ್ವಾಮಿ ನಡೆಸಿರಬಹುದಾದ ತಮಾಷಿ ಹರಟೆಯ ವಿವರವು.........



ಡಿ.ಆರ್.: ಇಲ್ನೋಡಿ ಸಾರ್. ತಿಪಟೂರಿನ ದಲಿತ ಕವಿಯೊಬ್ಬ ಭಾರತೀಯ ಕಾವ್ಯ ಮೀಮಾಂಸೆ ಹಾಗೂ ತೇಜಸ್ವಿ ಅಂತಾ ಏನೋ ಬರೆದಿದ್ದಾನೆ.

ಲಂಕೇಶ್: ಮೀನು, ಮಾಂಸ ಅಂತಿರಬಹುದು ಸರಿಯಾಗಿ ಓದಯ್ಯ.

ಡಿ.ಆರ್.: ಮೀನು ಮಾಂಸ ಅಲ್ಲಾ, ಮೀಮಾಂಸೆ. ಮೀಮಾಂಸೆ ಅಂತಾನೆ ಇದೆ. ಇನ್ನು ಮೇಷ್ಟ್ರ ಪೇಪರಲ್ಲಿ ತೇಜಸ್ವಿ ಜುಗಾರಿ ಕ್ರಾಸ್ ಒಡನಾಡಿ ಅಂತಾ ಹೆಡ್ಡಿಂಗ್ ಹಾಕಿದಾರೆ.

ತೇಜಸ್ವಿ: ಇದೇನ್ರಿ ಅನ್ಯಾಯ, ನಾನೇನು ಸ್ಮಗಲಿಂಗ್ ಮಾಡ್ತಿದ್ನಾ?

ಲಂಕೇಶ್: ಅವ್ರಿಗೆ ನಾನೇನು ಅಂತಾನೆ ಅರ್ಥ ಆಗಿಲ್ಲ, ಇನ್ನು ನಿಮ್ ಬಗ್ಗೆ ಏನ್ ಗೊತ್ತಿರುತ್ತೆ ಬಿಡಿ.

ತೇಜಸ್ವಿ: (ಪೆಚ್ಚಾಗಿ) ಹೋಗ್ಲಿ ಬೇರೆ ಏನು ಬರ್ದಿದ್ದಾರೆ ಹೇಳಿ ನೋಡೋಣ.

ಡಿ.ಆರ್.: ನಿಮ್ ಬಗ್ಗೆ ಬರ್ದಿರೊ ಅಷ್ಟೂ ಜನ ನೀವು ಅವ್ರಿಗೆಲ್ಲಾ ಹೆಂಗೆಂಗ್, ಯಾವಾಗ್ಯಾವಾಗ ಬಯ್ದಿದ್ರಿ ಅಂತಾ ಡೇಟ್, ಟೈಂ ಸಮೇತ ದಾಖಲಿಸಿದ್ದಾರೆ ಸಾರ್.

ತೇಜಸ್ವಿ: ಲಂಕೇಶ್, ಮೊದ್ಲು ಆ ಪೇಪರ್‌ಗಳನ್ನು ಹರಿದೆಸಿರಿ. ಇಲ್ಲಿನೋರ ಕಣ್ಣಿಗೇನಾದ್ರೂ ಬಿದ್ರೆ ನನ್ ಶಿಕ್ಷೆ ಜಾಸ್ತಿಯಾಗಿ ಫಜೀತಿ ಆಗೋಗುತ್ತೆ ಆಮೇಲೆ.

ಲಂಕೇಶ್: (ಗಂಭೀರವಾಗಿ) ತೇಜಸ್ವಿ ತಮಾಷೆ ಸಾಕು, ನೀವೊಂದು ವಿಚಾರ ಗಮನಿಸಿ ನೋಡಿ. ನಂ ಕನ್ನಡ ಸಾಹಿತಿ, ಬುದ್ಧಿಜೀವಿಗಳ ತಲೇಲಿ ಬುದ್ಧಿ ಬದಲು ಬರೀ ಲದ್ದಿ ಇದೆ ಅನ್ನಿಸಲ್ವಾ?

ತೇಜಸ್ವಿ: ಯಾಕೆ?

ಲಂಕೇಶ್: ನಾನು ಮುಖಸ್ತುತಿಗೆ ಹೇಳ್ತಾಯಿಲ್ಲ, ನೀವು ನಮ್ಮ ಅತ್ಯುತ್ತಮ ಬರಹಗಾರರಲ್ಲಿ ಒಬ್ಬರಾಗಿದ್ದವರು. ನೀವು ನಮ್ಮ ತರ ಸರ್ಕಾರದವರ ಜೊತೆ ಜಗಳಕ್ಕೆ ಬೀಳ್ತಿರಲಿಲ್ಲ, ಅದು ಬಿಡಿ. ಆದರೆ ನಾವೆಲ್ಲಾ ಹೊಟ್ಟೆಕಿಚ್ಚು ಪಡುವ ರೀತೀಲಿ ಚೆನ್ನಾಗಿ ಬದುಕು ಸವಿಯುತ್ತಾ ವಿಭಿನ್ನವಾಗಿ ಬರೆದವರು ನೀವು. ಆದ್ರೆ ಈಗ ಅಲ್ಲಿರೋ ಒಬ್ಬನಾದ್ರೂ ಒಂದೇ ಒಂದು ಅರ್ಥಪೂರ್ಣವಾದ ಲೇಖನ ಬರೆದಿಲ್ವಲ್ಲ.

ಡಿ.ಆರ್: ಸಾರ್, ಪ್ರತಿಯೊಬ್ಬರು ನಿಮ್ಮನ್ನು ಮೊದಲು ಭೇಟಿಯಾಗಿದ್ದು ಆಮೇಲೆ ಕೊನೆ ಸಾರಿ ನೋಡಿದ್ದು ಯಾವಾಗ ಅಂತ ಬರೆದಿದ್ದಾರೆ. ದುರ್ಬೀನು ಹಾಕಿ ಹುಡುಕಿದರೂ ಅಲ್ಲಿ ನಮಗೆ ಅಸಲಿ ತೇಜಸ್ವಿ ಸಿಗಲೇ ಇಲ್ಲ.

ತೇಜಸ್ವಿ: (ಬೇಸರದಿಂದ) ಹೋಗ್ಲಿ ಬಿಡಿ. ಆ ಕಿರೀಟ ಹಾಕ್ಕೊಂಡು ನಾನೇನ್ ರಾಜ್ಯ ಆಳಬೇಕಿತ್ತಾ?

ಲಂಕೇಶ್: ಪ್ರಶ್ನೆ ಅದಲ್ಲ, ನಾವು ವಿಶ್ವಾಸ ಪ್ರೀತಿಯಿಂದ ಬೆಳೆಸಿದ ಜನಕ್ಕೇ ನಾವು ಅರ್ಥ ಆಗಲಿಲ್ಲಾ ಅಂದರೆ ಇನ್ನು ಸಾಮಾನ್ಯ ಜನರಿಗೆ ನಮ್ ಬಗ್ಗೆ ಇನ್ಯಾವ ಕಲ್ಪನೆ ಬಂದಿರುತ್ತೆ ಅಂತಾ.

ಡಿ.ಆರ್.: (ಧ್ಯಾನ ಮುದ್ರೆಯಲ್ಲಿ) ನನಗನ್ನಿಸುತ್ತೆ ಇವತ್ತಿನ ನಮ್ಮ ಇಡೀ ಕನ್ನಡ ಸಾಹಿತಿ, ಬುದ್ಧಿಜೀವಿಗಳಿಗೆ ಒಂಥರಾ ಅಸ್ಮಿತೆ ಕವಿದಿದೆ ಅಂತಾ. ಏನನ್ನೂ ವಿಶ್ಲೇಷಿಸಕ್ಕಾಗದ ಬರಡು ಸ್ಥಿತಿಗೆ ತಲುಪಿದ್ದಾರೆ ಎಲ್ರೂ.

ತೇಜಸ್ವಿ: (ರೇಗುತ್ತಾ) ಅವಿವೇಕಿಗಳು ಅಂತಾ ಒಂದು ಪದದಲ್ಲಿ ಹೇಳೋದಕ್ಕೆ ಎಷ್ಟೊಂದು ಮಾತು ಖರ್ಚು ಮಾಡ್ತಿಯಯ್ಯ ನೀನು.

ಡಿ.ಆರ್.: ಸಾರ್, ಆ ಕಡೆ ಸ್ವರ್ಗದಲ್ಲಿ ಕುವೆಂಪು ಇದಾರೆ ನೋಡ್ತೀರಾ.

ತೇಜಸ್ವಿ: (ಕ್ಷಣ ಯೋಚಿಸಿ) ಬೇಡಾ ಬಿಡಯ್ಯ ಅವರ ಪಾಡಿಗೆ ಅವರು ನೆಮ್ಮದಿಯಾಗಿರ್ಲಿ ಅವರಿಗಾದರೂ ಸ್ವರ್ಗದಲ್ಲಿ ಜಾಗ ಸಿಕ್ತಲ್ಲಾ ಸಾಕು ಬಿಡಿ.

ಲಂಕೇಶ್: (ತುಂಟ ನಗು ಬೀರುತ್ತಾ) ಅಸ್ಖಲಿತ ಬ್ರಹ್ಮಚಾರಿಯಾಗಿದ್ದವರಲ್ಲಾ ಅವರು, ಅಂತವರಿಗೆಲ್ಲಾ ಸ್ವರ್ಗ ದಲ್ಲಿ ಸೀಟ್ ಗ್ಯಾರಂಟಿ ಅಂತಾ ರಾಮಕೃಷ್ಣ ಆಶ್ರಮದವರು ರೂಲ್ಸ್ ಮಾಡಿದ್ದಾರಂತಲ್ಲಾ.

ತೇಜಸ್ವಿ: (ಕಸಿವಿಸಿಯಿಂದ) ಆ ವಿಚಾರ ಬಿಡಿ, ಎಲ್ಲಿ ನಂಜುಂಡಸ್ವಾಮಿ?

ಲಂಕೇಶ್: (ಸಿಗರೇಟ್ ಹಚ್ಚುತ್ತಾ) ಯಾವ್ದೊ ಭಾಷಣ ಇದೆ ಅಂತಾ ಹೋದ್ರು, ಇನ್ನೇನು ಬರ್‍ತಾರೆ.

ಡಿ.ಆರ್.: ಸರ್ಕಾರಿ ಅಧಿಕಾರಿಗಳನ್ನು ಕಂಬಕ್ಕೆ ಕಟ್ಟಿ ಒಡಿಸ್ತೀನಿ ಅಂದಿದಕ್ಕೆ ಅವರ್‍ನೂ ನಂಜೊತೇನೇ ಇರಿಸಿದ್ದಾರೆ.

ತೇಜಸ್ವಿ: ಅದ್ಸರಿ ಇಲ್ಲಿರೋಕೆ ನೀವೆಂಗೆ ಒಪ್ಕೊಂಡ್ರಿ? ಜಗಳಾ ಆಡಬೇಕಿತ್ತು.

ಲಂಕೇಶ್: ನಾನ್ ಬಿಡ್ತೀನಾ. ಆದ್ರೆ ನಾವ್ ಒಬ್ಬೊಬ್ಬರೇ ಇದ್ದಾಗ ಮಾಡಿರೋ ತಪ್ಪುಗಳು ಸೈತ ಇವ್ರಿಗೆ ಹೇಗೊ ಗೊತ್ತಾಗಿತ್ತು. ಆಮೇಲೆ ಅವ್ರೂನೂ ನಮಗೆ ಕೆಲವು ಫೆಸಿಲಿಟಿ ಕೊಡ್ತಿವಿ, ನರಕಕ್ಕೆ ಹೋಗಿರಿ ಅಂದ್ರು. ಹಾಳಾಗಿ ಹೋಗ್ಲಿ ಅಂತಾ ಬಂದುಬಿಟ್ವಿ.

ತೇಜಸ್ವಿ: (ಪಕ್ಕದ ಸ್ವರ್ಗದ ಕಡೆ ನೋಡಿ ಆಶ್ಚರ್ಯದಿಂದ) ರೀ ಲಂಕೇಶ್ ಅವ್ನ ಜೆ.ಎಚ್. ಪಟೇಲ ಅಲ್ವಾ, ಆ ಪೋಲಿ ಮುಂಡೆಗಂಡ ಅದು ಹೇಗೆ ಸ್ವರ್ಗಕ್ಕೆ ಹೋದ.

ಡಿ.ಆರ್.: ಅದೆಲ್ಲಾ ಅನುಸಂಧಾನ ಸಾರ್. ಪಟೇಲ್ರು ರೌರವ ನರಕಕ್ಕೇ ಹೋಗಬೇಕಿತ್ತು, ಆದ್ರೆ ಅವರು ರಂಭೆ ಊರ್ವಶಿಯರು ಎಲ್ಲಿರ್ತಾರೊ ನಾನೂ ಅಲ್ಲೇ ಇರ್ತೀನಿ ಅಂತಾ ಹಠಾ ಮಾಡಿದ್ರಂತೆ. ಹಾಗಂತ ರಂಭೇನ ಪಟೇಲ್ರ ಜತೆ ನರಕಕ್ಕೆ ಕಳಿಸಕ್ಕಾಗುತ್ತಾ!

ತೇಜಸ್ವಿ: (ಕುತೂಹಲದಿಂದ) ಆಮೇಲೇನಾಯ್ತು?

ಡಿ.ಆರ್.: ಏನಿಲ್ಲ, ಸ್ವರ್ಗದಲ್ಲಿರಬೇಕಿದ್ದ ಶಾಂತವೇರಿ ಗೋಪಾಲಗೌಡ್ರನ್ನ ಪಟೇಲರು ಹೋಗಬೇಕಿದ್ದ ನರಕಕ್ಕೆ ಟ್ರಾನ್ಸ್‌ಫರ್ ಮಾಡಿ ಆ ಖಾಲಿ ಜಾಗಕ್ಕೆ ಪಟೇಲ್ರು ತೂರಿಕೊಂಡು ಈಗ ಇಲ್ಲೂ ಸ್ವರ್ಗ ಸುಖ ಅನುಭವಿಸ್ತಾ ಇದ್ದಾರೆ. ಎಲ್ಲಾ adjustment ಇಲ್ಲೂ ನಡಿತದೆ ಇವೆಲ್ಲಾ ನೋಡ್ತಿದ್ರೆ ಮೇಷ್ಟ್ರು ಇಲ್ಲೂ ಒಂದು ಪೇಪರ್ ಶುರು ಮಾಡಿ ಎಲ್ರಿಗೂ ಉಗೀಲಿ ಅನ್ಸುತ್ತೆ.

ಲಂಕೇಶ್: ಓ ಯಸ್ ನಾನ್ ರೆಡಿ. ತೇಜಸ್ವಿ ನೀವೂ ಬರೀತಿರೇನ್ರಿ?

ತೇಜಸ್ವಿ: (ಯೋಚಿಸಿ) ಕೊನೆಯದಾಗಿ ಒಂದು ಸಾರಿ ಎಲ್ರಿಗೂ ಬೈಯ್ಬೇಕು ಅನ್ನಿಸ್ತಿದೆ. ಅದನ್ನೇ ಬರ್ಕೋದ್ತೀನಿ.

ಲಂಕೇಶ್: ಯಾರನ್ನ ಏನಂತ ಬೈಯ್ತಿರಿ, ಆಮೇಲೆ ಮಾನನಷ್ಟ ಕೇಸಾದ್ರೆ ಓಡಾಡೋನ್ಯಾವನು?

ತೇಜಸ್ವಿ: ಹೆದರ್‍ಕೊಬ್ಯಾಡಿ, ಮಾನವಂತರ್‍ಯಾರಿಗೂ ನಾನು ಬೈಯಲ್ಲ, ನನ್ನ ಬಗ್ಗೆ ಅರ್ಥ, ತಾಳ, ತರ್ಕ ಒಂದೂ ಇರದೆ ಬರೀ ಅಸಂಬದ್ಧಾನೇ ಕೆರಿತಿರೋ ದಡ್ಡರಿಗೆಲ್ಲಾ "ನನ್ನಿಂದೆ ಬರಬ್ಯಾಡಿ, ನನ್ ಬಗ್ಗೆ ಚಿಲ್ರೆ ಲೇಖನ, ಉದ್ರಿ ಹರಟೆ ನಿಲ್ಸಿಸ್ರಿ" ಅಂತಾ ಒಂದು ಕೊನೆ ಮಾತು ಹೇಳಬೇಕು ಅಂತಿದ್ದೀನಿ... ಏನಂತೀರಾ...

(ಅಷ್ಟರಲ್ಲಿ ನಂಜುಂಡಸ್ವಾಮಿ ಪ್ರವೇಶ)

ಎಂಡಿಎನ್: (ತೇಜಸ್ವಿ ನೋಡಿ ಸಿಟ್ಟಿನಿಂದ) ಯಾವ್ದೊನ್ರಿ ರ್‍ಯಾಸ್ಕಲ್ ನಿಮ್ಮಂತೋರ್‍ನ ಈ ಕೆಟ್ಟ ಜಾಗಕ್ಕೆ ಕಳಿಸಿದೋನು. ಹಸು ತರಾ ಬದುಕಿದೋರು ನೀವು, ಮುಂದೆ ಬಂದೋರಿಗೆ ಹಾಯಲಿಲ್ಲ, ಹಿಂದೆ ಬಂದೋರಿಗೆ ಒದೀಲಿಲ್ಲ, ಅಂತಾ ದ್ರಲ್ಲೂ ಹಿಂಗ್ ಮಾಡಿದಾರೆ ಅಂದ್ರೆ, ರೀ ಡಿ.ಆರ್. ಕರೀರಿ ಆ ಡಿ.ಸಿ.ನ ಇಲ್ಲಿಗೆ!

ತೇಜಸ್ವಿ: ರ್‍ರೀ. ಇಲ್ಯಾವ ಡಿಸಿ ಇರ್‍ತಾನ್ರಿ, ನೀವಿನ್ನೂ ಶಿವಮೊಗ್ಗದಲ್ಲೇ ಇದೀರಾ! ನಾನು ನಿಮ್ ಜೊತೆಗೆ ಇರ್ತೀನಿ ಬಿಡಿ.

ಧೂತ (ಪ್ರವೇಶಿಸಿ): ಏನ್ ಸಾರ್ ಕರೆದ್ರಲ್ಲಾ?

ನಂ.ಸ್ವಾಮಿ (ತೇಜಸ್ವಿಗೆ ಬೇಡದಿದ್ದ ಜಗಳ ಮುಂದುವರೆಸುತ್ತಾ) ನಿಮ್ಮ ಯಮ ಹೊಟ್ಟೆಗೆ ಏನ್ ತಿಂತಾನಯ್ಯ. I will sue him in the court of law ತಿಳ್ಕೊ.

ಲಂಕೇಶ್: ಹೋಗ್ಲಿ ಬಿಡ್ರಿ, ಅಂತಾ ಕರ್ನಾಟಕದಲ್ಲೇ ಇದ್ದು ಬಂದಿದ್ದೀವಿ ಇನ್ನು after all ನರಕದಲ್ಲಿರೋದೇನು ಮಹಾ!

ಧೂತ: ಅದೂ ನಿಜಾ ಅನ್ನಿ, ಅಲ್ಲಾ ಸಾರ್ ಅಂತಾ ತೇಜಸ್ವಿನೇ ಸುಮ್ಮನಿರೋವಾಗ ನೀವೆಲ್ಲಾ ಯಾಕೆ ಗಲಾಟೆ ಮಾಡ್ತಿದ್ದೀರಾ?

–ಪಾಶ

ನಾಣಿ ಅಧ್ಯಕ್ಷನಾದರೆ, ನಾನ್ಯಾಕೆ ಆಗಬಾರದು?


ಇನ್‌ಫೋಸಿಸ್ ನಾರಾಯಣಮೂರ್ತಿ ಎಂಬ ದಂಡಪಿಂಡ ರಾಷ್ಟ್ರಪತಿ ಸ್ಥಾನಕ್ಕೆ ಅರ್ಹ ಎಂದು ಆಧುನಿಕ ಅಗ್ರಹಾರಗಳಾದ ಐಟಿ ಕಂಪನಿಗಳಲ್ಲಿರುವ ಪುಳ್ಳುಜುಟ್ಟುಗಳು ವಾದಿಸುತ್ತಿವೆ ಮತ್ತು ಆತನ ಪರವಾಗಿ ಅಂತರ್ಜಾಲದಲ್ಲಿ 'ಆಂದೋಲನ'ವನ್ನೇ ಮಾಡುತ್ತಿದೆ. ಇದನ್ನು ನೋಡಿ ಎಡ್ವರ್ಡ್ ಎಡೆಜ್ಞಾತ್ ಎಂಬುವವರು 'ನಾಣಿ ಮಾತ್ರವಲ್ಲ ನಾನೂ ಕೂಡ ರಾಷ್ಟ್ರಪತಿ ಹುದ್ದೆಗೆ ಅರ್ಹ' ಎಂದು ವಾದಿಸಿ ಆದಕ್ಕೆ ಪೂರಕವಾಗಿ ಹದಿನಾಲ್ಕು ಕಾರಣಗಳನ್ನು ನೀಡಿದ್ದಾರೆ. ಅವು ತುಂಬಾ ಮಜಾ ನೀಡುವುದರಿಂದ ಇಲ್ಲಿ ಅನುವಾದಿಸಿ ನೀಡುತ್ತಿದ್ದೇನೆ.

1. ನಾಣಿ ಹಣ ದಾನ ಮಾಡುತ್ತಾನೆ. ನಾನೂ ಕೂಡ ರಸ್ತೆಬದಿಯ ಭಿಕ್ಷುಕರಿಗೆ ಕಾಣಿಕೆ ನೀಡುತ್ತೇನೆ.
2. ಜಗತ್ತಿನ ಎಲ್ಲದರ ಬಗ್ಗೆ ನಾಣಿಗೆ ಅಭಿಪ್ರಾಯಗಳು ಇವೆ. ಹಾಗೆಯೇ ನಾನೂ ಕೂಡ ಜಗತ್ತಿನ ಎಲ್ಲಾ ವಿಷಯಗಳ ಬಗ್ಗೆ ನೇರವಾಗಿ, ನಿಷ್ಠುರವಾಗಿ ಮಾತನಾಡಬಲ್ಲೆ.
3. ರಾಜಕೀಯ ವಿಷಯಗಳ ಬಗೆಗಂತೂ ನಾಣಿ ಕಠಿಣ ಹೇಳಿಕೆಗಳನ್ನು ನೀಡುತ್ತಾನೆ. ನಾನೂ ಕೂಡ ರಾಜಕೀಯ ಪಕ್ಷಗಳ ಬಗ್ಗೆ ಕೆಂಡ ಕಾರುತ್ತೇನೆ (ಆದರೆ ನನ್ನ ಅಭಿಪ್ರಾಯಗಳಿಗೆ ಪತ್ರಿಕೆಗಳು ಪ್ರಚಾರ ಕೊಡದಿರುವುದು ಅವರ ತಪ್ಪು, ನನ್ನ ತಪ್ಪಲ್ಲ!)
4. ನಾಣಿ ಐಟಿ ಸೇವೆಯನ್ನು ನೀಡುವ ಕಂಪನಿ ನಡೆಸುತ್ತಾನೆ. ನಾನು ಮನುಷ್ಯರಿಗೆ ಸೇವೆ ಸಲ್ಲಿಸುವ ಸಂಸ್ಥೆ ನಡೆಸುತ್ತೇನೆ.
5. ನಾಣಿ ಬೆಂಗಳೂರಿನಲ್ಲಿ ಇನ್‌ಫೋಸಿಸ್ ಕಂಪನಿ ನಡೆಸುತ್ತಾನೆ. ನಾನು ಬೆಂಗಳೂರಿನಲ್ಲಿ ಕ್ಷೌರದ ಅಂಗಡಿ ನಡೆಸುತ್ತೇನೆ.
6. ನಾಣಿ ಐವತ್ತು ಸಾವಿರ ಜನರಿಗೆ ಉದ್ಯೋಗ ನೀಡಿದ್ದಾನೆ. ನಾನು ಐದಾರು ಕ್ಷೌರಿಕರಿಗೆ ಉದ್ಯೋಗ ನೀಡಿದ್ದೇನೆ.
7. ನಾಣಿ ಕಂಪನಿಯಿಂದ ಶೇ. 15 ಜನ ಹೊರ ನಡೆಯುತ್ತಾರೆ. ಆದರೆ ನನ್ನ ಸಂಸ್ಥೆಯಿಂದ ಯಾರೂ ಕೆಲಸ ಬಿಟ್ಟು ಹೋಗಿಲ್ಲ (ನೋಡಿ, ಆತನಿಗಿಂತ ನಾನು ದಕ್ಷವಾಗಿ ನನ್ನ ಸಂಸ್ಥೆಯನ್ನು ನಡೆಸುತ್ತೇನೆ!)
8. ನಾಣಿಯ ಆದಾಯ ಬಿಲಿಯನ್ ಗಟ್ಟಲೆ ಇರಬಹುದು. ನನ್ನ ಆದಾಯ ಸಾವಿರಾರು ಗಟ್ಟಲೆ ಇದೆ.
9. ಮೀಸಲಾತಿಯನ್ನು ವಿರೋಧಿಸುವ ನಾಣಿ ಯೋಗ್ಯತೆಯನ್ನು ಬೆಂಬಲಿಸುತ್ತಾನೆ. ನಾನೂ ಕೂಡ ಮೀಸಲಾತಿಯನ್ನು ವಿರೋಧಿಸುತ್ತೇನೆ ಮಾತ್ರವಲ್ಲ ಯೋಗ್ಯತೆಯನ್ನು ಬೆಂಬಲಿಸುತ್ತೇನೆ. ನನ್ನ ಕ್ಷೌರದ ಅಂಗಡಿಯಲ್ಲಿ ಯೋಗ್ಯತೆಗೇ ಪ್ರಮುಖ್ಯತೆ.
10. ತಾಂತ್ರಿಕ ಕುಶಲತೆಯ ಮೇಲೆಯೇ ನಾಣಿ ತನ್ನ ಸಂಸ್ಥೆಯನ್ನು ನಡೆಸುತ್ತಾನೆ. ನಾನು ಕೂಡ ಕುಶಲತೆಯನ್ನೇ ಆಧರಿಸಿದ್ದೇನೆ. ಕೂದಲು ಕತ್ತರಿಸುವುದಕ್ಕೆ 'ಗಡ್ಡ' ಬೋಳಿಸುವುದಕ್ಕೆ ಅಪಾರ ಕುಶಲತೆ ಅವಶ್ಯಕ.
11. ನಾಣಿಯ ಗ್ರಾಹಕರು ಬೇರೆಬೇರೆ ದೇಶಗಳಲ್ಲಿದ್ದಾರೆ. ನನಗೂ ಬೇರೆ ಬೇರೆ ದೇಶಗಳ ಗ್ರಾಹಕರಿದ್ದಾರೆ (ಈಗ ತಾನೇ ಜರ್ಮನ್ ದೇಶದವನೊಬ್ಬನ ಕೂದಲನ್ನು ಕತ್ತರಿಸಿದೆ!)
12. ನೂರಾರು ಎಕರೆಗಳನ್ನು ನಾಣಿ ಕಡಿಮೆ ದರದಲ್ಲಿ ಸರ್ಕಾರದಿಂದ ಪಡೆದ. ನಾನು ನನ್ನ ಬೆವರು ಸುರಿಸಿ ದುಡಿದ ಹಣದಲ್ಲಿ ನನ್ನದೇ ಆದ ಜಾಗವನ್ನು ಕೊಂಡುಕೊಂಡೆ.
13. ನಾಣಿ ಅಧಿಕ ಲಾಭ ಮಾಡಿದರೂ ತೆರಿಗೆಯನ್ನು ಕಟ್ಟುವುದಿಲ್ಲ, ನಾನು ಕಡಿಮೆ ಲಾಭ ಮಾಡಿದರೂ ಕಾನೂನು ಪ್ರಕಾರ ಎಲ್ಲಾ ತೆರಿಗೆಗಳನ್ನು ಕಟ್ಟುತ್ತೇನೆ.
14. ತನ್ನ ಸಂಸ್ಥೆಗೆ ಬರುವ ಫ್ಲೈಓವರ್ ಅನ್ನು ಸರ್ಕಾರವೇ ತನ್ನ ದುಡ್ಡಿನಲ್ಲಿ ನಿರ್ಮಿಸುವಂತೆ ನಾಣಿ ಒತ್ತಾಯಿಸಿದ. ಆದರೆ ಚರಂಡಿಯಂತಿರುವ ನನ್ನ ರಸ್ತೆಯ ಮೇಲೆ ನನಗೆ ಯಾವ ಅಧಿಕಾರವೂ ಇಲ್ಲ.


ಈ ಎಲ್ಲ ಕಾರಣಗಳಿಂದ ನಾಣಿ ರಾಷ್ಟ್ರಪತಿ ಆಗಲು ಅರ್ಹನಾಗಿದ್ದರೆ ನಾನೂ ಕೂಡ ಆ ಹುದ್ದೆಗೆ ಅರ್ಹನಲ್ಲವೆ?

ಇನ್ಫಿ ನಾಣಿಗೆ ಪೊಲೀಸ್ ಶರಣು

ಮೈಸೂರು ಪೊಲೀಸರು ಎಂತಾ ಹೆಂಬೇಡಿಗಳು ಹಾಗೂ ಪುಕ್ಕಲರೆಂಬುದು ಇನ್‌ಫೋಸಿಸ್ ನಾಣಿಯ 'ರಾಷ್ಟ್ರಗೀತೆ' ಪ್ರಕರಣದಲ್ಲಿ ಸಾಬೀತಾಗಿದೆ. ಭಾರತ ದೇಶದ ಒಳಗಡೆ ಭಾರತದ ರಾಷ್ಟ್ರಗೀತೆ ಹಾಡಿದರೆ ಅದೂ ದೇಶದ ಅಧ್ಯಕ್ಷನಿರುವಾಗಲೂ ಸಹ ಅಲ್ಲಿದ್ದ ವಿದೇಶಿಯರಿಗೆ ಮುಜುಗರವಾಗುತ್ತದೆ ಎಂದು ಬೊಗಳಿದ್ದ ಈ ನಾರಾಯಣಮೂರ್ತಿ. ಬೇರೆ ಯಾರಾದರೂ ಇಂತಾ ನೀಚ ಮಾತುಗಳಾಡಿದಿದ್ದರೆ ಕೂಡಲೇ ಪೊಲೀಸರೂ ವೀರಾವೇಶದಿಂದ ನುಗ್ಗಿ ಕುಂಡೆ ಮೇಲೆ ಒದ್ದು ಎಳಕೊಂಡು ಹೋಗಿರುತ್ತಿದ್ದರೇನೊ. ಆದರೆ ಇನ್‌ಫೋಸಿಸ್ ನಾಣಿಯನ್ನು ಮುಟ್ಟಲಾದೀತೆ. ಇವನೊಬ್ಬ ಯಶಸ್ವಿ ಉದ್ಯಮಪತಿ, ಕಂಪ್ಯೂಟರ್ ಕಿಂಗ್ ಇನ್ನು ಮೇಲಾಗಿ ಬ್ರಾಹ್ಮಣ. ಇಂಗ್ಲಿಷ್ ಮೀಡಿಯಾಗಳು, ರಾಜಕಾರಣಿಗಳನ್ನು ತನ್ನ ಹಂಗಿನಲ್ಲಿ ಇರಿಸಿಕೊಂಡಿರುವಾತ. ಅಂತವನು ಎಂತಾ ಅಪದ್ಧ ಮಾಡಿದರೂ ಮಹಾಪ್ರಸಾದ ಅಂತಾ ಕಣ್ಣಿಗೊತ್ತಿಕೊಳ್ಳುವಂತಾ ಪರಿಸ್ಥಿತಿ ಸೃಷ್ಟಿಯಾಗಿ ಹೋಗಿದೆ.



ಹಾಗಾಗಿಯೇ ಈ ನಾರಾಯಣನ ವಿರುದ್ಧ ಮೈಸೂರಿನ ವಕೀಲ ಭಾಸ್ಕರ್ ಎಂಬುವರು ಕಂಪ್ಲೆಂಟ್ ಕೊಟ್ಟಿದ್ದರೂ ಪೊಲೀಸರು ಇನ್ನೂ ತಮ್ಮ ಕೆಲಸ ಶುರು ಮಾಡೇ ಇಲ್ಲ. ಮೈಸೂರು ಪೊಲೀಸರು ಈ ಕೇಸಿನ ತಿಪ್ಪೆ ಸಾರಿಸಿಬಿಡುತ್ತಾರೆಂಬ ಅನುಮಾನ ಬಂದೇ ಮಾಜಿ ಸಚಿವ ಎಚ್.ಎನ್. ನಂಜೇಗೌಡರೂ ಈಗ ವಿಜಯನಗರ ಠಾಣೆಯಲ್ಲಿ ಇನ್ನೊಂದು ದೂರು ಕೊಟ್ಟಿದ್ದಾರೆ. ಆದರೆ ವಿಪರ್ಯಾಸ ನೋಡಿ. ನಂಜೇಗೌಡರು ದೂರು ನೀಡಲು ಹೋದರೆ ಮೊದಮೊದಲು ಕಂಪ್ಲೆಂಟ್ ಪಡೆಯಲು ಪೊಲೀಸರು ಹಿಂದೇಟು ಹಾಕಿದ್ದಾರೆ. ಎಸಿಪಿ, ಡಿಸಿಪಿ ಲೆವೆಲ್‌ನ ಅಧಿಕಾರಿಗಳೇ ಬಂದು ತಡೆಯುವ ಪ್ರಯತ್ನ ಮಾಡಿದ್ದಾರೆ. ಆದರೆ ನಂಜೇಗೌಡರು ಪಟ್ಟಾಗಿ ಕುಳಿತ ಮೇಲೆ ಬೇರೆ ದಾರಿ ಕಾಣದೆ ಕೇಸ್ ರಿಜಿಸ್ಟರ್ ಆಗಿದೆ. ಆದರೆ ಅಲ್ಲೂ ಮೋಸ. ಶಿಕ್ಷಾರ್ಹ ಅಪರಾಧವಲ್ಲದ ಐಪಿಸಿ ಕಲಂಗಳ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.




ಏನಿದರ ಅರ್ಥ?

ಈ ಮಧ್ಯೆ ನಾಣಿಯ ತಲಹರಟೆ ಬಗ್ಗೆ ವಿಧಾನಸೌಧದ ಅಧಿವೇಶನದಲ್ಲೂ ಚರ್ಚೆಯಾಗಿದೆ. ಗೃಹ ಸಚಿವ ಎಂ.ಪಿ. ಪ್ರಕಾಶ್ ಹೇಳಿಕೆ ನೀಡಿ "ಪೊಲೀಸರ ತನಿಖಾ ವರದಿ ಬಂದ ನಂತರ ಮುಂದೇನು ಮಾಡಬೇಕೆಂದು ಸರ್ಕಾರ ನಿರ್ಧರಿಸಲಿದೆ" ಎಂಬ ಬಾಲಿಷ ಹೇಳಿಕೆ ನೀಡಿದ್ದಾರೆ. ಪ್ರಕಾಶರ ಅವಿವೇಕತನ ಗೊತ್ತಾಗುವುದು ಇಲ್ಲೇ. ಅಲ್ಲಾ ನಾರಾಯಣಮೂರ್ತಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಬೇಡವೋ ಎಂದು ನಿರ್ಧರಿಸಲು ಕೋ-ಜಾ ಸರ್ಕಾರಕ್ಕೇನು ಹಕ್ಕಿದೆ. ತಪ್ಪು ಮಾಡಿರುವವನು ನಾರಾಯಣಮೂರ್ತಿ. ದೂರು ನೀಡಿರುವವರು ಭಾಸ್ಕರ್ ಹಾಗೂ ನಂಜೇಗೌಡರು. ತನಿಖೆ ನಡೆಸಬೇಕಾದ ಪೊಲೀಸರು ಸಾಕ್ಷ್ಯಾಧಾರ ಸಂಗ್ರಹಿಸಿ ಕ್ರಮಕೈಗೊಳ್ಳಲು ಇಂಡಿಯನ್ ಪೀನಲ್ ಕೋಡ್ ಇದೆ. ವಿಚಾರಣೆ ನಡೆಸಲು ನ್ಯಾಯಾಲಯ ಇದೆ. ಹೀಗಿರುವಾಗ ಇದರಲ್ಲಿ ಸರ್ಕಾರ ತೀರ್ಮಾನ ಮಾಡುವುದೇನು ಬಂತು. ಪೊಲೀಸರು ತಮ್ಮ ಕೆಲಸ ಮಾಡಲು ಅವಕಾಶ ಕಲ್ಪಿಸುವುದಕ್ಕಷ್ಟೇ ಸರ್ಕಾರ ಸೀಮಿತವಾಗಬೇಕಲ್ಲವೆ?

ಇನ್‌ಫೋಸಿಸ್ ನಾರಾಯಣಮೂರ್ತಿ ಒಬ್ಬ ಯಶಸ್ವಿ ಉದ್ಯಮಪತಿ, ಕಂಪ್ಯೂಟರ್ ಕಿಂಗ್ ಇನ್ನು ಮೇಲಾಗಿ ಬ್ರಾಹ್ಮಣ. ಇಂಗ್ಲಿಷ್ ಮೀಡಿಯಾಗಳು, ರಾಜಕಾರಣಿಗಳನ್ನು ತನ್ನ ಹಂಗಿನಲ್ಲಿ ಇರಿಸಿಕೊಂಡಿರುವಾತ. ಅಂತವನು ಎಂತಾ ಅಪದ್ಧ ಮಾಡಿದರೂ ಮಹಾಪ್ರಸಾದ ಅಂತಾ ಕಣ್ಣಿಗೊತ್ತಿಕೊಳ್ಳುವಂತಾ ಪರಿಸ್ಥಿತಿ ಸೃಷ್ಟಿಯಾಗಿ ಹೋಗಿದೆ. ಸ್ವತಃ ಪೊಲೀಸರೇ ಈತನಿಗೆ ಶರಣಾಗಿಹೋಗಿದ್ದಾರೆ.

ಇವೆಲ್ಲಾ ಕಾನೂನಿನ ಮಾತಾಯಿತು. ಆದರೆ ಅಂತಾ ಕಾನೂನೇ ಕೈಕಟ್ಟಿ ಕೂರುವಂತಾಗಲೂ ಬಹಳಷ್ಟು ಕಾರಣಗಳಿವೆ. ನಾರಾಯಣಮೂರ್ತಿಯನ್ನು ಮುಂದಿನ ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯಾಗಿಸಬೇಕೆಂದು ಕೆಲವು ಪುರೋಹಿತಶಾಹಿ ಲಾಬಿಗಳು ತೀವ್ರ ಪ್ರಯತ್ನ ನಡೆಸುತ್ತಿವೆ. ಕೆಲವು ಕಂಪ್ಯೂಟರ್ ಕ್ರಿಮಿಗಳು ಪ್ರತ್ಯೇಕ ವೆಬ್‌ಸೈಟೊಂದನ್ನೇ ಕ್ರಿಯೇಟ್ ಮಾಡಿ ನಾರಾಯಣಮೂರ್ತಿ ಪರ ಪ್ರಚಾರಕ್ಕಿಳಿದಿದೆ. ಒಬ್ಬ ಯಶಸ್ವಿ ವ್ಯಾಪಾರಿಯಾಗಿರುವ ನಾರಾಯಣಮೂರ್ತಿಯ ಇನ್‌ಫೋಸಿಸ್ ಕ್ಯಾಂಪಸ್ಸಿಗೆ ನಾನಾ ದೇಶಗಳ ಗಣ್ಯರು ಬಂದು ಹೋಗುತ್ತಿರುತ್ತಾರೆ. ಆಗೆಲ್ಲಾ ಅಂತ ಗಣ್ಯರ ಜೊತೆಗೆ ನಾರಾಯಣಮೂರ್ತಿಯೂ ನಿಂತಿರುವ ಫೋಟೋಗಳು ಪ್ರಕಟವಾಗುತ್ತಾ ಇವನೊಬ್ಬ ದೊಡ್ಡ ಮುತ್ಸದ್ದಿ, ರಾಜನೀತಿ ತಜ್ಞ ಎಂಬಂತೆ ಬಿಂಬಿಸುತ್ತಾ ಬರಲಾಗಿದೆ. ಅದಕ್ಕೆ ತಕ್ಕಂತೆ ಇವನೂ ಕೂಡ ದೇಶದ ಅಭಿವೃದ್ಧಿ, ಮೀಸಲಾತಿ, ಭಾಷಾ ನೀತಿಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಹೇಳುತ್ತಾ ಬಂದಿದ್ದಾನೆ. ಆದರೆ ಅಂತಾ ಬಹುಪಾಲು ಹೇಳಿಕೆಗಳು ಸಂವಿಧಾನದ ಆಶಯಗಳಿಗೆ ವಿರುದ್ಧವಾದಂತವು. ಇಂತವನು ಇಡೀ ಭಾರತದ ಎಲ್ಲಾ ಜನವರ್ಗಗಳ ಪ್ರತಿನಿಧಿಯೆಂಬಂತೆ ಭಾರತದ ಅಧ್ಯಕ್ಷನಾಗಲು ಸಾಧ್ಯವೆ?




ಮೈಸೂರು ಪೊಲೀಸರು ಈಗಲಾದರೂ ನಿಪಕ್ಷಪಾತವಾದ ತನಿಖೆ ನಡೆಸಿ, ಲಭ್ಯ ಸಾಕ್ಷಿ ಆಧಾರದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳದೇ ಹೋದರೆ ಈ ವಿವಾದ ಇನ್ನಷ್ಟು ಬಿರುಸಾಗುವುದಂತೂ ಖಚಿತ. ಸ್ವಾತಂತ್ರ್ಯ ದಿನಾಚರಣೆಯಂದೋ ಗಣ ರಾಜ್ಯೋತ್ಸವದಂದೋ ಅಕಸ್ಮಾತಾಗಿ ಭಾರತದ ಬಾವುಟ ತಲೆಕೆಳಗಾಗಿ ಹಾರಿಸಿದರೆಂದು ಶಾಲಾ ಶಿಕ್ಷಕರನ್ನು ಸಸ್ಪೆಂಡ್ ಮಾಡಿ ಕಾನೂನು ಕ್ರಮ ತೆಗೆದುಕೊಂಡ ನಿದರ್ಶನಗಳು ನಮ್ಮಲ್ಲಿವೆ.

ಅಂತದ್ದರಲ್ಲಿ ಈ ನಾರಾಯಣಮೂರ್ತಿದೇನು ಹೆಚ್ಚುಗಾರಿಕೆ?

ಅದೇ ಮಾತು ಅಜೀಂ ಪ್ರೇಮ್‌ಜಿ ಹೇಳಿದಿದ್ದರೆ!

ಇಷ್ಟು ಹೊತ್ತಿಗೆ ಇಡೀ ಭಾರತಕ್ಕೆ ಬೆಂಕಿ ಬಿತ್ತೇನೊ ಎಂಬಂತಾಗಿ ಹೋಗಿರುತ್ತಿತ್ತು. ಏಕೆಂದರೆ ಪ್ರೇಮ್‌ಜಿ ಒಬ್ಬ ಮುಸ್ಲಿಂ. ಅವರ ಪೂರ್ವಿಕರು ಪಾಕಿಸ್ತಾನದಿಂದ ವಲಸೆ ಬಂದವರು. ಇನ್ನಿ ನಾಣಿಯಂತೆ ಅಜೀಂ ಪ್ರೇಮ್‌ಜೀನೂ ಯಶಸ್ವಿ ಐಟಿ ವ್ಯಾಪಾರಿಯಾದರೂ ಇನ್ಫಿಗಿಂತ ಜಾಸ್ತಿ ಲಾಭ ಮಾಡುತ್ತಿರುವವರು. ಈಗ ಕಳೆದ ನಾಲ್ಕೈದು ವರ್ಷಗಳಿಂದ ಮಿಡಿಯಾಗಳು ನಾಣಿಯ ಇಮೇಜನ್ನು ಮಾತ್ರ ಬೆಳೆಸುತ್ತಾ ಬಂದಿವೆ. ಈಗ ನಾಣಿ ಹಗಲು ಹೊತ್ತು ಸಾರಾಯಿ ಕುಡಿದವನಂತೆ ರಾಷ್ಟ್ರಗೀತೆ ಬಗ್ಗೆ ಅಸಂಬದ್ಧವಾಗಿ ಮಾತನಾಡಿ ಚೆಡ್ಡಿಗಳಿಗೆ ನಿರಾಶೆ ಉಂಟು ಮಾಡಿದ್ದಾನೆ.



ನಿರಾಶೆ ಏಕೆಂದರೆ ನಾಣಿ ರಾಷ್ಟ್ರಪತಿ ಸ್ಥಾನಕ್ಕೂ ಯೋಗ್ಯ ಎಂದು ಬಿಂಬಿಸುವ ಯತ್ನ ಶುರುವಾಗಿತ್ತಲ್ಲಾ, ಅದೀಗ ಕಾರ್ಯ ಸಾಧ್ಯವಲ್ಲ ಎಂಬುದಕ್ಕೆ.

ಆದರೂ ಭಾರತಾಂಬೆಯ ವೀರ ಪುತ್ರರಾದ ಆರ್‌ಎಸ್‌ಎಸ್, ಭಜರಂಗ ದಳದವರು ಈ ಪ್ರಕರಣದಲ್ಲಿ ಮಾತ್ರ ತಮ್ಮ ದೇಶ ಭಕ್ತಿ ಮರೆತು ನಾಪತ್ತೆಯಾಗಿದ್ದಾರೆ. ಸದನದಲ್ಲೂ ಒಬ್ಬಾನೊಬ್ಬ ಬಿಜೆಪಿ ಶಾಸಕನೂ ನಾಣಿಯನ್ನು ಖಂಡಿಸಲಿಲ್ಲ.

ಇದ್ದುದರಲ್ಲಿ ಒಬ್ಬ ಚೆಡ್ಡಿಚತುರ ಸಾಹಿತಿ ಭೈರಿಗೆ ಭೈರಪ್ಪನು ಒಂದು ಹೇಳಿಕೆ ಕೊಟ್ಟ.....!

ಆದರೆ ಅದು ನಾಣಿ ಮಾಡಿದ್ದೇ ಸರಿ ಎಂಬ ಹೇಳಿಕೆ!!

ಈ ನಕಲಿ ದೇಶಭಕ್ತರಾದ ಚೆಡ್ಡಿಗಳು ಎಷ್ಟು ಬಗ್ಗೆ, ಎಷ್ಟು ವೇಷ, ಎಷ್ಟು ಅವತಾರಗಳಲ್ಲಿರುತ್ತಾರಲ್ಲವೆ!?

ಕೋಮುದ್ವೇಷವನ್ನು ಕಾರುವ ಬಿಜೆಪಿಯ ಸಿಡಿ

ಧರ್ಮದ ಮೇಲೆ ಜನರನ್ನು ವಿಭಜಿಸಿ ತನ್ನ ಬೇಳೆ ಬೇಯಿಸಿ ಕೊಳ್ಳುವುದು ಕೋಮುವಾದಿ ಬಿಜೆಪಿ ಪಕ್ಷಕ್ಕೆ ಹೊಸದೇನಲ್ಲ. ಆದರೆ ಈಗ ನಡೆಯುತ್ತಿರುವ ಉತ್ತರ ಪ್ರದೇಶದ ಚುನಾವಣೆಯಲ್ಲಿ ಅದು ತಾರಕಕ್ಕೆ ಹೋಗಿದೆ ಎಂಬುದಕ್ಕೆ ಆ ಪಕ್ಷ ತನ್ನ ಪ್ರಚಾರದ ತಂತ್ರವಾಗಿ ವಿತರಿಸಿದ ದ್ವೇಷಭರಿತ ಸಿಡಿಯೇ ಸಾಕ್ಷಿ.

ಈ ಸಿಡಿಯಲ್ಲಿ ಮುಸಲ್ಮಾನರನ್ನು ಕ್ರೂರಿಗಳೆಂದು, ಹಿಂದೂ ಹುಡುಗಿಯರನ್ನು ವಂಚಿಸುವವರೆಂದೂ, ಹೆಚ್ಚು ಮಕ್ಕಳನ್ನು ಹಡೆದು ಭಾರತವನ್ನು ಇಸ್ಲಾಮಿಕ್ ದೇಶವನ್ನಾಗಿ ಪರಿವರ್ತಿಸಲು ಹುನ್ನಾರ ನಡೆಸಿರುವವರೆಂದೂ ಬಣ್ಣಿಸಲಾಗಿದೆ. ವಾಸ್ತವವಾಗಿ ಈ ಸಿಡಿಯಲ್ಲಿನ ಸಂದೇಶಕ್ಕೂ, ಆರ್‌ಎಸ್‌ಎಸ್‌ನ ಕರಪತ್ರದಂತಿರುವ ಎಸ್.ಎಲ್. ಭೈರಪ್ಪನವರ 'ಆವರಣ' ಕಾದಂಬರಿಗೂ ಅಷ್ಟು ವ್ಯತ್ಯಾಸವೇನಿಲ್ಲ.

ಅದಿರಲಿ, ಹಲವಾರು ನಟರನ್ನು ಬಳಸಿಕೊಂಡು ತಯಾರಿಸಲಾಗಿರುವ 'ಭಾರತ್ ಕಿ ಪುಕಾರ್' (ಭಾರತದ ಕರೆ) (ವಾಸ್ತವವಾಗಿ ಇದು ಭಾರತದ ಕರೆ ಅಲ್ಲ, ಬದಲಾಗಿ ಬಿಜೆಪಿಯ ಕರೆ) ಎಂಬ ಸಿಡಿಯಲ್ಲಿ ಏನಿದೆ ಎಂಬುದು ನಮ್ಮ ಓದುಗರಿಗೂ ಗೊತ್ತಾಗಲಿ ಎಂದು ಇಲ್ಲಿ ಅದರ ಆಯ್ದ ಭಾಗಗಳನ್ನು ನೀಡಿದ್ದೇವೆ.

ಆರಂಭದ ಟೈಟಲ್: ಬಿಜೆಪಿ ಉತ್ತರ ಪ್ರದೇಶ ಘಟಕವು ಅರ್ಪಿಸುವ 'ಭಾರತ್ ಕಿ ಪುಕಾರ್' (ಭಾರತದ ಕರೆ).

ಹಿನ್ನಲೆ ಧ್ವನಿ: ಇಂದು ಭಾರತ ಮಾತೆ ಗಟ್ಟಿಯಾಗಿ ಆಕ್ರಂದನಗೈಯುತ್ತಿದ್ದಾಳೆ, "ಓ ನನ್ನ ಪುತ್ರರೇ, ನಾನು ಮತ್ತೊಮ್ಮೆ ಚೂರುಚೂರಾಗುವ ಮುನ್ನವೇ ನನ್ನನ್ನು ರಕ್ಷಿಸಿರಿ. ಇನ್ನೊಮ್ಮೆ ಗುಲಾಮಗಿರಿಗೆ ಒಳಗಾಗುವಷ್ಟು ಶಕ್ತಿಯು ನನ್ನಲ್ಲೀಗ ಉಳಿದಿಲ್ಲ, ಭಯೋತ್ಪಾದಕರನ್ನು ಬಳಸಿಕೊಂಡು ಭೀತಿಯನ್ನ ಹರಡುತ್ತಲೂ, ನಮ್ಮನ್ನು ವಿಭಜಿಸುತ್ತಲೂ ಪಾಕಿಸ್ತಾನವು ಭಾರತವನ್ನು ಚೂರು ಚೂರಾಗಿ ಒಡೆಯಲು ಬಯಸುತ್ತಿದೆ. ರಾಜಕೀಯ ಅಧಿಕಾರ ದಾಹದ 'ಕತ್ತೆ ಕಿರುಬ' ಗಳು ಅವರಿಗೆ ಪ್ರಚೋದನೆ ನೀಡುತ್ತಿವೆ. ಇವೆಲ್ಲದರ ಪರಿಣಾಮಗಳೇನೆಂಬುದನ್ನು ಅವು ಮರೆತಿವೆ. ತಮಗೆ ಮತ್ತೊಮ್ಮೆ ಗುಲಾಮಗಿರಿ ಬೇಕಾಗಿದೆಯೇ ಅಥವಾ ಸ್ವತಂತ್ರ ಭಾರತದಲ್ಲಿ ರಾಮರಾಜ್ಯ ಬೇಕಾಗಿದೆಯೇ ಎಂಬುದನ್ನು ಭಾರತದ ಸಾಮಾನ್ಯ ಜನತೆಯೀಗ ಚಿಂತಿಸಬೇಕಾಗಿದೆ.

(ರಾಮನ ಚಿತ್ರದ ಪ್ರದರ್ಶನ)

(ಹಾಡು- ಆಯಿ ಭಾರತ್ ಮಾ ತೇರೆ ಚರಣೋ ಮೇ....)

(ಬಿಜೆಪಿಯ ರಾಷ್ಟ್ರಧ್ವಜ, ಬಿಜೆಪಿ ನಾಯಕರ ಭಾವಚಿತ್ರಗಳನ್ನು ತೋರಿಸಲಾಗಿದೆ)

ವಿಭಾಗೀಯ ಶೀರ್ಷಿಕೆ: ಸಮಕಾಲೀನ ಭಾರತ ಹಾಗೂ ಉತ್ತರಪ್ರದೇಶದ ದೃಶ್ಯ

ದೃಶ್ಯ: ಭಯೋತ್ಪಾದಕ ದಾಳಿಗಳ ಕುರಿತಾದ ಶೀರ್ಷಿಕೆಗಳನ್ನು ಕೂಗುತ್ತಾ ಪೇಪರ್ ಮಾರುವ ಹುಡುಗನು ವೇಗವಾಗಿ ಸೈಕಲ್‌ನಲ್ಲಿ ಸಾಗುತ್ತಿದ್ದಾನೆ.

1. ಭಾರತ್ ದೇಶ್ ಆತಂಕ್‌ವಾದ್ ಕೇ ಗಿರಫ್ತ್ ಮೇ (ಭಯೋತ್ಪಾದನೆಯ ಸೆರೆಯಲ್ಲಿ ಭಾರತ ದೇಶ)

ಮಾಸ್ಟರ್‌ಜೀಯೊಬ್ಬರು ತಿರುಗಾಡುತ್ತಾ ಜನವರಿ 26 ರಂದು ನಡೆಯುವ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಜನರಿಗೆ ಕರೆ ನೀಡುತ್ತಿದ್ದಾರೆ. ಆದರೆ ಸಭೆಗೆ ನಾಲ್ಕೈದು ಮಂದಿಯಷ್ಟೇ ಬರುತ್ತಾರೆ. ಜನರ ನಿರುತ್ಸಾಹದ ಬಗ್ಗೆ ಮಾಸ್ಟರ್‌ಜೀ ವಿಷಾದಿಸುತ್ತಾರೆ. ಅಲ್ಲದೆ, ಪ್ರಖರ ಭಾಷಣವನ್ನು ಮಾಡುತ್ತಾರೆ ಮತ್ತು 'ವಂದೇ ಮಾತರಂ' ಎಂದು ಗಟ್ಟಿಯಾಗಿ ಕೂಗುತ್ತಾರೆ. ತದನಂತರ ಕ್ಯಾಮರಾವು ತಕ್ಷಣವೇ ಮುಸ್ಲಿಂ ವ್ಯಕ್ತಿಯೊಬ್ಬ (ತಲೆಯ ಮೇಲೆ ಧರಿಸುವ ಟೋಪಿಯ ಮೂಲಕ ಗುರುತಿಸಬಹುದು) ಬಿಳಿ ಅಂಬಾಸಿಡರ್ ಕಾರಿನ ಕೆಳಗೆ ಬಾಂಬೊಂದನ್ನು ಇಡುತ್ತಿರುವುದನ್ನು ತೋರಿಸಲಾಗಿದೆ.

ಮೊದಲ ಕಂತು: 'ಗೋ ಹತ್ಯೆ'

ಮಧುರವಾದ ಹಿನ್ನಲೆ ಸಂಗೀತದೊಂದಿಗೆ ಪ್ರಶಾಂತವಾದ ಹಳ್ಳಿಯ ದೃಶ್ಯ ಕಾಣುವುದು. ಕಟ್ಟಿ ಹಾಕಿದ ದನವೊಂದರ ಪಕ್ಕದಲ್ಲೇ ಇರುವ ಪಡಸಾಲೆಯಲ್ಲಿ ಇಬ್ಬರು ಗ್ರಾಮಸ್ಥರು ವಿಶ್ರಮಿಸುತ್ತಿದ್ದಾರೆ.

ಪ್ಯಾಂಟ್, ಶರ್ಟ್‌ಗಳನ್ನು ಧರಿಸಿ ಇಬ್ಬರು ಯುವಕರು ನಡೆದುಕೊಂಡು ಬರುತ್ತಿದ್ದಾರೆ. ಅವರ ಕೈಯಲ್ಲಿ ಲಾಠಿಗಳಿವೆ.

ಮೊದಲನೆ ಯುವಕ: ಭಾಯಿ ಜಾವೇದ್, ಹಿಂದೂಗಳ ಗ್ರಾಮ ಬಂದಿತು.

ಎರಡನೆ ಯುವಕ: ಸಲೀಂ, ನೀನು ಹೇಳಿದ್ದು ಸರಿ. ಬೇಗ ನಾಮ ಹಾಗೂ ಕೆಂಪು ದಾರವನ್ನು ಹೊರಗೆ ತೆಗೆ.

(ಜಾವೇದ್ ಬ್ಯಾಗನ್ನು ತೆರೆಯುತ್ತಾನೆ ಹಾಗೂ ಸಲೀಂನ ಹಣೆಗೆ ನಾಮವನ್ನು ಇಡುತ್ತಾನೆ).

ಸಲೀಂ: ಅದನ್ನು ಸರಿಯಾಗಿ ಇಡು.

(ಆ ಬಳಿಕ ಅವರಿಬ್ಬರೂ ಕೆಂಪು ದಾರವನ್ನು ಪರಸ್ಪರ ಮಣಿಕಟ್ಟಿಗೆ ಕಟ್ಟಿಕೊಳ್ಳುತ್ತಾರೆ).

ಜಾವೇದ್: ಇನ್ನು ನಮ್ಮನ್ನು ಯಾರೂ ಗುರುತಿಸಲಾರರು (ನಗೆಯಾಡುತ್ತಾನೆ).

ಆ ಬಳಿಕ ದನವನ್ನು ಕಟ್ಟಿಹಾಕಿರುವ ಮನೆಯ ಪಡಸಾಲೆಯೆಡೆಗೆ ತೆರಳುತ್ತಾರೆ.

ಜಾವೇದ್: ರಾಮ್, ರಾಮ್!

ಗ್ರಾಮಸ್ಥ: ಏನು ವಿಶೇಷ? ಎಲ್ಲಿಂದ ನೀವು ಬಂದಿರುವಿರಿ.

ಜಾವೇದ್: ನಮಗೆ ದನವೊಂದು ಬೇಕಾಗಿದೆ. ನಮ್ಮ ಮಕ್ಕಳಿಗೆ ದನದ ಹಾಲು ನೀಡಬೇಕೆಂದು ವೈದ್ಯರು ಹೇಳಿದ್ದಾರೆ. ನಿಮ್ಮ ದನವನ್ನು ನೋಡಿ ನಾವಿಲ್ಲಿಗೆ ಬಂದಿದ್ದೇವೆ. ನಿಮ್ಮ ದನವನ್ನು ನನಗೆ ಮಾರುವಿರಾ?

ಗ್ರಾಮಸ್ಥ: ನಮ್ಮಲ್ಲಿ ದನದ ಹಾಲಿದೆ. ಅದನ್ನೇ ನಾವು ಮಾರಬಹುದು.

ಜಾವೇದ್: ನೀವು ಹೇಳುವುದು ಸರಿ. ಆದರೆ ನಮಗೆ ನಿಮ್ಮ ದನವನ್ನು ಮಾರಿಬಿಡಿ. ನಮ್ಮ ಮಕ್ಕಳು ಹಾಲನ್ನು ಕುಡಿಯಬಹುದು ಹಾಗೂ ನಾವು ದನವನ್ನು ಸಾಕುತ್ತೇವೆ.

ಗ್ರಾಮಸ್ಥ: ಕಸಾಯಿಗಳ ಮಕ್ಕಳು ಹಲವು ಸಲ ಇಲ್ಲಿಗೆ ಬಂದಿದ್ದರು.....

(ಗ್ರಾಮಸ್ಥನು ಒಮ್ಮೆ ಜಾವೇದ್‌ನ ಭಯಗ್ರಸ್ತ ಮುಖವನ್ನು ನೋಡುತ್ತಾನೆ. ಮತ್ತೊಮ್ಮೆ ಆತನ ಮಣಿಕಟ್ಟಿನಲ್ಲಿರುವ ದಾರವನ್ನು ದಿಟ್ಟಿಸುತ್ತಾನೆ)

....ಅವರು ನನಗೆ 3,500 ರೂ. ನೀಡುವುದಾಗಿಯೂ ಹೇಳಿದ್ದರು. ಆದರೆ ನಾನು ಲಕ್ಷ ರೂ. ಕೊಟ್ಟರೂ ಮಾರಲಾರೆ ಎಂದು ಹೇಳಿದ್ದೆ. ಆದರೆ ನೀವು ಅದನ್ನು ಮನೆಯಲ್ಲಿಟ್ಟು ಸಾಕುವಿರಾದರೆ ಕೊಡುತ್ತೇನೆ.

ಜಾವೇದ್: ಆದರೆ ಕಾಕಾ, 3,500 ರೂ. ತುಂಬಾ ಜಾಸ್ತಿಯಾಯಿತು. ನಾನು ಮೂರು ಸಾವಿರ ರೂಪಾಯಿ ಮಾತ್ರ ಕೊಡಬಲ್ಲೆ, ನಾನು ಬಡವ.

ಗ್ರಾಮಸ್ಥ: ದನವನ್ನು ನೀನು ತೆಗೆದುಕೊ, ಆದರೆ ಒಂದು ಶರತ್ತು, ಕಸಾಯಿಗಳಿಗೆ ಮಾತ್ರ ಅದನ್ನು ಮಾರಬಾರದು.

ಜಾವೇದ್: ಕಾಕಾ, ನಾವು ಮುಸ್ಲಿಮರಲ್ಲ,

(ಆತ ಹಣ ನೀಡಿ ದನವನ್ನು ಕೊಂಡೊಯ್ಯುತ್ತಾನೆ)

(ಗ್ರಾಮಸ್ಥನು ಮಲಗಿರುವ ದೃಶ್ಯ. ಆತನ ಸೋದರ ಸಂಬಂಧಿ ಮನೆಯೊಳಗೆ ಬರುತ್ತಾನೆ)

ಸೋದರ ಸಂಬಂಧಿ: ಕಾಕಾ, ನೀವು ದನಗಳನ್ನು ಕಸಾಯಿಗಳಿಗೆ ಮಾರಿ ಈಗ ನಿದ್ರಿಸುತ್ತಿದ್ದೀರಾ?

ಗ್ರಾಮಸ್ಥ: ಇಲ್ಲ, ಅವರು ಹಿಂದೂ ಹುಡುಗರು. ಅವರ ಹಣೆಯಲ್ಲಿ ತಿಲಕವಿತ್ತು ಹಾಗೂ ಮಣಿಕಟ್ಟಿನಲ್ಲಿ ಕಲಾವಾ (ಕೆಂಪುದಾರ)ವಿತ್ತು, ಅದನ್ನು ನನ್ನ ಕಣ್ಣುಗಳಿಂದಲೇ ನೋಡಿದ್ದೇನೆ. ಅದನ್ನು ನೋಡಿದ ಬಳಿಕವೇ ನಾನವರಿಗೆ ದನ ಮಾರಿದ್ದು.

ಸೋದರ ಸಂಬಂಧಿ: ಇಲ್ಲಿಗೆ ಬರುವ ದಾರಿಯಲ್ಲಿ ನಿಮ್ಮ ದನದ ಜೊತೆ ಕಸಾಯಿಗಳ ಮಕ್ಕಳನ್ನು ನಾನು ನೋಡಿದೆ. ಅವರ ಹಣೆಯಲ್ಲಿ ತಿಲಕವಾಗಲಿ ಅಥವಾ ಕೈಯಲ್ಲಿ ಕಲಾವಾ ಆಗಲೀ ಇರಲಿಲ್ಲ, ನಿನಗೆ ನಾಚಿಕೆಯಾಗುವುದಿಲ್ಲವೇ? ನೀನು ಕಸಾಯಿಗಳಿಗೆ ದನ ಮಾರಿರುವೆ.

ಗ್ರಾಮಸ್ಥ: ನೀನು ಹೇಳುತ್ತಿರುವುದು ನಿಜವಾ?


ಸೋದರ ಸಂಬಂಧಿ: ಆ ಹುಡುಗರನ್ನು ನಾನು ಬಲ್ಲೆ.

ಗ್ರಾಮಸ್ಥ: ಅಯ್ಯೋ.... ಭೀಕರ ಸಂಗತಿಯೊಂದು ಸಂಭವಿಸಿದೆ. (ಯಾರಾದರೂ ದನಕೊಂಡು ಹೋದವರನ್ನು ಹುಡುಕಬಹುದೇ ಎಂದು ಸಹಾಯಕ್ಕಾಗಿ ಕೂಗುತ್ತಾನೆ).... ನೀವು ಅವರನ್ನು ಹುಡುಕಿ ಹೊಡೆಯಿರಿ ಮತ್ತು ನನ್ನ ದನವನ್ನು ಮರಳು ತನ್ನಿ.

ಸೋದರ ಸಂಬಂಧಿ: ನಿನ್ನ ದನ ನಿನಗೆ ಮತ್ತೊಮ್ಮೆ ಕಾಣಸಿಗದು. ಬಹುಶಃ ಅವರು ಅದನ್ನು ಈಗಾಗಲೇ ಕೊಂದಿರಬಹುದು.

(ಈ ದೃಶ್ಯದ ಬಳಿಕ ದನವೊಂದನ್ನು ಕೊಲ್ಲುತ್ತಿರುವುದನ್ನು, ಅದರ ಕೊರಳಿನಿಂದ ರಕ್ತ ಹರಿಯುತ್ತಿರುವುದನ್ನು ಸುಮಾರು ಒಂದು ನಿಮಿಷ ಕಾಲ ತೋರಿಸಲಾಗಿದೆ.)

ಹಿನ್ನೆಲೆ ಧ್ವನಿ: ಈಗಿನ ಸರಕಾರವು ಕಸಾಯಿಗಳಿಗೆ ಪೂರ್ಣ ಬೆಂಬಲವನ್ನು ನೀಡುತ್ತಿದೆ. ಗೋಮಾತೆಯ ಮೇಲೆ ಕ್ರೂರವಾದ ದೌರ್ಜನ್ಯಗಳನ್ನು ನಡೆಸಲಾಗುತ್ತಿದೆ.



ಸಿಡಿಯನ್ನು ಬಿಡುಗಡೆ ಮಾಡುತ್ತಿರುವ ಚೆಡ್ಡಿಗಳು

ಎರಡನೇ ಕಂತು: ಜನಸಂಖ್ಯೆ ಹೆಚ್ಚಳ ಮುಸ್ಲಿಂ ಮಹಿಳೆಯರ ಕರ್ತವ್ಯ

ಮಾಸ್ಟರ್‌ಜಿ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿರುವ ಮಹಿಳೆಯೊಬ್ಬಳನ್ನು ನಿಲ್ಲಿಸುತ್ತಾರೆ.

ಮಾಸ್ಟರ್‌ಜಿ: ಚುನಾವಣೆ ಬರುತ್ತಿದೆ. ಮತ ಹಾಕುವ ಮುನ್ನ ಜಾಗರೂಕತೆಯಿಂದ ಆಲೋಚಿಸು ಹಾಗೂ ಕಮಲದ ಹೂವಿನ ಚಿಹ್ನೆಗೆ ಮಾತ್ರ ನಿನ್ನ ಮತಮುದ್ರೆ ಒತ್ತು, ಈ ದೇಶಕ್ಕೆ ಶಾಂತಿ ಬರುವುದಾದರೆ ಅದು ಬಿಜೆಪಿಯ ಆಡಳಿತದಡಿಯಲ್ಲಿ ಮಾತ್ರ ಸಾಧ್ಯ. ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳು ಮುಲ್ಲಾಗಳ ಹಾಗೂ ಮೌಲ್ವಿಗಳ ಪಕ್ಷಗಳು.

ಮಹಿಳೆ: ಹೀಗೆ ಹೇಳುತ್ತಿರುವುದಕ್ಕೆ ಕ್ಷಮಿಸಿ. ನಾನೂ ಕೂಡ ಮುಸ್ಲಿಮಳು. ಮುಲ್ಲಾಗಳು ಹಾಗೂ ಮೌಲ್ವಿಗಳು ಮಹಿಳೆಯರನ್ನು ತಮ್ಮ ಸ್ವಂತ ಸೊತ್ತುಗಳೆಂದೇ ಭಾವಿಸಿದ್ದಾರೆ.

(ಕಪ್ಪು ಬುರ್ಖಾ ಧರಿಸಿರುವ ಮಹಿಳೆಯರ ಗುಂಪಿನ ದೃಶ್ಯ)

ಮೊದಲನೆ ಮಹಿಳೆ: ಮಕ್ಕಳನ್ನು ಉತ್ಪಾದಿಸಿ ಜನಸಂಖ್ಯೆಯನ್ನು ಹೆಚ್ಚಿಸುವುದು ಮಹಿಳೆಯರ ಕರ್ತವ್ಯ.

ಎರಡನೆ ಮಹಿಳೆ: ಈ ಸೋದರಿ ಹೇಳುತ್ತಿರುವುದು ನಿಜ. ಯಾರು ಹತ್ತಕ್ಕಿಂತ ಹೆಚ್ಚು ಮಕ್ಕಳನ್ನು ಹುಟ್ಟಿಸುತ್ತಾರೋ ಅವರಿಗೆ ಆರ್ಥಿಕ ನೆರವು ನೀಡಲಾಗುವುದೆಂಬ ಆದೇಶವೊಂದನ್ನು ನಮ್ಮ ನಾಯಕರು ಹೊರಡಿಸಿದ್ದಾರೆ.

(ಮತ್ತೆ ಮಾಸ್ಟರ್‌ಜಿ ಮತ್ತು ಮಹಿಳೆಯ ನಡುವಿನ ಸಂಭಾಷಣೆಯ ದೃಶ್ಯ).

ಮಹಿಳೆ: ನಾವು ಉಪಯೋಗದ ವಸ್ತುಗಳೆಂದು ಈ ಧರ್ಮವು ನಮ್ಮನ್ನು ಪರಿಗಣಿಸಿದೆ.

ಮಾಸ್ಟರ್ಜೀ: ಸರಿಯಾಗಿ ಹೇಳಿದೆ. ಎಲ್ಲ ಮಹಿಳೆಯರು ನಿನ್ನಂತೆ ವಿದ್ಯಾವಂತರು ಹಾಗೂ ವಿವೇಕಿಗಳಾದಲ್ಲಿ ದೇಶದ ಭವಿಷ್ಯವು ಸುಧಾರಿಸುವುದು.

(ಕೇಸರಿ ಧರಿಸಿದ ಮಹಿಳೆಯೊಬ್ಬಳ ಭಾಷಣದ ನೈಜ ಸುದ್ದಿ ತುಣುಕುಗಳ ಪ್ರದರ್ಶನ: "ಹಿಂದೂಗಳು ಇಬ್ಬರು ಮಕ್ಕಳನ್ನು ಹುಟ್ಟಿಸುತ್ತಾರೆ. ಆದರೆ ಮುಸ್ಲಿಮರು ಐದು ಬಾರಿ ಮದುವೆಯಾಗುತ್ತಾರೆ ಹಾಗೂ 35 ಕುನ್ನಿಗಳನ್ನು ಹಡೆಯುತ್ತಾರೆ. ಆ ಮೂಲಕ ಈ ರಾಷ್ಟ್ರವನ್ನು ಇಸ್ಲಾಮಿಕ್ ರಾಜ್ಯವನ್ನಾಗಿ ಮಾಡುತ್ತಿದ್ದಾರೆ.)

ಮಾಸ್ಟರ್‌ಜಿ (ಅಂಗಡಿ ಮಾಲೀಕರ ಗುಂಪನ್ನುದ್ದೇಶಿಸಿ): ಈ ಅವಕಾಶವು ತಪ್ಪಿಹೋಗದಂತೆ ನೋಡಿಕೊಳ್ಳಿ. ಈ ಬಾರಿ ನೀವು ಬಿಜೆಪಿಗೆ ಮತ ನೀಡದಿದ್ದರೆ ಈ ದೇಶಕ್ಕೆ ಅನಾಹುತವು ಬಂದೆರಗಲಿದೆ. ದೇಶವು ನಾಶವಾಗಲಿದೆ. ಬಿಜೆಪಿಯು ದೇಶದ ಬಗ್ಗೆ ಚಿಂತಿಸುವ ಪಕ್ಷವಾಗಿದೆ. ಈ ಪಕ್ಷದಂತೆ ಇನ್ನಾವುದೇ ಪಕ್ಷವಿಲ್ಲ, ಉಳಿದೆಲ್ಲ ಪಕ್ಷಗಳು ಮುಸ್ಲಿಮರ ಏಜೆಂಟರುಗಳು. ಇದಕ್ಕಿಂತ ಹೆಚ್ಚಾಗಿ ಅವೇನು ಮಾಡಬಲ್ಲವು? ನಾವು ಬಿಜೆಪಿಗೆ ಮಾತ್ರ ಮತ ನೀಡಬೇಕೆಂದು ನಾನು ನಿಮಗೆ ಹೇಳುತ್ತೇನೆ.

ಅಂಗಡಿಯಾತ: ಮಾಸ್ಟರ್‌ಜಿ, ನನಗೆ ಅಂಗಡಿಯನ್ನು ನಡೆಸಬೇಕಾಗಿದೆ. ಇಲ್ಲಿಗೆ ಹಿಂದೂ ಹಾಗೂ ಮುಸ್ಲಿಮರೆಲ್ಲರೂ ಬರುತ್ತಾರೆ. ಯಾವುದೇ ಸರಕಾರ ಬಂದರೆ ನನಗೇನಂತೆ? ಬೆಳಗ್ಗೆ ನೀವು ಬಿಜೆಪಿ ಧ್ವಜವನ್ನು ಹಾರಿಸಿದ್ದೀರಿ. ನೀವು ಒಂದು ಕಪ್ ಚಹಾವನ್ನು ಬಯಸುವಿರಾದರೆ ನಿಮಗೆ ಸ್ವಾಗತವಿದೆ. ಇಲ್ಲದಿದ್ದಲ್ಲಿ ದಯವಿಟ್ಟು ನನ್ನನ್ನು ಕ್ಷಮಿಸಿ.

ಮಾಸ್ಟರ್‌ಜಿ: ಚಹಾ? ನಿನ್ನ ಚಹಾಕ್ಕಾಗಿ ನಾನು ಹಂಬಲಿಸುತ್ತಿದ್ದೇನೆಂದು ನೀನು ಭಾವಿಸಿದ್ದೀಯ? ಈ ದೇಶ ಹಾಗೂ ನಮ್ಮ ಧರ್ಮದ ಬಗ್ಗೆ ನಾನು ಕಾಳಜಿ ಹೊಂದಿರುವುದರಿಂದಲೇ ನೀವೆಲ್ಲರೂ ಬಿಜೆಪಿಗೆ ಮತ ಚಲಾಯಿಸುವಂತೆ ನಾನು ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ನೀವು ಬಿಜೆಪಿಗೆ ಮತ ನೀಡದಿದ್ದಲ್ಲಿ, ಆದಕ್ಕಾಗಿ ನೀವು ಪಶ್ಚಾತ್ತಾಪಪಡಲಿರುವಿರಿ. ಈ ದೇಶವು ಗುಲಾಮಗಿರಿ ಗೊಳಗಾಗಲಿದೆ. ಮೊದಲಿಗೆ ಅದು ಬ್ರಿಟಿಷರ ಗುಲಾಮಗಿರಿಗೊಳಪಟ್ಟಿತ್ತು, ಈಗ ಮುಸ್ಲಿಮರ ಗುಲಾಮಗಿರಿಗೊಳಗಾಗಲಿದೆ. ಇದಕ್ಕೂ ಮುನ್ನವೇ ಭಾರತವು ಮುಸ್ಲಿಮರ ಗುಲಾಮಗಿರಿಗೆ ತುತ್ತಾಗಿತ್ತು. ಆ ಔರಂಗಜೇಬ್ ಮೊದಲು ನಿಮ್ಮ ಜುಟ್ಟನ್ನು ಕತ್ತರಿಸಿದ್ದ ಮತ್ತು ನಿಮ್ಮ ಜನಿವಾರವನ್ನು ಕಿತ್ತುಹಾಕಿದ್ದ, ಈಗ ನಿಮ್ಮ ಹಣೆಯಲ್ಲಿ ತಿಲಕಗಳಿವೆ. ಆದರೆ ಇದು ಹೀಗೆ ಮುಂದುವರೆದರೆ ನೀವು ಗಡ್ಡಗಳನ್ನು ಬೆಳೆಸಬೇಕಾಗುತ್ತದೆ. ಆ ದಿನದಂದು ನೀವು ಪಶ್ಚಾತ್ತಾಪ ಪಡಲಿರುವಿರಿ ಪಂಡಿತ್‌ಜೀ, ಮತ್ತು ನೀವು ನಾಶವಾಗಲಿರುವಿರಿ. ಈ ರಾಷ್ಟ್ರ ಕೂಡಾ.

ಅಂಗಡಿಯಾತ: ಈತನಿಂದ ನಿಜವಾಗಿಯೂ ಕಿರಿಕಿರಿಯಾಗುತ್ತಿದೆ.

ಸ್ನೇಹಿತ: ಪಂಡಿತ್‌ಜೀ, ನೀವು ಮಾಸ್ಟರ್‌ಜಿಯವರನ್ನು ಹುಚ್ಚನೆಂದು ಕರೆಯುತ್ತಿದ್ದೀರಿ. ಆದರೆ ಆತ ಹೇಳುತ್ತಿರುವುದೆಲ್ಲಾ ನಿಜ. ಇಂದು ನಾವು ಜಾಗರೂಕತೆ ವಹಿಸದಿದ್ದಲ್ಲಿ ಈ ತಿಲಕಗಳು ಹೋಗಲಿವೆ ಹಾಗೂ ನಾವು ಗಡ್ಡಗಳನ್ನು ಮತ್ತು ಟೋಪಿಗಳನ್ನು ಧರಿಸಬೇಕಾಗುತ್ತದೆ.

ಮೂರನೇ ಕಂತು: 'ನೀವು ಬುರ್ಖಾದೊಳಗಿರುವಿರಿ'

ಮಾಸ್ಟರ್‌ಜಿ: (ಬೆಲೆಯೇರಿಕೆ ಬಗ್ಗೆ ದೂರುವ ಮಹಿಳೆ

ಕುಮಾರಸ್ವಾಮಿಗೂ-ತೇಜಸ್ವಿಗೂ ಏನು ಸಂಬಂಧ?

ಥೂತ್ತೇರಿ

ಮಾಹೂ

ತೇಜಸ್ವಿಯವರು ತೀರಿಕೊಂಡರೆಂಬ ಸುದ್ದಿ ರ್ಕಾರಕ್ಕೆ ಮುಟ್ಟಿದ ಕೂಡಲೇ ಮುಖ್ಯಮಂತ್ರಿ ಹೋಗಿ ಗೌರವ ಸಲ್ಲಿಸಬೇಕಾಗಬಹುದೆಂಬ ಗೊಣಗಾಟ ವತ್ತನಿಂದ ಹೊರಬತ್ತಂತಲ್ಲ. ಆಗ ಮಂಗಳೂರಲ್ಲಿ ನೂರಣ ಹೋಮದಲ್ಲಿ ತಲ್ಲೀನರಾಗಿದ್ದ ಮುಖ್ಯಮಂತ್ರಿಯನ್ನು ಸಂಪರ್ಕಿಸಲಾಯ್ತಂತಲ್ಲಾ, ಆ ಕಡೆಯಿಂದ ಮುಖ್ಯಮಂತ್ರಿಗಳು ಸರ್ಕಾರದ ಗಾರಕೂನರಿಗೆ ತುಂಬ ಅಸಹನೆಯಿಂದಲೇ ಕೇಳುತ್ತ

"ಏನಾಗಿದ್ರು ಅವರು?"

"ದೊಡ್ಡ ಸಾಹಿತಿಗಳು, ಕುವೆಂಪು ಮಗ ಸಾರ್."

"ನಮ್ಮ ಪಾರ್ಟಿಲಿದ್ರ?"

"ಇಲ್ಲ ಸಾರ್. ಯಾವ ಪಾರ್ಟಿಲೂ ಇರಲಿಲ್ಲ. ಎಲ್ಲಾ ಆಳುವ ವರ್ಗವನ್ನು ಟೀಕೆ ಮಾಡತಿದ್ರು."


"ನಮ್ಮ ಬಗ್ಗೆ ಏನಾದ್ರು ಟೀಕೆ ಮಾಡಿದ್ರಂತ?"

"ಹೌದು ಸಾರ್, ಆ ಗುಂಡೂರಾಯನನ್ನು ಸಹಿಸಿಕೊಂಡಂತೆ ಕುಮಾರಸ್ವಾಮಿನೂ ಸಯಿಸಿ ಕೊಳ್ರೋಣ ಬಿಡಿ ಅಂದಿದ್ರಂತೆ."

"ಮತ್ತೆ ಅಂತ ವ್ಯಕ್ತಿ ಸಾವಿಗೆ ಹೋಗಕ್ಕೆ ಬರುತ್ತೇನ್ರಿ, ಇಲ್ಲಿ ಸರ್ಪಯಾಗ ನಡೀತಿದೆ. ಮಧ್ಯದಲ್ಲಿ ಎಲ್ಲೂ ಹೋಗಬಾರದಂತೆ. ಹಾಗಾಗಿ ನಾನೋಗದಿಲ್ಲ" ಎಂದರಂತಲ್ಲಾ. "ಹೋಗ್ಲಿ ಒಂದು ಸಂತಾಪದ ಹೇಳಿಕೆನಾದ್ರು ಕೊಡಿ ಸಾರ್" ಎಂದಾಗ ಕುಮಾರಣ್ಣನವರು "ಏನಂತಕೊಡ್ಲಿ" ಎಂದರಂತಲ್ಲಾ, ಆಗ ಸರ್ಕಾರದ ಕರ್ಮಾಚಾರಿ- "ಅವರು ದೊಡ್ಡ ಸಾಹಿತಿಗಳು. ತುಂಬಲಾರದ ನಷ್ಟ ಎಂದು ಹೇಳಿ" ಎಂದಾಗ ಕುಮಾರಣ್ಣ ಅದನ್ನೇ ಉರುಹೊಡೆದು ಹೇಳಿದರಂತಲ್ಲಾ, ಥೂತ್ತೇರಿ!

* * * * * * * * * *

ಕುಮಾರಣ್ಣ ಕರ್ನಾಟಕ ಕಂಡ ವಿಸ್ಮಯ ಚೇತನವೊಂದಕ್ಕೆ ಮಾಡಿದ ಅವಮಾನವನ್ನು, ಮಾನವಂತ ನಡವಳಿಕೆಯಾಗಿ ಗ್ರಹಿಸಿದ ತೇಜಸ್ವಿ ಅಭಿಮಾನಿಗಳು "ಆ ಕುಮಾರಸ್ವಾಮಿಗೂ ತೇಜಸ್ವಿಗೂ ಎಲ್ಲಿಂದೆಲ್ಲಿಯ ಸಂಬಂಧ. ಅಂತಹ ವ್ಯಕ್ತಿಯೊಬ್ಬ ತನ್ನ ಯೋಗ್ಯತೆಯನ್ನು ಅಳೆದು ಸುರಿದು ಕಡೆಗೆ ತೇಜಸ್ವಿ ನೋಡಲು ಬರದೇ ಹೋಗಿದ್ದೆ, ಆತ ತೇಜಸ್ವಿಗೆ ತೋರಿದ ಗೌರವ" ಎಂದು ಪ್ರಶಂಸೆಯ ಮಾತುಗಳನ್ನಾಡುತ್ತಿದ್ದಾರಂತಲ್ಲಾ, ಇತ್ತ ಕುಮಾರಸ್ವಾಮಿಯ ಬದಲಿಗೆ ಬೇಲೂರು ಕುಮಾರಸ್ವಾಮಿ ತೇಜಸ್ವಿಯ ಸಂಸ್ಕಾರದಲ್ಲಿ



ಭಾಗವಹಿಸಿ ಬಂದು ಯಾರೂ ತನ್ನನ್ನು ಗುರುತಿಸಲಿಲ್ಲ, ಮಾತನ್ನು ಆಡಿಸಲಿಲ್ಲ, ಹೋಗಲಿ ನೀನ್ಯಾರು ನಿನ್ನ ಖಾತೆ ಯಾವುದೆಂದೂ ಕೇಳಲಿಲ್ಲವೆಂದು ಕೊರಗುತ್ತಿರುವಾಗಲೇ ಬೇಲೂರ ದಲಿತರು, "ಲೇ ದಲಿತ ದ್ರೋಹಿ ನೀನು ಒಬ್ಬ ಮಂತ್ರಿನ, ನೀನು ಒಬ್ಬ ಮನುಷ್ಯನ?" ಎಂದು ಕುತ್ತಿಗೆ ಪಟ್ಟಿಹಿಡಿದು ಕೇಳಿದರಂತಲ್ಲಾ, ಥೂತ್ತೇರಿ!!

* * * * * * * * * *

ಮೊನ್ನೆ ಅಂಬೇಡ್ಕರ್ ವಿರೋಧಿಗಳಾದ ಕುಮಾರಸ್ವಾಮಿ, ಎಡ್ಯೂರಪ್ಪ ಇತ್ಯಾದಿ ಜನಗಳು ಆತ ತಮ್ಮ ಚಿಕ್ಕಪ್ಪ ಎಂಬಂತೆ ಕೊಂಡಾಡುತ್ತಿರುವಾಗಲೇ, ಪೇಜಾವರ ಶ್ರೀ ಎಂಬ ಸ್ವಾಮಿಗಳು "ಅಂಬೇಡ್ಕರ್ ಹಿಂದೂ ಧರ್ಮ ಬಿಟ್ಟು ಬೌದ್ಧ ಧರ್ಮ ಸೇರಿದ್ದು ಹಿಂದೂ ಧರ್ಮಕ್ಕೆ ಒಂದು ಕಳಂಕ. ಆ ಸಮಯದಲ್ಲಿ ನಾನಿದ್ದರೆ, ನಮ್ಮ ಮಾಧ್ವ ಧರ್ಮಕ್ಕೆ ಸೇರಿಸಿಕೊಳ್ಳುತ್ತಿದ್ದೆ" ಎಂದರಂತಲ್ಲಾ, ಅಂಬೇಡ್ಕರ್ ತುಂಬಾ ಯೋಚಿಸಿ ಬೌದ್ಧ ಧರ್ಮಕ್ಕೆ ಹೋದರು. ತೀರಾ ಸಿಟ್ಟುಗೊಂಡು ಮಾಧ್ವರಾಗಿದ್ದರೆ ಗತಿಯೇನು ಸ್ವಾಮೀಜಿ ಎಂದು ಭಕ್ತರೊಬ್ಬರು ಕೇಳಲಾಗಿ, ಸದ್ಯ ಆ ಪುಣ್ಯಾತ್ಮ ಬೌದ್ಧರಾದರಲ್ಲ, ನಾವು ಕೃತಜ್ಞತೆ ಹೇಳಬೇಕಾಗಿದೆ ಎಂದರಂತಲ್ಲಾ, ಥೂತ್ತೇರಿ!!

* * * * * * * * * *

ನಿಮ್ಮ ಇನ್ಫೋಸಿಸ್ ನಾರಾಯಣಿ ಕಾವೇರಿ ಹೋರಾಟ, ರಾಷ್ಟ್ರಗೀತೆ ಇತ್ಯಾದಿಯೆಲ್ಲವನ್ನು ಹಗುರವಾಗಿ ಪರಿಗಣಿಸಿ ಮಾತನಾಡಿದ್ದಕ್ಕೆ ಎಲ್ಲರೂ ಉಗಿಯುತ್ತಿರುವಾಗ, ಚಿಡ್ಡಿ ಭೈರಪ್ಪ ವೀರಾವೇಶದಿಂದ ಬಂದು ಆ ಮೂರ್ತಿ ಪರ ಲಾಠಿ ಬೀಸಿದ್ದಾರಂತಲ್ಲಾ, ಕರ್ನಾಟಕದ ಯಾವುದೇ ಸಮಸ್ಯೆಗೆ ಗೂಟ ಜಡಿದುಕೊಂಡು ಜಪ ಮಾಡುವ ಭೈರಪ್ಪ ಈಗ ಇದ್ದಕ್ಕಿದ್ದಂತೆ ನಾರಾಯಣಮೂರ್ತಿ ಪರ ಲಾಠಿ ಬೀಸಲು ಕಾರಣವೇನೆಂದು ಕೇಳಿದರೆ, ಮೈಸೂರಿನ ಚಾರ್ವಾಕರು ಅಷ್ಟೂ ಗೊತ್ತಿಲ್ಲವೇನ್ರಿ? ಆ ಭೈರಪ್ಪನ ಆವರಣ ಕಾದಂಬರಿನ ನಾರಾಯಣ ಮೂರ್ತಿ ನಾಲ್ಕು ಬಾರಿ ಓದಿದ್ದನಂತೆ. ಅದಕ್ಕೆ ಭೈರ ನಿಜವಾದ ಭೈರಿಗೆಯಾಗಿದ್ದು ಎಂದರಂತಲ್ಲಾ, ಥೂತ್ತೇರಿ!!! ●

ರನ್ನುದ್ದೇಶಿಸಿ): .ಕೇಳಿ, ಚುನಾವಣೆಗಳು ಬರುತ್ತಿವೆ ತ್ತು ನೀವು ನೀಡುವ ಮತಗಳಿಂದ ಮಾತ್ರವೇ ಈ ಶ ಹಾಗೂ ಹಿಂದೂ ಧರ್ಮ ಉಳಿಯಬಹುದು. ಲ್ಲದಿದ್ದಲ್ಲಿ ನಾವು ಗುಲಾಮಗಿರಿಯ ದವಡೆಗಳಲ್ಲಿ ತ್ತೊಮ್ಮೆ ಸಿಲುಕಬೇಕಾಗಬಹುದು. ಈ ಬಾರಿ ನಾವು ಜೆಪಿಯನ್ನು ವಿಜಯಶಾಲಿಯಾಗಿ ಮಾಡಬೇಕಾಗಿದೆ. ರಕ್ಕೆ ನಾವು ತಾವರೆ ಚಿಹ್ನೆಗೆ ಮತ ಹಾಕಬೇಕಿದೆ.

ಮೊದಲನೆಯ ಮಹಿಳೆ: ನಿಮಗೆ ಒಳ್ಳೆಯದ್ಯಾವು ದು ಚೆನ್ನಾಗಿ ತಿಳಿದಿದೆ. ನೀವು ಹೇಳಿದ್ದಕ್ಕೆ ಮತ ಕುತ್ತೇವೆ.

ಎರಡನೆ ಮಹಿಳೆ: ಜನರು ನಮ್ಮ ಮತ ಕೇಳಲು ುತ್ತಲೇ ಇದ್ದಾರೆ.

ಮೂರನೆ ಮಹಿಳೆ: ಯಾರೂ ಕೂಡ ಬೆಲೆಯೇರಿಕೆಯ ಗ್ಗೆ ಚಿಂತಿಸುತ್ತಿಲ್ಲ.

ಮಾಸ್ಟರ್‌ಜಿ: ಅದನ್ನೇ ನಾನು ಹೇಳುತ್ತಿರುವುದು. ಜೆಪಿ ಅಧಿಕಾರಕ್ಕೆ ಬಂದಲ್ಲಿ ಎಲ್ಲವೂ ಸರಿಯಾಗಲಿದೆ.

ಮೊದಲನೆ ಮಹಿಳೆ: ಮಾಸ್ಟರ್ಜಿ, ನೀವ್ಯಾಕೆ ನಮ್ಮ ತಿನ್ನುತಿರುವಿರಿ? ಜನರು ಅವರಿಗೆ ಬೇಕಾದವರಿಗೆ ತ ನೀಡುತ್ತಾರೆ.

ಮಾಸ್ಟರ್‌ಜಿ: ಹಾಳಾಗಿರುವುದು ನಿನ್ನ ಮೆದುಳು! ನು ಬುರ್ಖಾವನ್ನು ಹಾಕಿಕೊಂಡು, ಪಾನ್ ತಿನ್ನಬೇಕಾ ತಹ ಪರಿಸ್ಥಿತಿ ಬರಲಿದೆ.

ನಾಲ್ಕನೇ ಕಂತು:

ಮುಸ್ಲಿಮರಿಂದ ಹಿಂದೂ ಹುಡುಗಿಯ ಅಪಹರಣ

(ಸಾಮಾಜಿಕ ಕಾರ್ಯಕರ್ತನೊಬ್ಬನು ಚಮೇಲಿ ಚಿಯನ್ನು ಹುಡುಕುತ್ತಾ ಹಳ್ಳಿಯೊಂದಕ್ಕೆ ಬರುತ್ತಾನೆ. ಚಿ ಹಾಸಿಗೆಯೊಂದರಲ್ಲಿ ಬಿದ್ದುಕೊಂಡಿದ್ದಾಳೆ.)

ಸಾಮಾಜಿಕ ಕಾರ್ಯಕರ್ತ: ಚಾಚಿ, ಏನಾಯಿತು?

ಚಮೇಲಿ: ಹಿಂದೂವೆಂದು ಸೋಗು ಹಾಕಿದ ುಸ್ಲಿಮ್ ಹುಡುಗನೊಬ್ಬ ನನ್ನ ಸಣ್ಣ ಮಗಳನ್ನು ರಳುಮಾಡಿ ಕೊಂಡೊಯ್ದಿದ್ದಾನೆ. ಅಪಮಾನಕ್ಕೆ ಹೆದರಿ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನಾನು ೊಲೀಸರ ಬಳಿಗೆ ಹೋಗುತ್ತೇನೆಂದು ಹೇಳಿದರೆ, ಆ ರು ನನಗೆ ಬೆದರಿಕೆಯೊಡ್ಡುತ್ತಿದ್ದಾರೆ.

(ಬೆದರಿಸುವ ನೋಟದೊಂದಿಗೆ ರುಮಾಲು ಧರಿ ಮುಸ್ಲಿ ವ್ಯಕ್ತಿಯೊಬ್ಬನ ಚಿತ್ರವನ್ನು ಪ್ರದರ್ಶಿಸಲಾಗುತ್ತದೆ).

ನೀವು ನಮ್ಮ ಬಗ್ಗೆ ದೂರು ನೀಡಿದರೆ, ನಿನ್ನ ಗಳನ್ನು ಕೊಲ್ಲುತ್ತೇನೆ ಎಂದವರು ಹೆದರಿಸುತ್ತಿದ್ದಾರೆ. ಹೇಳಿ ನಾನೇನು ಮಾಡಬೇಕು?.

ಸಾಮಾಜಿಕ ಕಾರ್ಯಕರ್ತ: ಹೆದರಬೇಡಿ, ನಾನಿದ್ದೇನೆ. ರಕ್ಷಣೆಯನ್ನು ನಾನು ನೋಡಿಕೊಳ್ಳುತ್ತೇನೆ. ನಾವು ಸಮಸ್ಯೆಯನ್ನೂ ಪರಿಹರಿಸುತ್ತೇವೆ.

ಚಮೇಲಿ: ದಯವಿಟ್ಟು, ನನ್ನ ಮಗಳನ್ನು ವಾಪಸ್ ಕರೆತನ್ನಿ. ಅವಳಿಗೆ ಎಂತಹ ಕಾಟ ಕೊಟ್ಟಿದ್ದಾರೋ, ಏನೋ.

(ಚಮೇಲಿಯ ಮಗಳು ಶ್ರೀ ಕೃಷ್ಣನ ಚಿತ್ರದ ಮುಂದೆ ಪ್ರಾರ್ಥಿಸುವ ದೃಶ್ಯ)

ಮಗಳು: ಓಂ ಜೈ ಜಗದೀಶ್ ಹರೇ!...

(ವ್ಯಕ್ತಿಯೊಬ್ಬ ಬಂದು ಕೃಷ್ಣನ ಫೋಟೋವನ್ನು ನೆಲಕ್ಕೆಸೆಯುತ್ತಾನೆ).

ವ್ಯಕ್ತಿ: ನೀನು ಈ ಮನೆಯಲ್ಲಿ ಮತ್ತೊಮ್ಮೆ ಪೂಜೆ ಮಾಡಿದರೆ, ನಾನು ನಿಜವಾಗಿಯೂ ನಿನಗೆ ತಕ್ಕ ಶಾಸ್ತಿ ಮಾಡುತ್ತೇನೆ. ನೆನಪಿನಲ್ಲಿಟ್ಟುಕೋ...

ಯುವತಿ: ನೀನೇನು ಮಾಡಿದೆ ರಾಮ್? ಭಗವಾನ್ ಜೀಯ ಚಿತ್ರವನ್ನು ನೀನು ಎಸೆದಿರುವೆ !

ವ್ಯಕ್ತಿ: ನಾನು ಹೇಳುವುದನ್ನು ಗಮನವಿಟ್ಟು ಕೇಳು. ನಾನು ರಾಮ್ ಆಗಿ ಉಳಿದಿಲ್ಲ ಹಾಗೂ ನೀನು ಗೀತಾ ಆಗಿ ಉಳಿದಿಲ್ಲ, ಇಂದಿನಿಂದ ನಿನ್ನ ಹೆಸರು ಫಾತಿಮಾ ಬೇಗಮ್. ಮತ್ತು ನಾಳೆ ನೀನು ಯಾಮೀನ್‌ನನ್ನು ನಮ್ಮ ಸಂಪ್ರದಾಯದ ಪ್ರಕಾರ ಮದುವೆಯಾಗಲಿರುವೆ.

(ವೃದ್ಧನೊಬ್ಬ ದುಷ್ಟತನದಿಂದ ನಗುವ ದೃಶ್ಯವನ್ನು ತೋರಿಸಲಾಗುತ್ತದೆ).

ಯುವತಿ: (ಅಳುತ್ತಾ) ನೀನು ಸುಳ್ಳು ಹೇಳುತ್ತಿರುವೆ. ಹಾಗಾಗಲಾರದು.

ವ್ಯಕ್ತಿ: (ಯುವತಿಗೆ ಹೊಡೆಯುತ್ತಾನೆ) ನಮ್ಮ ಇಸ್ಲಾಂಗೆ ವಿರುದ್ಧವಾದ ಯಾವುದೇ ಹೆಸರನ್ನು ಉಚ್ಚರಿಸಬಾರದು. ಈ ಚಿತ್ರಗಳಲ್ಲೇನಿದೆ? (ನೆಲದ ಮೇಲೆ ಬಿದ್ದಿರುವ ಕೃಷ್ಣನ ಫೋಟೋದತ್ತ ಕ್ಯಾಮರಾ ಸರಿಯುತ್ತದೆ). ದೇವರೆಲ್ಲಿದ್ದಾನೆ? ಅವೆಲ್ಲವೂ ಸುಳ್ಳುಗಳು. ನಿನಗೆ ಪ್ರಾರ್ಥಿಸಬೇಕೆಂದಿದ್ದಲ್ಲಿ ಇಡೀ ವಿಶ್ವವನ್ನೇ ಸೃಷ್ಟಿಸಿದ ಖುದಾನನ್ನು ಪ್ರಾರ್ಥಿಸು.

ಯುವತಿ: (ಅಳುತ್ತಾ ಆತನ ಕಾಲಿಗೆ ಬೀಳುತ್ತಾಳೆ ಮತ್ತು ಕೈ ಜೋಡಿಸಿ ಪ್ರಾರ್ಥಿಸುತ್ತಾಳೆ) ನನ್ನ ಮನೆಗೆ ಹೋಗಲು ನನ್ನನ್ನು ಬಿಡು.

ವ್ಯಕ್ತಿ: ಮನೆ? ಹಾ ಹಾ ಹಾ! ಯಾವ ಮನೆ? ಇದು ನಿನ್ನ ಮನೆ ಹಾಗೂ ನೀನಿಲ್ಲಿ ಬಾಳಬೇಕಾಗಿದೆ. ಆ ಪೂಜೆ-ಗೀಜೆಗಳನ್ನು ನಿಲ್ಲಿಸು ಮತ್ತು ನಮಾಜ್ ಮಾಡಲು ಆರಂಭಿಸು. ಏಕೆಂದರೆ ನಾಳೆಯಿಂದ ನೀನು ನಿಜವಾದ ಮುಸ್ಲಿಮಳಾಗಬೇಕಿದೆ. ಯಾಮಿನ್, ಇಲ್ಲಿಗೆ ಬಾ! ಈ ಹುಡುಗಿಯನ್ನು ಕರೆದುಕೊಂಡು ಹೋಗು. ನಾಳೆ ನೀನು ಆಕೆಯನ್ನು ಮದುವೆಯಾಗಲಿರುವೆ.

(ಯಾಮಿನ್ ಆಕೆಯನ್ನು ದುಪ್ಪಟವಿಲ್ಲದೆ ಕೊಂಡೊಯ್ಯುತ್ತಾನೆ).

ವ್ಯಕ್ತಿ: ಹಾ ಹಾ ಹಾ! ಹಿಂದೂ ಹುಡುಗಿಯರು ನಮ್ಮ ಬಲೆಯಲ್ಲಿ ಬಿದ್ದಾಗ, ಅವರು ಅಳುತ್ತಾರೆ ಹಾಗೂ ಬೊಬ್ಬೆ ಹಾಕುತ್ತಾರೆ. ಆದರೆ ಅವರನ್ನು ಯಾರೂ ಕೇಳುವವರಿಲ್ಲ, ನಮಗೆ ಮಾತ್ರ ಒಳ್ಳೆಯ ತಮಾಷೆ ಸಿಗುತ್ತದೆ. ಹಾ ಹಾ ಹಾ ಹಾ!.

ತೆರೆಯ ಮೇಲೆ ಟೈಟಲ್: ಜೆಹಾದ್‌ನಲ್ಲಿ ಪ್ರೇಮ, ಹಿಂದೂ ಧರ್ಮಕ್ಕೆ ಹಾನಿ ಹಾಗೂ ಬಲವಂತದ ಮತಾಂತರ ಇದು ಸಮಾಜವಾದಿ ಸರಕಾರವು ನೀಡಿರುವ ರಕ್ಷಣೆ.


ಐದನೇ ಕಂತು:

ಶೀಘ್ರದಲ್ಲೇ ನಖ್ವಿಗಳು ಮಾತ್ರವಿರುವರು. ಸೋಹನ್ ಲಾಲ್‌ಗಳಿರಲಾರರು

ಪತ್ರಿಕೆ ಮಾರುವವನೊಬ್ಬ ಭಯೋತ್ಪಾದಕ ದಾಳಿಗಳ ಸುದ್ದಿಯಿರುವ ಪತ್ರಿಕಾ ತಲೆಬರಹಗಳನ್ನು ಗಟ್ಟಿಯಾಗಿ ಓದುತ್ತಿದ್ದಾನೆ. ಹಲವು ವರ್ಷಗಳಿಂದ ತಾನು ಜನರನ್ನು ಈ ಬಗ್ಗೆಯೇ ಎಚ್ಚರಿಸುತ್ತಿದ್ದೆ ಎಂದು ಮಾಸ್ಟರ್‌ಜಿ ಚೀರುತ್ತಾನೆ. ಆಕ್ರೋಶದಿಂದ ಆತ ಪೇಪರ್ ಮಾರುವಾತನ ಬೈಸಿಕಲನ್ನು ದೂಡುತ್ತಾನೆ. ಬಳಿಕ ಮಾಸ್ಟರ್‌ಜಿ ಹೃದಯಾಘಾತದಿಂದ ನಿಧನ ಹೊಂದುತ್ತಾನೆ.

ಅಂತ್ಯಸಂಸ್ಕಾರದ ದೃಶ್ಯ: ಸಾಮಾಜಿಕ ಕಾರ್ಯಕರ್ತ, ಅಂಗಡಿ ಮಾಲೀಕರು ಹಾಗೂ ಈ ನಾಟಕದ ಹೆಚ್ಚಿನ ಎಲ್ಲ ಪಾತ್ರಧಾರಿಗಳು ಮಾಸ್ಟರ್‌ಜಿಯ ಪಾರ್ಥಿವ ಶರೀರವನ್ನು ಸುತ್ತುವರಿದಿದ್ದಾರೆ.

ಅಂಗಡಿ ಮಾಲೀಕ: ಈತನೊಬ್ಬ ಮಹಾನ್ ವ್ಯಕ್ತಿ ದೇಶ ಹಾಗೂ ನಮ್ಮ ಧರ್ಮದ ಬಗ್ಗೆ ಸದಾ ಚಿಂತಿಸುತ್ತಿದ್ದನು.



ಸಿಡಿಯಲ್ಲಿನ ಒಂದು ದೃಶ್ಯ

ಒಂದು ದಿನ ಆತ ನನ್ನ ಅಂಗಡಿಗೆ ಬಂದಿದ್ದನು ಹಾಗೂ 'ರಾಮ್‌ಜೀ ಈ ದೇಶವು ಮತ್ತೊಮ್ಮೆ ವಿಭಜನೆಯಾಗಲಿದೆ. ಏಕೆಂದರೆ ಹಿಂದೂಗಳು ತಮ್ಮ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ. ಸರಕಾರವೂ ಮುಸ್ಲಿಮರ ಪರವಾಗಿ ವರ್ತಿಸುತ್ತಿದೆ' ಎಂದು ಹೇಳಿದ್ದನು.

ಎರಡನೆಯ ಅಂಗಡಿಯ ಮಾಲೀಕ: ಹೌದು, ಆತನು ನಿಜವಾದ ದೇಶಭಕ್ತ, ಸಮಾಜವಾದಿ ಪಕ್ಷವೂ ಮುಸ್ಲಿಮ್ ಪರವೆಂದು ಆತ ಭಾವಿಸಿದ್ದನು. ಈಗ ಅದು ನಿಜವಾಗಿದೆ.

ಶೋಕತಪ್ತ ವ್ಯಕ್ತಿ: ಮುಲಾಯಂ ಸರ್ಕಾರವು 13 ಸಾವಿರ ಉರ್ದು ಶಿಕ್ಷಕರನ್ನು ನೇಮಿಸಿಕೊಂಡಿದೆಯೆಂದು ನಿಮಗೆ ಗೊತ್ತಿದೆಯೇ? ಹಾಗಾದರೆ ಈಗಿನಿಂದ ಉಲೇಮಾಗಳು ನಮಗೆ ಕಲಿಸಲಿದ್ದಾರೆಯೇ? ಅವರು ಹಿಂದೂಗಳ ಎಲ್ಲ ಪ್ರಶಂಸಾರ್ಹ ಪುಸ್ತಕಗಳನ್ನು ಪಠ್ಯಕ್ರಮದಿಂದ ತೆಗೆದುಹಾಕಿದ್ದಾರೆ. ಹಿಂದೂ ಸಂಸ್ಕೃತಿಗೇನಾಗಲಿದೆ?

ಸಾಮಾಜಿಕ ಕಾರ್ಯಕರ್ತ: ದೇಶದ ಮೇಲಿನ ಕಾಳಜಿಯಿಂದಾಗಿ ಇನ್ನೆಷ್ಟು ಮಾಸ್ಟರ್‌ಜಿಗಳು ಹುತಾತ್ಮರಾಗಲಿದ್ದಾರೆಂದು ಯಾರಿಗೆ ಗೊತ್ತು? ಆದರೆ ನಿಮ್ಮ ಕಣ್ಣುಗಳು ಇನ್ನೂ ತೆರೆದಿಲ್ಲ. ನಾವೆಲ್ಲರೂ ಹಿಂದೂಗಳೆಂದು ಕರೆದುಕೊಳ್ಳಲು ಹೆದರುವಂತಹ ದಿನಗಳು ಬಹುದೂರವಿಲ್ಲ, ಆಗ ನೀವು ಸೋಹನ್ ಲಾಲ್, ಮೋಹನ್‌ಲಾಲ್, ಆತ್ಮರಾಮನ್ ಮತ್ತು ರಾಧಾಕೃಷ್ಣನ್‌ರನ್ನು ಎಲ್ಲಿಯೂ ಹುಡುಕಲು ಸಾಧ್ಯವಾಗುವುದಿಲ್ಲ, ಆಗ ನಾವು ಎಲ್ಲಿ ನೋಡಿದರೂ, ಅಬ್ಬಾಸ್, ನಖ್ವಿ, ರಿರ್ಝ್ವಿ ಹಾಗೂ ಮೌಲ್ವಿಗಳನ್ನು ಮಾತ್ರ ನೋಡುತ್ತೇವೆ. ಎಲ್ಲ ಶಾಲೆಗಳೂ ಹಾಗೂ ಕಾಲೇಜುಗಳು ಮುಚ್ಚಲಿವೆ. ಮದ್ರಸಾಗಳನ್ನು ತೆರೆಯಲಾಗುವುದು ಹಾಗೂ ಹಿಂದೂಗಳನ್ನು ಈ ದೇಶದಿಂದ ಓಡಿಸುವಂತೆ ಅಲ್ಲಿಂದ ಫತ್ವಾಗಳು ಜಾರಿಗೊಳ್ಳಲಿವೆ. ಅವರನ್ನು ಗುಲಾಮಗಿರಿಗೊಳಪಡಿಸಿ. ಇಲ್ಲದಿದ್ದರೆ ಭಾರತವನ್ನು ಪಾಕಿಸ್ತಾನವಾಗಿ ಮಾಡುತ್ತಾರೆ. ಆಗ ಹಿಂದೂ ಹುಡುಗಿಯರಿಗೆ ತಮ್ಮ ಮನೆಯಿಂದ ಹೊರಗೆ ಹೋಗುವುದೇ ಕಷ್ಟಕರವಾಗಲಿದೆ. ಮುಸ್ಲಿಮರು ನಮ್ಮ ಮನೆಗಳನ್ನು ವಶಪಡಿಸಿಕೊಳ್ಳಲಿದ್ದಾರೆ. ಆಗ ನಮ್ಮ ಮಹಿಳೆಯರ ಮಾನವನ್ನು ರಕ್ಷಿಸುವವರು ಯಾರು?

ವೃದ್ಧ ವ್ಯಕ್ತಿ: ಇಲ್ಲ, ಹೀಗಾಗಲು ಬಿಡುವುದಿಲ್ಲ, ಮಾಸ್ಟರ್‌ಜಿಯವರ ಕನಸನ್ನು ನನಸು ಮಾಡಲು ಹಾಗೂ ಭಾರತವು ಪಾಕಿಸ್ತಾನವಾಗುವುದನ್ನು ತಡೆಯಲು ನಾವು ರಾಷ್ಟ್ರಕ್ಕಾಗಿ ಬದುಕಬೇಕಾಗಿದೆ. ಅದಕ್ಕಾಗಿ ಸಾಯಲೂ ನಾವು ಸಿದ್ಧವಾಗಬೇಕಾಗಿದೆ.

ಸಾಮಾಜಿಕ ಕಾರ್ಯಕರ್ತ: ಬನ್ನಿ, ನಾವೆಲ್ಲರೂ ಪ್ರತಿಜ್ಞೆ ಸ್ವೀಕರಿಸೋಣ .

(ಎಲ್ಲರೂ ಮಾಸ್ಟರ್‌ಜಿಯವರ ಪಾರ್ಥಿವ ಶರೀರದ ಮೇಲೆ ಕೈ ಜೋಡಿಸುವರು ಹಾಗೂ 'ವಂದೇ ಮಾತರಂ! ಜೈ ಶ್ರೀ ರಾಮ್! ವಂದೇ ಮಾತರಂ! ಜೈ ಶ್ರೀ ರಾಮ್!' ಎಂದು ಘೋಷಣೆಗಳನ್ನು ಕೂಗುವರು).

ಸಾಮಾಜಿಕ ಕಾರ್ಯಕರ್ತ: ಬ್ರಿಟಿಷರನ್ನು ಓಡಿಸಲು ವಂದೇಮಾತರಂ ಘೋಷಣೆಯು ನಮಗೆ ಸ್ಫೂರ್ತಿ ನೀಡಿದಂತೆ, ಇಂದು ಆ ದೇಶದ್ರೋಹಿಗಳನ್ನು ದೇಶದಿಂದ ಹೊರಗೆ ಓಡಿಸಲು ನಾವು ಪ್ರತಿಜ್ಞೆ ಸ್ವೀಕರಿಸಬೇಕಾಗಿದೆ.

(ಬಜೆಪಿಯ ಧ್ವಜದ ದೃಶ್ಯ).

ಸಾಮಾಜಿಕ ಕಾರ್ಯಕರ್ತ: ಬಜೆಪಿಯ ಧ್ವಜ ಹಾಗೂ ಕೇಸರಿ ಧ್ವಜವನ್ನು ಬೀಸುತ್ತಾ ಮುನ್ನಡೆಯೋಣ. ಜೈ ಶ್ರೀ ರಾಮ್!

(ಹಾಡುಗಳು, ಭಾಷಣಗಳನ್ನು ಮಾಡುವ ಬಜೆಪಿ ನಾಯಕರ ಭಾವಚಿತ್ರಗಳ ದೃಶ್ಯಗಳು ಹಾಗೂ ಬಾಬರಿ ಮಸೀದಿ ಧ್ವಂಸದ ಕ್ಲಿಪ್ಪಿಂಗ್‌ಗಳೊಂದಿಗೆ ಸಿಡಿ ಮುಕ್ತಾಯಗೊಳ್ಳುತ್ತದೆ).


(ಕೃಪೆ: ದಿ ಹಿಂದೂ)

ರಿವೇಂಜ್ ಕಿಲ್ಲಿಂಗ್ಸ್ 25

ರಾ. ಸೋಮನಾಥ್

ಬೆಂಗಳೂರು ಭೂಗತದ ಕನ್ನಡ ಹುಡುಗರ ಗ್ಯಾಂಗ್ ಲೀಡರ್, ಗೋಪಾಲಯ್ಯ ಬದ್ಧವೈರಿ, ತಿಮ್ಮೇನಹಳ್ಳಿ ತಮ್ಮಯ್ಯನ ನೆಚ್ಚಿನ ಬಂಟ ಮಂಜುನಾಥ ಅಲಿಯಾಸ್ ಮಚ್ಚ ಹೆಬ್ಬಾಳದ ಜ್ಯೂಡಿಷಿಯಲ್ ಲೇಔಟಿನ ಹದಿನಾಲ್ಕನೇ ಮೇನ್‌ನ ಪೈವಿಹಾರ್ ಕ್ಯಾಂಟೀನಿನ ಎದುರು ಹೆಣವಾಗಿ ಮಲಗಿದ್ದ. ಮಚ್ಚನಿಗೆ ಎಲ್ಲೆಂದರಲ್ಲಿ ಬಿದ್ದಿದ್ದ ಮಚ್ಚಿನೇಟಿಗೆ ಆತನ ದೇಹ ಮಾಂಸದ ಮುದ್ದೆಯಾಗಿ ಹೋಗಿತ್ತು.

ಹೊಂಚಿ ಕುಳಿತಿತ್ತು ಸಾವು



ಅಂಥಾ ಮಚ್ಚನೇ ಈ ರೀತಿ ಬರ್ಬರವಾಗಿ ಮುಗಿದು ಹೋಗಲಿದ್ದಾನೆ ಎಂದು!

ಕೇವಲ ಅರ್ಧಗಂಟೆಯೊಳಗೆ ಕಮ್ಮಿಯೆಂದರೂ ಮುನ್ನೂರು ಮಂದಿಯ ಪಡೆಯೊಂದನ್ನು ಜಮಾಯಿಸಬಲ್ಲ, ಯಾವತ್ತಿಗೂ ತನ್ನ ರಕ್ಷಣೆಗೆಂದು ರಿವಾಲ್ವರ್ ಒಂದನ್ನು ಇಟ್ಟುಕೊಂಡೇ ಓಡಾಡುತ್ತಿದ್ದ, ಎಲ್ಲೇ ಹೋಗಿಬಂದರೂ ತನ್ನ ಕಾರಿನ ಹಿಂದೆಮುಂದೆ ಬೆಂಬಲಿಗರ ಕಾರುಗಳ ನಡುವೆಯೇ ಸಂಚರಿಸುತ್ತಿದ್ದ ಮಚ್ಚ 2005 ರ ನವೆಂಬರ್ 1 ರಂದು ಯಾಮಾರಿ ಬಿಟ್ಟಿದ್ದ!

ಹಾಗೇ ಯಾಮಾರುವವನಲ್ಲ ಮಚ್ಚ. ಆದರೆ ವ್ಯವಸ್ಥೆ ಆತನನ್ನು ಆ ಸ್ಥಿತಿಗೆ ತಂದುಬಿಟ್ಟಿತ್ತು. ಆತನ ಜೊತೆ ಬೆಂಗಾವಲಿಗಿರುತ್ತಿದ್ದ ಒಬ್ಬೊಬ್ಬರನ್ನೇ ಹಿಡಿದು ಪೊಲೀಸರು ಬೆಂಡೆತ್ತುತ್ತಿದ್ದರೆ, ಮತ್ತೊಂದೆಡೆ ಪೀಣ್ಯದ ಇನ್ಸ್‌ಪೆಕ್ಟರ್ ಸುಬ್ಬಣ್ಣ ಆತನ ಬೆನ್ನಿಗೆ ಬಿದ್ದು ರಿವಾಲ್ವರ್ ಅಲ್ಲ ಸಣ್ಣದೊಂದು ಚೂರಿ ಕೂಡ ಇಟ್ಟುಕೊಳ್ಳದ ಹಾಗೇ ಮಾಡಿಬಿಟ್ಟಿದ್ದರು. ಯಾವತ್ತು ಸುಬ್ಬಣ್ಣ ಆತನ ಯಲಹಂಕದ ಮನೆ ಮೇಲೆ ಪದೇಪದೇ ದಾಳಿ ಮಾಡಲಾರಂಭಿಸಿದರೋ ಆಗಲೇ ಮಚ್ಚ ಹುಷಾರಾಗಬೇಕಿತ್ತು. ಬದಲಾಗಿ ಪಕ್ಕದ ಜ್ಯೂಡಿಷಿಯಲ್ ಲೇಔಟ್‌ನ 942 ನೇ ನಂಬರಿನ ಸಾಧಾರಣದ ಮನೆಯೊಂದನ್ನು ಭೋಗ್ಯಕ್ಕೆ ಹಿಡಿದ. ಪತ್ನಿಯನ್ನು ಬಂಗಾರಪೇಟೆಯಲ್ಲಿಟ್ಟು, ಬೆರಳೆಣಿಕೆಯಷ್ಟು ಹುಡುಗರ ಜೊತೆ ಆ ಮನೆಯಲ್ಲಿರುತ್ತಿದ್ದ. ಅದು ಕೂಡ ಎಂಥಾ ಅಸಂರಕ್ಷಿತ ಮತ್ತು ಅಪಾಯಕಾರಿ ಜಾಗವಾಗಿತ್ತೆಂದರೆ; ಯಾವುದೇ ಹೊತ್ತಲ್ಲಿ ಕನಿಷ್ಠ ನೂರು ಮಂದಿ ನುಗ್ಗಿಬಿಟ್ಟರೂ ಸಾಕಿತ್ತು, ಸಲೀಸಾಗಿ ಮಚ್ಚನ ಗ್ಯಾಂಗ್ ನಿರ್ನಾಮವಾಗಿ ಬಿಡುತ್ತಿತ್ತು.

ಕನಿಷ್ಠ ಜೆಡಿಎಸ್ ಸರ್ಕಾರವಿರುವ ತನಕವಾದರೂ ಬೆಂಗಳೂರು ಬಿಡು ಎಂದು ಆತನ ಅನೇಕ ಹಿತೈಷಿಗಳು ಸಲಹೆ ಮಾಡಿದ್ದನ್ನು ಆತ ಸೀರಿಯಸ್ಸಾಗಿ ತೆಗೆದುಕೊಳ್ಳಲೇ ಇಲ್ಲ.

2005 ರ ನವೆಂಬರ್ 1. ಅಂದು ದೀಪಾವಳಿ ಮತ್ತು ಕನ್ನಡ ರಾಜ್ಯೋತ್ಸವದ ರಜೆಯ ದಿನವಾಗಿತ್ತು. ಆವತ್ತು ಜ್ಯುಡಿಷಿಯಲ್ ಲೇಔಟಿನ ತನ್ನ ಮನೆ ಮುಂದೆ ಬೆಳಿಗ್ಗೆ 11 ರ ಹೊತ್ತಿಗೆಲ್ಲಾ ಮಚ್ಚ ಪಟಾಕಿ ಹೊಡೆದಿದ್ದ. ಹನ್ನೊಂದೂ ಕಾಲರ ಹೊತ್ತಿಗೆ ತನ್ನ ಬೂದುಬಣ್ಣದ accent ಕಾರಿನಲ್ಲಿ ತುರೆ ಸತೀಶ, ಕೋತಿರಾಮ, ರವಿ ಮತ್ತು ಗಿರೀಶರನ್ನು ಕೂರಿಸಿಕೊಂಡು ಪಕ್ಕದ ಹದಿನಾಲ್ಕನೇ ಮೇನ್‌ನತ್ತ ಕಾರು ತಿರುಗಿಸಿದ್ದಾನೆ. ಮಾಮೂಲಿನಂತೆ ಹಿಂದೆಮುಂದೆ ಮೂರ್ನಾಲ್ಕು ಗಾಡಿಗಳಲ್ಲಿ ಹುಡುಗರಿರುತ್ತಿದ್ದರೆ ಬಚಾವಾಗುತ್ತಿದ್ದನೇನೊ. ಸಾವು ಹೊಂಚಿ ಕೂತಿತ್ತು.

ಹದಿನಾಲ್ಕನೇ ಮೇನ್‌ನಲ್ಲಿ ಎಡಕ್ಕೆ ಹೊರಳಿ ಇನ್ನೇನು ಮುನ್ನುಗ್ಗಬೇಕೆನ್ನುವಷ್ಟರಲ್ಲಿ, ಏನಾಗುತ್ತಿದೆ ಎಂಬುದೂ ಗೊತ್ತಾಗದ ಹಾಗೇ ಮೆಟಾಡೋರ್ ಒಂದು ಎದುರಾಗಿ ಬಂದಿದ್ದೇ ಮಚ್ಚನ ಕಾರಿಗೆ ಡಿಕ್ಕಿ ಹೊಡೆದಿದೆ. ಅಷ್ಟೇ. ಡಿಕ್ಕಿಯ ಆಘಾತವನ್ನು ಚೇತರಿಸಿಕೊಳ್ಳುವ ಮೊದಲೇ ಹಂತಕ ಪಡೆ ಮಚ್ಚನನ್ನು ಹಿಂದೊಂದು ಮುಂದೊಂದು ಹೀಗೆ ನಾಲ್ಕೂ ಕಡೆಯಿಂದ ಮುತ್ತಿಕೊಂಡಿತು. ಬೇರೆಲ್ಲರಿಗಿಂತಲೂ ಮುಂದಿದ್ದದ್ದು ಮುಲಾಮನ ಬಂಟರಾದ ರಾಮ ಮತ್ತು ಲಕ್ಷ್ಮಣ!

ಮೆಟಾಡೋರ್ ಅಪ್ಪಳಿಸಿದ್ದೇ ಮಚ್ಚನ ಕಾರು ಬೋರಲು ಬಿದ್ದಿತ್ತು. ಕೆಳಕ್ಕೆ ಬಿದ್ದಿದ್ದ ಮಚ್ಚ ಅದೇನನ್ನೋ ಎಳೆಯುವಂತೆ ನಟಿಸುತ್ತಿದ್ದನೇ ಹೊರತು ಆತನ ಬಳಿ ರಿವಾಲ್ವರ್, ಲಾಂಗ್ ಹಾಳಾಗಲಿ ಸಣ್ಣದೊಂದು ಸ್ಕ್ರೂ ಡ್ರೈವರ್ ಕೂಡ ಇರಲಿಲ್ಲ. 'ಏನ್ರೋ ನೋಡ್ತೀರಾ? ಮೊದಲು ಅವ್ನ ಕೈ ಎತ್ರೋ' ಎಂದು ಯಾರೋ ಕೂಗಿದಂತಾಯ್ತು. ಬೀಸಿದ ಲಾಂಗಿನ ಏಟಿಗೆ ಮಚ್ಚನ ಬಲಗೈ ತುಂಡಾಗಿ ಬಿತ್ತು. ತಲೆಗೆ ಅದೆಂಥಾ ದೊಣ್ಣೆಯಿಂದ ಹೊಡೆದಿದ್ದರೆಂದರೆ ಅಪ್ಪಳಿಸಿದ ಏಟಿಗೆ ಕಣ್ಣುಗುಡ್ಡೆಯೇ ಹೊರಬಿದ್ದಿತ್ತು. ಪಕ್ಕ ಕುಳಿತಿದ್ದ ಗಿರೀಶ ಕಾರಿನಿಂದಿಳಿದವನೇ ಪರಾರಿಯಾಗಿದ್ದ. ಕಾರಿನೊಳಗಿದ್ದ ಮತ್ತೊಬ್ಬ ರವಿಯ ಕೈ ಬೆರಳುಗಳೇ ತುಂಡಾದವು. ಆವತ್ತು ಮಚ್ಚನೇ ಡ್ರೈವಿಂಗ್ ಸೀಟಿನಲ್ಲಿದ್ದ. ಬಹುಶಃ ಮಾಮೂಲಿನಂತೆ ಕೋತಿರಾಮ ಡ್ರೈವರ್ ಆಗಿದ್ದರೆ ಮಚ್ಚ ಬದುಕುತ್ತಿದ್ದನೇನೊ. ಪಕ್ಕ ಕುಳಿತಿದ್ದ ಕೋತಿರಾಮ ಒಂದೇ ಏಟಿಗೆ ಎಚ್ಚರ ತಪ್ಪಿಬಿದ್ದ. ತುರೆ ಸತೀಶನ ಕಣ್ಣಿಗೆ ಬಿದ್ದ ಖಾರದ ಪುಡಿ ಆತನನ್ನು ಕಾರಿನ ಕೆಳಕ್ಕೆ ತಳ್ಳಿಬಿಟ್ಟಿತ್ತು.

ಹಾಗೇ ಕಾರಿನಿಂದ ಓಡಿದ ಗಿರೀಶ ಅಲ್ಲಿಂದ ಕೂಗಳತೆಯಲ್ಲಿದ್ದ ಮನೆಯಲ್ಲಿದ್ದ ಹುಡುಗರಿಗೆ ಕೂಗಿ ಹೇಳಿದ್ದಾನೆ. ಅಲ್ಲಿದ್ದ ಸುಮಾರು ಇಪ್ಪತ್ತು ಮಂದಿ ಹುಡುಗರು ಲಾಂಗ್‌ಗಳನ್ನೆತ್ತಿಕೊಂಡು ಓಡಿಬರುವ ಹೊತ್ತಿಗೆ ಮಚ್ಚ ಹೆಣವಾಗಿದ್ದ. ಉಳಿದವರು ಅರೆಜೀವವಾಗಿದ್ದರು. ಆವತ್ತಿನ ದೃಶ್ಯ ಅದೆಷ್ಟು ಭೀಕರವಾಗಿತ್ತೆಂದರೆ 'ಅಣ್ಣಾ..... ಹೋಗ್‌ಬಿಟ್ಯಲ್ಲೋ.... ಅಣ್ಣಾ...!' ಎಂದು ಆ ಹುಡುಗರ ತಂಡ ಬಿದ್ದಿದ್ದ ಹೆಣದ ಮೇಲೆ ಹೊರಳಾಡಿ ಆಕ್ರಂದಿಸುತ್ತಿದ್ದರೆ, ನೋಡಿದ ಎಂಥವರಿಗೂ ಕರುಳು ಕಿತ್ತು ಬರುತ್ತಿತ್ತು. ಚಿಂದಿಯೆದ್ದು ಬಿದ್ದಿದ್ದ accent ಕಾರು, ರಕ್ತದಲ್ಲಿ ಕಲಸಿದಂತಿದ್ದ ಅದರ ಗಾಜಿನ ಚೂರುಗಳು, ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ಚಪ್ಪಲಿ, ದೊಣ್ಣೆ, ಲಾಂಗ್ ಮತ್ತು ಖಾರದ ಪುಡಿ ಪ್ಯಾಕೆಟ್ಟುಗಳ ಅವಶೇಷಗಳು ಮತ್ತು ಗೋಳಾಡುತ್ತಿದ್ದ ಹುಡುಗರು. ಇಡೀ ದೃಶ್ಯ ಅದೆಷ್ಟು ಬರ್ಬರವಾಗಿತ್ತೆಂದರೆ ಪ್ರಾಣಹೋದ ನಂತರವೂ ತುಂಡರಿಸಿ ಬಿದ್ದಿದ್ದ ಆತನ ಬಲಗೈ ಚಡಪಡಿಸುತ್ತಲೇ ಇತ್ತು. ಕಾರಿನ ಮಗ್ಗುಲಿಗೇ ಮಚ್ಚ ಹೆಣವಾಗಿ ಮಲಗಿದ್ದ. ತಲೆ ಸೀಳಿಹೋಗಿತ್ತು, ಎದೆ, ಕತ್ತು, ಭುಜ ಹೊಟ್ಟೆ, ಬೆನ್ನು ಎಲ್ಲೆಂದರಲ್ಲಿ ಬಿದ್ದಿದ್ದ ಮಚ್ಚಿನೇಟಿಗೆ ಆತನ ದೇಹ ಮಾಂಸದ ಮುದ್ದೆಯಾಗಿ ಹೋಗಿತ್ತು.

ಬೆಂಗಳೂರು ಭೂಗತದ ಕನ್ನಡ ಹುಡುಗರ ಗ್ಯಾಂಗ್ ಲೀಡರ್, ಗೋಪಾಲಯ್ಯ ಬದ್ಧವೈರಿ, ತಿಮ್ಮೇನಹಳ್ಳಿ ತಮ್ಮಯ್ಯನ ನೆಚ್ಚಿನ ಬಂಟ ಮಂಜುನಾಥ ಅಲಿಯಾಸ್ ಮಚ್ಚ ಹೆಬ್ಬಾಳದ ಜ್ಯೂಡಿಷಿಯಲ್ ಲೇಔಟಿನ ಹದಿನಾಲ್ಕನೇ ಮೇನ್‌ನ ಪೈವಿಹಾರ್ ಕ್ಯಾಂಟೀನಿನ ಎದುರು ಹೆಣವಾಗಿ ಮಲಗಿದ್ದ.

ಇದು ಕಡಬಗೆರೆಯ ಪಾಯ್ಸನ್ ರಾಮ ಮತ್ತು ಮುಲಾಮ ಸೇರಿಕೊಂಡೇ ಮಾಡಿದ ಜಂಟಿ ಕಾರ್ಯಾಚರಣೆ ಎಂಬುದರಲ್ಲಿ ಯಾರಿಗೂ ಅನುಮಾನಗಳಿರಲಿಲ್ಲ. ಗೋಪಾಲಯ್ಯ ನೇರವಾಗಿ ಹತ್ಯೆಯಲ್ಲಿ ಪಾಲ್ಗೊಂಡಿರಲಿಲ್ಲ. ಎರಡು 407 ಗಾಡಿಗಳಲ್ಲಿ, ಒಂದು ಮಾರುತಿ ವ್ಯಾನು, ಮತ್ತೊಂದು ಇಂಡಿಕಾ, ಮಗದೊಂದು ಸುಮೋ; ಹೀಗೆ ಏನಿಲ್ಲವೆಂದರೂ ಸುರಿಸುಮಾರು ನೂರೈವತ್ತು ಮಂದಿ ಹಂತಕರ ಪಡೆಯನ್ನು ನವೆಂಬರ್ ಒಂದರ ಬೆಳ್ಳಂಬೆಳಿಗ್ಗೆ ಜ್ಯುಡಿಷಿಯಲ್ ಲೇಔಟ್ ಸುತ್ತಮುತ್ತ ಕಡಬಗೆರೆ ರಾಮ ಮತ್ತು ಮುಲಾಮ ಜಮೆ ಮಾಡಿದ್ದರು. ಅದೂ ಮಚ್ಚನ ಗಮನಕ್ಕೆ ಬಾರದಂತೆ ಆತನ ಮನೆಯ ಆಜುಬಾಜಿನ ರಸ್ತೆಗಳಲ್ಲಿ ಬೆಳ್ಳಂಬೆಳಿಗ್ಗೆಯಿಂದ ಹೊಂಚು ಹಾಕಲಾಗಿತ್ತು.

ಮಚ್ಚ ಈ ಹಿಂದೆ ತಮ್ಮಯ್ಯನ ಹತ್ಯೆಯನ್ನು ಕಂಡಿದ್ದ. ಲೇಔಟ್ ಮಂಜನನ್ನು ಕೊಂದ ರೀತಿಯನ್ನು ಅರಿತಿದ್ದ. ಆತನೇ ಬೈಲು ರವಿಯನ್ನು ಹೊಂಚು ಹಾಕಿ ಕೊಲ್ಲಿಸಿದ್ದ. ಫೀಲ್ಡಿನಲ್ಲಿ ಇಷ್ಟೆಲ್ಲಾ ಅನುಭವವಿದ್ದೂ ಸ್ವತಃ ತಾನೇ ಆ ಕಸುಬಿನಲ್ಲಿದ್ದೂ ಯಾಮಾರಿದ್ದು ಮಾತ್ರ ಅಕ್ಷಮ್ಯವಾಗಿತ್ತು. ಮಚ್ಚನಿಗೆ ಗೊತ್ತಿಲ್ಲದ ಹಾಗೇ ಕಡಬಗೆರೆ ರಾಮ ಮತ್ತು ಆತನ ಅಣ್ಣ ಡಾಬಾ ಸೀನ ಈ ಬಾರಿ ಹೊಚ್ಚ ಹೊಸ ಹುಡುಗನೊಬ್ಬನನ್ನು 'ಫೀಲ್ಡಿಂಗಿ'ಗೆ ಬಿಟ್ಟಿದ್ದರು. ಆತನ ಹೆಸರು ನಂಜುಂಡ. ಭೂಗತದಲ್ಲಿ ಯಾರೂ ಕೇಳಿರದ ಹೆಸರದು. ಮಚ್ಚನ ಗ್ಯಾಂಗಿನಲ್ಲೇ ಆತನ ಓಡಾಟದ ಬಗ್ಗೆ ರಾಮನಿಗೆ ಮಾಹಿತಿ ಕೊಡುತ್ತಿದ್ದ ಹುಡುಗರಿದ್ದರು. ಜೊತೆಗೆ ಬೈಲ್ ರವಿಯ ತಮ್ಮ ಸ್ವಾಮಿ ಮತ್ತು ಆತನ ಗೆಳೆಯ ಸಂಪತ್ತು ಎಂಬಿಬ್ಬರಿಗೂ ರಾಮ ಮತ್ತು ಆತನ ಅಣ್ಣ ಡಾಬಾ ಸೀನರೇ ನಿಂತು ಜ್ಯುಡಿಷಿಯಲ್ ಲೇಔಟನಲ್ಲೊಂದು ಮನೆ ಮಾಡಿಕೊಟ್ಟಿದ್ದರು. ಮಚ್ಚನ ಪ್ರತಿ ಚಲನವಲನವನ್ನೂ ಹುಷಾರಾಗಿ ಅವರು ಸ್ಪಡಿ ಮಾಡಿ ಸುದ್ದಿ ಮುಟ್ಟಿಸುತ್ತಿದ್ದರು. ಅವರಿಗೆ ನೆರವಾಗುವುದಕ್ಕೆಂದು ಅದೇ ಯಲಹಂಕದ ಸಂಜೀವಿನಿ ನಗರದ ತನ್ನ ಶಿಷ್ಯ ಬುಲೆಟ್ ರವಿ ಎಂಬಾತನನ್ನು ಜೈಲಲ್ಲಿದ್ದುಕೊಂಡೇ ತಿಮ್ಮೇನಹಳ್ಳಿ ಸೂರಿ ನೇಮಿಸಿದ್ದ. ಅದೇ ಸಂಜೀವಿನಿ ನಗರದ ಅಪ್ಪು ಬ್ರದರ್ಸ್, ಪಕ್ಕದ ಬ್ಯಾಟರಾಯನಪುರದ ಬ್ರಾಹ್ಮಣರ ದಿನೇಶ; ಹೀಗೆ ಮಚ್ಚನ ಮನೆಯಿದ್ದ ಆಜುಬಾಜಿನಲ್ಲೇ ಯಾವುದೇ ಗಳಿಗೆಯಲ್ಲೂ ಕನಿಷ್ಠ ಐವತ್ತು ಮಂದಿ ಹುಡುಗರು ಜಮೆಯಾಗುವಂಥ ಅಪಾರ್ಟ್‌ಮೆಂಟೊಂದನ್ನು ಸೂರಿ ಮಾಡಿಕೊಟ್ಟಿದ್ದ.

ತನ್ನ ಸುತ್ತಮುತ್ತಲೇ ಸೂರಿ ಸಾವಿನ ಕುಣಿಕೆಯೊಂದನ್ನು ಅಣಿ ಮಾಡಿ ಇಟ್ಟ ಬಗ್ಗೆ ಮಚ್ಚನಿಗೆ ಎಳ್ಳಷ್ಟು ಸುಳಿವು ಸಿಗಲಿಲ್ಲ. ಕಡಬಗೆರೆ ರಾಮ ಮತ್ತು ಮುಲಾಮ ಅದ್ಯಾವ ಪರಿ ಮಚ್ಚನ ಹಿಂದೆ ಬಿದ್ದಿದ್ದರೆಂದರೆ ಮಚ್ಚ ಕೊಲೆಯಾಗುವುದಕ್ಕೂ ತಿಂಗಳ ಮೊದಲೇ ಈ ಥರದ ನಾಲ್ಕೈದು ಅಟೆಂಪ್ಟುಗಳಾಗಿದ್ದವು. ಕೂದಲೆಳೆಯಲ್ಲಿ ಮಚ್ಚ ಬಚಾವಾಗಿದ್ದ. ಒಂದೆಡೆ ಕಡಬಗೆರೆ ರಾಮ ಮತ್ತು ಡಾಬಾ ಸೀನರ ಪಡೆ, ಮತ್ತೊಂದೆಡೆ ಮುಲಾಮನ ಬಂಟರಾದ ರಾಮ-ಲಕ್ಷ್ಮಣರ ಹಿಂಡು, ಇನ್ನೊಂದೆಡೆ ತಿಮ್ಮೇನಹಳ್ಳಿ ಸೂರಿಯ ಗ್ಯಾಂಗ್. ಮಗದೊಂದೆಡೆ ಕಾಮಾಕ್ಷಿಪಾಳ್ಯದ ಬಸವ ಮತ್ತು ಧರಣಿಯ ಕೂಟ, ಸಾಲದ್ದಕ್ಕೆ ಬೈಲ್ ರವಿಯ ತಮ್ಮನ ಪಟಾಲಂ; ಹೀಗೆ ಮಚ್ಚನ ರಕ್ತಕ್ಕಾಗಿ ಯಾರೆಲ್ಲ ಹಾತೊರೆಯುತ್ತಿದ್ದರೋ; ಅವರೆಲ್ಲರೂ ಒಗ್ಗಟ್ಟಾಗಿಯೇ ಖೆಡ್ಡಾ ತೋಡಿಬಿಟ್ಟಿದ್ದರು.

ನವೆಂಬರ್ 1 ರ ಹಿಂದಿನ ರಾತ್ರಿಯಿಂದಲೇ ತಯಾರಿ ನಡೆದಿತ್ತು. ಅದಕ್ಕೆಂದು ಒಂದು ಟಾಟಾ ಸುಮೋದ ತುಂಬ ಸರ್ವೇ ದೊಣ್ಣೆಗಳು, ಲಾಂಗು, ಖಾರದ ಪುಡಿ ಪ್ಯಾಕೆಟ್ಟುಗಳನ್ನು ತುಂಬಿಸಿಕೊಂಡು ಬೈಲ್ ರವಿಯ ತಮ್ಮ ಯಲಹಂಕದಲ್ಲಿ ಹೊಂಚು ಹಾಕಿಕೊಂಡಿದ್ದರೆ, ಹೊರಟಿದ್ದು ಮಚ್ಚನ ಹತ್ಯೆಗೆ ಎಂಬುದು ಕೆಲವರ ಹೊರತಾಗಿ ಬೇರೆ ಯಾರಿಗೂ ಗೊತ್ತಾಗದಂತೆ ಎಚ್ಚರ ವಹಿಸಲಾಗಿತ್ತು.

ನವೆಂಬರ್ ಒಂದರ ಬೆಳಿಗ್ಗೆ 6 ಕ್ಕೇ ಮುಲಾಮನ ಬಂಟರಾದ ರಾಮ ಮತ್ತು ಲಕ್ಷ್ಮಣ ಎರಡು 407 ಗಾಡಿಗಳಲ್ಲಿ ಜ್ಯೂಡಿಷಿಯಲ್ ಲೇಔಟಿಗೆ ಬಂದಿಳಿದರು. ಅವರ ಜೊತೆಗಿದ್ದ ನಲವತ್ತು ಮಂದಿ ಹುಡುಗರನ್ನು ಯಾವುದೋ ಸೈಟಿನ ಗಲಾಟೆ ಇದೆ ಎಂದು ಕರೆತರಲಾಗಿತ್ತು. ಮತ್ತೊಂದೆಡೆ ಕಡಬಗೆರೆಯ ಡಾಬಾಸೀನ ಮತ್ತು ಪಾಯ್ಸನ್ ರಾಮನ ಎರಡು ವ್ಯಾನ್ ತುಂಬುವಷ್ಟಿದ್ದ ಹಂತಕ ಪಡೆ ರಾತ್ರಿಯಿಂದಲೇ ಕುಡಿದು ಪಾರ್ಟಿ ಮಾಡಿ ಕಾಯುತ್ತಿತ್ತು. ಜೊತೆಗೆ ಯಲಹಂಕದ ಸೂರಿ ಶಿಷ್ಯರು!

ಕನಿಷ್ಠ ಹಿಂದೆಮುಂದೆ ಹುಡುಗರಿರುತ್ತಿದ್ದರೂ ಹಂತಕರು ಹಿಮ್ಮೆಟ್ಟಬಿಡುತ್ತಿದ್ದರೇನೊ. ಆದರೆ ಮಚ್ಚನ ವಿಷಯದಲ್ಲಿ ವಿಧಿ ಬೇರೆಯದನ್ನೇ ಬಗೆದಿತ್ತು. ಸುದ್ದಿ ತಿಳಿದದ್ದೇ ಜಂಟಿ ಪೊಲೀಸ್ ಕಮೀಷನರ್ ನಾರಾಯಣಗೌಡರು ಜ್ಯುಡಿಷಿಯಲ್ ಲೇಔಟಿಗೆ ಧಾವಿಸಿ ಬಂದರು. ಆ ಹೊತ್ತಿಗಾಗಲೇ ಮಚ್ಚನನ್ನು ಕೊಂದು ಪರಾರಿಯಾಗುತ್ತಿತ್ತು, ಮೆಟಡೋರ್ ಒಂದು ಮುಗುಚಿ ಬಿದ್ದಿತ್ತು, ಅದರೊಳಗಿದ್ದ ಮೂವರು ಹುಡುಗರನ್ನು ಅಕ್ಕಪಕ್ಕದ ನಿವಾಸಿಗಳೇ ಹಿಡಿದು ಪೊಲೀಸರಿಗೊಪ್ಪಿಸಿದ್ದರು. ಆ ಹುಡುಗರಾದರೂ ಯಾರು?

ಏನೋ ಸೈಟಿನ ಗಲಾಟೆ ಅಂತ ನಮ್ಮನ್ನು ಶ್ರೀರಾಂಪುರದಿಂದ ಕರಕೊಂಡು ಬಂದ್ರು ಸ್ವಾಮಿ ಎಂದು ಸಿಕ್ಕಿಬಿದ್ದ ಹುಡುಗರು ಯಲಹಂಕ ಇನ್ಸ್‌ಪೆಕ್ಟರ್ ಶ್ರೀನಿವಾಸಮೂರ್ತಿಯವರೆದುರು ತಡಬಡಾಯಿಸಿಬಿಟ್ಟರು. ಮುಲಾಮನ ಬಂಟರಾದ ರಾಮಲಕ್ಷ್ಮಣರನ್ನೇ ಪೊಲೀಸರು ಮೊದಲ ಆರೋಪಿಗಳನ್ನಾಗಿಸಿ ಎಫ್‌ಐಆರ್ ದಾಖಲಿಸಿದ್ದರು. ಬಸವ ಮತ್ತು ಧರಣಿ ಮೂರು ಮತ್ತು ನಾಲ್ಕನೇ ಆರೋಪಿಗಳಾದರೆ ಬೈಲ್ ರವಿಯ ತಮ್ಮ ಸ್ವಾಮಿ ಮತ್ತು ಸಂಪತ್ತು ಐದು ಆರನೇ ಆರೋಪಿಗಳಾಗಿದ್ದರು. ಏನು ಯಡವಟ್ಟೋ; ಮುಲಾಮ ಹತ್ತೊಂಭತ್ತನೇ ಆರೋಪಿಯಾದರೆ ಕಡಬಗೆರೆಯ ಪಾಯ್ಸನ್ ರಾಮ ಇಪ್ಪತ್ತನೇ ಆರೋಪಿಯಾಗಿದ್ದ. ಜೇಕೆ 23 ನೇ ಆರೋಪಿಯಾದರೆ, ಗೋಪಾಲಯ್ಯನನ್ನು 26 ನೇ ಆರೋಪಿಯಾಗಿಸಲಾಗಿತ್ತು. ಮಚ್ಚನ ಹತ್ಯೆಗೆ ಬೇಕಾಬಿಟ್ಟಿ ದುಡ್ಡು ಸುರಿದಿದ್ದ ರಾಮನ ಅಣ್ಣ, ಜೆಡಿಎಸ್ ನಾಯಕ, ಮುಖ್ಯಮಂತ್ರಿ ಕುಮಾರಸ್ವಾಮಿ ಪರಮಾಪ್ತ ಡಾಬಾ ಸೀನನನ್ನು ಮಾತ್ರ ಪೊಲೀಸರು ಇಡೀ ಪ್ರಕರಣದಲ್ಲಿ ತೋರಿಸಲೇ ಇಲ್ಲ.



ಹಂತಕರು ಬಿಟ್ಟುಹೋದ ದೊಣ್ಣೆಗಳು



ಮಚ್ಚನ ಮನೆ




ಮಚ್ಚನ ಕೊಲೆಯಾದ ಸ್ಥಳವನ್ನು ವೀಕ್ಷಿಸುತ್ತಿರುವ ಕಮೀಷನರ್ ನಾರಾಯಣಗೌಡ



ಹಂತಕರು ಪರಾರಿಯಾಗುವಾಗ ಮುಗುಚಿಬಿದ್ದ ಗಾಡಿಯ ಗುರುತು

(ಮುಂದಿನ ವಾರಕ್ಕೆ)

ಅಯ್ಯೋ ಅಣ್ಣನ ಸಮಾಧಿ!



ಒಲ್ಲದ ಗಂಡಂಗೆ ಮೊಸರಲ್ಲೂ ಕಲ್ಲೆಂಬಂತೆ ಮತ್ತೊಮ್ಮೆ ರಾಜ್ ಕುಟುಂಬವನ್ನು ಕುಟುಕಿದ್ದಾರೆ ಮುಖ್ಯಮಂತ್ರಿ ಕುಮಾರಸ್ವಾಮಿ!

ರಾಜ್ ಕುಟುಂಬವು ಸಮಾಧಿ ನಿರ್ಮಾಣ ಮಾಡಿ ಅಂತ ಗಡುವು ಕೊಡೋದು ಸರಿಯಲ್ಲ, ಸರ್ಕಾರ ಏನು ರಾಜ್ ಸ್ಮಾರಕವನ್ನು ಕಡೆಗಣಿಸಿದೆಯಾ? ಈ ಸಲದ ಬಜೆಟ್‌ನಲ್ಲಿ 3 ಕೋಟಿ ಕೊಟ್ಟಿಲ್ವಾ? ನಮಗೂ ಕೆಲವೊಂದು ರೀತಿ ರಿವಾಜುಗಳಿವೆ. ಹಾಗಂತ ಸ್ಮಾರಕವನ್ನೇ ಕೈಬಿಟ್ಟಿದೀವಿ ಅಂತ ಅರ್ಥನಾ.....?

ಇದು ಏಪ್ರಿಲ್ 12 ರಂದು ವರನಟ ರಾಜ್ ಸಮಾಧಿಯ ಮುಂದೆ ನಿಂತು ಮುಖ್ಯಮಂತ್ರಿ ಕುಮಾರಸ್ವಾಮಿ ಉದುರಿಸಿದ ಆಣಿಮುತ್ತು. ಸೂಕ್ಷ್ಮವಾಗಿ ನೋಡಿದರೆ ರಾಜ್ ಕುಟುಂಬದ ಬಗ್ಗೆ ದೇವೇಗೌಡರಿಗಿರುವ ಹೊಟ್ಟೆ ಕಿಚ್ಚೇ ಅವರ ಮಗನ ಬಾಯಿಂದ ಹೊರಬೀಳುತ್ತಿಲ್ಲವೆ?

ವರನಟ ರಾಜ್ ಕಣ್ಣುಮುಚ್ಚಿ ವರ್ಷವಾದರೂ ಅವರ ಸಮಾಧಿ ಸ್ಮಾರಕದ ಬ್ಲೂಪ್ರಿಂಟೇ ರೂಪುಗೊಂಡಿಲ್ಲ ಎಂದರೆ ಏನರ್ಥ? ಸ್ಮಾರಕಕ್ಕೆಂದು ಬಜೆಟ್ಟಿನಲ್ಲಿ ಮೂರಲ್ಲ ನೂರು ಕೋಟಿ ಎತ್ತಿಟ್ಟರೂ ಅದರ ಬಗೆಗೊಂದು ಕಲ್ಪನೆಯೇ ಇಲ್ಲದೆ ಏನು ಪ್ರಯೋಜನ? ಸಮಸ್ತ ಕನ್ನಡಿಗರ ಸ್ವಾಭಿಮಾನದ ಸಂಕೇತದಂತಿರುವ ರಾಜ್ ಸ್ಮಾರಕದ ಬಗ್ಗೆ ಅವರ ಕುಟುಂಬದವರೇ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಾರೆಂದರೆ; ಜನಪರ ಸರ್ಕಾರವೊಂದು ರಾಜ್‌ಗೆ ತೋರಿಸುವ ಗೌರವವಾ ಇದು? ಪಾರ್ವತಮ್ಮ ಎಚ್ಚರಿಕೆ ಕೊಟ್ಟಿದ್ದೇ ತಪ್ಪೆ?

ಅಷ್ಟಕ್ಕೂ ರಾಜ್ ಸ್ಮಾರಕ ವಿಳಂಬವಾಗುತ್ತಿರುವುದೇಕೆ? ಇಂಥ ಪ್ರಶ್ನೆಗಳಿಗೆ ಕಳೆದೊಂದು ವರ್ಷದಿಂದ ರಾಜ್ ವಿಷಯದಲ್ಲಿ ಮುಖ್ಯಮಂತ್ರಿಯ ವರ್ತನೆಗಳಲ್ಲೇ ಉತ್ತರವಿದೆ.

ತಪ್ಪೋನೆಪ್ಪೋ: ರಾಜ್ ಕನ್ನಡಿಗರ ಸ್ವಾಭಿಮಾನದ ಸಂಕೇತ. ಅವರ ಜನಪ್ರಿಯತೆಯ ಮುಂದೆ ಮಣ್ಣಿನ ಮಗ ದೇವೇಗೌಡರದು ಯಾವ ಲೆಕ್ಕ? ರಾಜ್ ದುರಾದೃಷ್ಟವೋ ಕನ್ನಡಿಗರ ದೌರ್ಭಾಗ್ಯವೋ ದೇವೇಗೌಡರ ಮಗ ಮುಖ್ಯಮಂತ್ರಿಯಾಗಿದ್ದೇ ತಡ ರಾಜ್‌ರನ್ನು ಸಾವು ನುಂಗಿ ಹಾಕಿತ್ತು.

ಇದನ್ನು ಅಕ್ಷರಶಃ ಶತ್ರು ಸಂಹಾರಯಾಗದಂತೆ ಮುಖ್ಯಮಂತ್ರಿ ಕುಮಾರಸ್ವಾಮಿ ಬಗೆದದ್ದು ಮತ್ತೊಂದು ದುರಂತ.

ರಾ. ಸೋಮನಾಥ್

ರಾಜ್ ಓರ್ವ ಮೇರುನಟ. ಕನ್ನಡ ಜನಮಾನಸದ ಆರಾಧ್ಯ ಪುರುಷ ಎಂಬುದನ್ನೇ ಮರೆತು ಯಾರೋ ಯಕಶ್ಚಿತ್ ಕೌನ್ಸಿಲರ್ ಒಬ್ಬ ಸತ್ತಷ್ಟೇ ಉಡಾಫೆಯಿಂದ ಕಂಠೀರವ ಸ್ಟೇಡಿಯಮ್ಮಿನಲ್ಲಿ ಅವರ ಪಾರ್ಥಿವ ಶರೀರವನ್ನಿಡುವಂತೆ ನೋಡಿಕೊಂಡರು. ಕನಿಷ್ಠ ಸ್ಟೇಡಿಯಮ್ಮಿನ ನಡುಭಾಗಕ್ಕಾದರೂ ಇಟ್ಟಿದ್ದರೆ ಅದನ್ನು ಅಭಿಮಾನಿಗಳು ಹತ್ತಾರು ದಿಕ್ಕಿನಿಂದ ನೋಡುತ್ತಿದ್ದರು. ಆದರೆ ಸರ್ಕಾರ ವಿಶಾಲ ಕಂಠೀರವ ಸ್ಟೇಡಿಯಮ್ಮಿನಲ್ಲಿ ಯಥೇಚ್ಛವಾಗಿ ಜಾಗವಿದ್ದರೂ ರಾಜ್ ಶವಪೆಟ್ಟಿಗೆಯನ್ನು ತೀರ ಇಕ್ಕಟ್ಟಾದ ಮೂಲೆಯಲ್ಲಿಟ್ಟು, ನೆಟ್ಟಗೆ ಯಾರೂ ನೋಡಲಾಗದಂತೆ ಮಾಡಿ, ತಮ್ಮ ಪಾಡಿಗೆ ತಾವು ಗೌರವ ಸಲ್ಲಿಸಿ ಹೋಗುತ್ತಿದ್ದ ಅಭಿಮಾನಿಗಳ ಮೇಲೆ ಬೇಕುಬೇಕಂತಲೆ ಪೊಲೀಸರನ್ನು ಛೂ ಬಿಟ್ಟು ಹೊಡೆಸಿತು.




ಅಂಥಾ ರಜನಿಕಾಂತ್ ಥರದವರೇ ರಾಜ್‌ಗೆ ಗೌರವ ಸಲ್ಲಿಸಲು ಹೆಣಗಾಡಬೇಕಾಯಿತು.

ಯಾರೋ ಹಲ್ಕಟ್ ಜ್ಯೋತಿಷಿ ವಿಶ್ವಪತಿ ಶಾಸ್ತ್ರಿ ವೈಕುಂಠದ ಬಾಗಿಲು ಇವತ್ತೇ ತೆರೆಯುತ್ತದೆ ಎಂದು ಹೇಳಿದನೆಂದು ಮೊದಲು ಎರಡು ದಿನ ಘೋಷಣೆ ಮಾಡಿ ಆನಂತರ ಒಂದೇ ದಿನಕ್ಕೆ ಶವಸಂಸ್ಕಾರ ಮಾಡಲು ನಿರ್ಧರಿಸಿತು. ಇದರಿಂದ ರೊಚ್ಚಿಗೆದ್ದ ಅಭಿಮಾನಿಗಳ ಮೇಲೆ ಅದೆಷ್ಟು ಕ್ರೌರ್ಯದಿಂದ ಕುಮಾರ್ ಸರ್ಕಾರ ಗುಂಡು ಹಾರಿಸಿತೆಂದರೆ, ಅನ್ಯಾಯವಾಗಿ ಎಂಟು ಮಂದಿ ರಾಜ್ ಭಕ್ತರು ಗುಂಡಿಗೆ ಬಲಿಯಾದರು.




ಪ್ರಾರಂಭದಲ್ಲಿ ಗುಂಡಿಗೆ ಬಲಿಯಾದವರಿಗೆಲ್ಲ ಪರಿಹಾರ ಕೊಡುತ್ತೇನೆಂದ ಕುಮಾರಸ್ವಾಮಿ ಕ್ರಮೇಣ ತಮ್ಮ ಮಾತನ್ನೇ ತೇಲಿಸಿಬಿಟ್ಟರು. ಗಲಭೆಯ ನೆಪದಲ್ಲಿ ನೂರಾರು ರಾಜ್ ಅಭಿಮಾನಿಗಳನ್ನು ಹಿಡಿದು ಜೈಲಿಗೆ ಹಾಕಿದ್ದು, ಗಾಯಗೊಂಡವರನ್ನು ಕಾಟಾಚಾರಕ್ಕೂ ಉಪಚರಿಸದೇ ಇದ್ದದ್ದು, ಗೋಲಿಬಾರ್‌ನಲ್ಲಿ ಸತ್ತವರಿಗೆ ನಯಾಪೈಸೆಯ ಪರಿಹಾರ ಕೊಡದೇ ಇದ್ದದ್ದು; ಇತ್ಯಾದಿಗಳೆಲ್ಲ ಯಾವುದೇ ನಾಗರಿಕ-ವಿವೇಕ ಸರ್ಕಾರವೊಂದರ ಲಕ್ಷಣವಾಗಿರಲಿಲ್ಲ.



ರಾಜ್ ಕುಟುಂಬವಷ್ಟೇ ಅಲ್ಲ ರಾಜ್ ಅಭಿಮಾನಿಗಳ ಬಗ್ಗೆಯೂ ಕುಮಾರ್ ಸರ್ಕಾರಕ್ಕೆ ಜಿದ್ದಿತ್ತೆಂಬುದು ಮೊದಲ ಬಾರಿಗೆ ಬಯಲಾಗಿತ್ತು.

ಇನ್ನೂ ಹೇಳಬೇಕೆಂದರೆ ರಾಜ್ ಅಂತ್ಯಕ್ರಿಯೆಗೆಂದು ಕಂಠೀರವ ಸ್ಟುಡಿಯೋ ಅನ್ನು ಆಯ್ದುಕೊಂಡಿದ್ದೇ ಒಂದು ವ್ಯವಸ್ಥಿತ ಷಡ್ಯಂತ್ರವಾಗಿತ್ತು!



ಏಕೆಂದರೆ ರಾಜ್‌ರಂಥ ಆಧುನಿಕ ಮೇರು ಪುರುಷನ ಸಮಾಧಿಯೆಂದರೆ ಅದು ಖಂಡಿತ ರಾಜ್ಯ ಮಟ್ಟದ ಸಾಂಸ್ಕೃತಿಕ ಕೇಂದ್ರವಾಗುತ್ತದೆ. ಬೆಂಗಳೂರಿಗೆ ಬಂದ ಯಾರೇ, ಹೇಗೆ ಲಾಲ್‌ಬಾಗ್, ಇಸ್ಕಾನ್, ಬನ್ನೇರುಘಟ್ಟ ಝೂ ಇತ್ಯಾದಿಗಳನ್ನು ನೋಡುತ್ತಾರೋ ಹಾಗೇ ರಾಜ್ ಸಮಾಧಿಯನ್ನೂ ಖಂಡಿತ ನೋಡುತ್ತಾರೆ. ಮುಂದೊಮ್ಮೆ ಪ್ರೇಕ್ಷಣೀಯ ಪ್ರವಾಸಿ ಸ್ಥಳವಾಗುತ್ತದೆಯೆಂಬುದು ಸರ್ಕಾರಕ್ಕೆ ಗೊತ್ತಾಗಲಿಲ್ಲವೆಂದರೆ ಏನರ್ಥ?

ಹೋಗಲಿ, ರಾಜ್ ನಿಧನರಾದ ಅವಸರದಲ್ಲಿ ದಿಕ್ಕು ತೋಚದೇ ಅಂತ್ಯಕ್ರಿಯೆಗೆ ಇಂಥ ಇಕ್ಕಟ್ಟು ಜಾಗವನ್ನು ಆಯ್ದುಕೊಂಡರು ಎಂದೇ ಇಟ್ಟುಕೊಳ್ಳೋಣ. ಆದರೆ ಅಂತ್ಯಕ್ರಿಯೆಯ ನಂತರ ಸರ್ಕಾರ ನಡೆದುಕೊಂಡ ರೀತಿಯಿದೆಯಲ್ಲ; ಅದು ಎಂಥ ಕನ್ನಡಿಗನನ್ನೂ ರೊಚ್ಚಿಗೇಳಿಸುತ್ತದೆ.

ರಾಜ್ ಸತ್ತರೂ ಅವರ ಮೇಲಿನ ಮಣ್ಣಿನ ಮಕ್ಕಳ ಹೊಟ್ಟೆಕಿಚ್ಚು ಮಾತ್ರ ಈತನಕ ಸತ್ತಿಲ್ಲ ಎಂಬುದಕ್ಕೆ ಕುಮಾರ್ ಸರ್ಕಾರದ ವರ್ತನೆಗಳೇ ಪುರಾವೆಯಂತಿವೆ. ಅಂತ್ಯಕ್ರಿಯೆ ನಡೆಸಿದ್ದೆಷ್ಟೋ ಅಷ್ಟೇ, ಆನಂತರ ಮುಖ್ಯಮಂತ್ರಿಯಿರಲಿ ಸರ್ಕಾರದ ಒಬ್ಬೇ ಒಬ್ಬ ಅಧಿಕಾರಿ ಬಂದು ರಾಜ್ ಸಮಾಧಿಯನ್ನು ಭೇಟಿ ಮಾಡಿಲ್ಲ. ಮೂರು ತಿಂಗಳ ತನಕ ಅನಾಥ ಮಣ್ಣುಗುಪ್ಪೆಯಂತಿದ್ದ ಸಮಾಧಿಯನ್ನೇ ಪ್ರತಿನಿತ್ಯ ಸಹಸ್ರಾರು ಮಂದಿ ಬಂದು ಪೂಜಿಸುತ್ತಿದ್ದರು. ಕೊನೆಕೊನೆಗೆ ರೋಸತ್ತ ರಾಜ್ ಕುಟುಂಬದವರೇ ಸಮಾಧಿಗೆ ಮಾರ್ಬಲ್ ಕಲ್ಲಿನ ವೇದಿಕೆ ನಿರ್ಮಿಸಬೇಕಾಯಿತು!

ಇಷ್ಟಾದ ಮೇಲಾದರೂ ಸರ್ಕಾರಕ್ಕೆ ಚುರುಕು ಮುಟ್ಟಬೇಕಿತ್ತು. ಬದಲಿಗೆ ಇನ್ನಷ್ಟು ಉಪೇಕ್ಷೆ ಬಿಟ್ಟರೆ ಪ್ರತಿನಿತ್ಯ ಸರಾಸರಿ ಸಾವಿರ ಮಂದಿ ಬಂದು ಹೋಗುತ್ತಿದ್ದ ರಾಜ್ ಸಮಾಧಿಯ ಬಳಿ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆಯೇ ಇರಲಿಲ್ಲ. ಅದನ್ನು ನೋಡಿದ ಮಾಜಿ ಉಪಮೇಯರ್ ಪುಟ್ಟರಾಜು ಬೋರ್‌ವೆಲ್ ಒಂದನ್ನು ತೋಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರೆ ತೋಡಿದ ಬೋರಿಗೆ ಕನಿಷ್ಠ ವಿದ್ಯುತ್ ಸಂಪರ್ಕ ಕಲ್ಪಿಸುವ ವ್ಯವಸ್ಥೆಯನ್ನೂ ಸರ್ಕಾರ ಮಾಡಲಿಲ್ಲ. ಪಕ್ಕದಲ್ಲೇ ರಿಂಗ್ ರಸ್ತೆಯಾದ್ದರಿಂದ ಸಮಾಧಿಯ ಕಲ್ಲು ಹಾಸಿನ ಮೇಲೆ ಪ್ರತಿನಿತ್ಯ ಕೆಮ್ಮಣ್ಣಿನ ಪದರವೇರ್ಪಡುತ್ತಿತ್ತು. ಅದನ್ನು ತೊಳೆಯುವವರ್‍ಯಾರು? ಅಲ್ಲಿಗೆ ಬರುವ ಹೆಣ್ಣುಮಕ್ಕಳಿಗಾದರೂ ಕನಿಷ್ಠ ಶೌಚಾಲಯವೆಲ್ಲಿದೆ? ಬರುವ ಜನರನ್ನು ನಿಯಂತ್ರಿಸುವವರ್‍ಯಾರು?

ಹೀಗೆ ರಾಜ್ ಸಮಾಧಿಯೆಂಬುದು ಒಂದು ವರ್ಷದ ತನಕ ಅನಾಥವಾಗೇ ಉಳಿದುಬಿಟ್ಟಿತ್ತು. ಒಬ್ಬ ರಾಷ್ಟ್ರಪತಿಗೆ, ಮಹಾತ್ಮಾಗಾಂಧಿಗೆ ಹೇಗೆ ಅದ್ಭುತ ಸಮಾಧಿ ಸ್ಮಾರಕಗಳಿವೆಯೋ ಹಾಗೇ ಕನ್ನಡ ರಾಷ್ಟ್ರೀಯತೆಯ ಪಾಲಿಗೆ ರಾಜ್ ಎಂಬುದನ್ನು ಸರ್ಕಾರಕ್ಕೆ ಅರ್ಥ ಮಾಡಿಕೊಡುವವರ್‍ಯಾರು? ಕಂಠೀರವ ಸ್ಟುಡಿಯೋದಂಥ ಇಕ್ಕಟ್ಟಾದ, ಪಾರ್ಕಿಂಗ್ ಅನುಕೂಲವಿಲ್ಲದ, ಯಾವುದೇ ಮಹತ್ವವಿಲ್ಲದ ಜಾಗದಲ್ಲಿ ರಾಜ್ ಅಂತ್ಯಕ್ರಿಯೆಗೆ ಯೋಜಿಸಿದ್ದೇ ಒಂದು ಷಡ್ಯಂತ್ರವಾಗಿತ್ತೆ? ಎಂಬ ಗುಮಾನಿ ಬರುಬರುತ್ತ ರಾಜ್ ಕುಟುಂಬಕ್ಕೆ ಶುರುವಾಗತೊಡಗಿದ್ದು ತೀರ ಇತ್ತೀಚೆಗೆ. ವರ್ಷವಾದರೂ ಸ್ಮಾರಕದ ಮಾತೇ ಇಲ್ಲ, ಎಂಥ ಸ್ಮಾರಕ ಮಾಡಬೇಕು ಎಂಬ ಬಗ್ಗೆ ಯಾರಲ್ಲೂ ಕಲ್ಪನೆಗಳಿರಲಿಲ್ಲ.

ಇನ್ನೇನು ರಾಜ್ ನಿಧನದ ಮೊದಲ ವರ್ಷಾಚರಣೆ ಬರುತ್ತಿದೆ ಎನ್ನುವಾಗಲೂ ಸರ್ಕಾರಕ್ಕೆ ಅದರ ಪರಿವೆಯೇ ಇರಲಿಲ್ಲ. ಡಿಸಿಪಿ ಮಾಲಿನಿ ಕೃಷ್ಣಮೂರ್ತಿ ಮತ್ತು ಇಂಟಲಿಜೆನ್ಸ್‌ನ ಹಿರಿಯ ಅಧಿಕಾರಿಯೊಬ್ಬರು ಮುಖ್ಯ ಮಂತ್ರಿಗೆ ಎಂಥಾ ತಪ್ಪು ಮಾಹಿತಿ ಕೊಟ್ಟಿದ್ದರೆಂದರೆ, ಏಪ್ರಿಲ್ 12 ಕ್ಕೆ ಹೆಚ್ಚೆಂದರೆ ಐದು ಸಾವಿರ ಮಂದಿ ಅಭಿಮಾನಿಗಳು ಬರಬಹುದು ಎಂದಿದ್ದರು. ಅದನ್ನೇ ಕುಮಾರಸ್ವಾಮಿ ನಂಬಿದ್ದರು. ಆದರೆ ಏಪ್ರಿಲ್ 12 ರ ಅಪರಾಹ್ನದ ಹೊತ್ತಿಗೆ ಆ ಸಂಖ್ಯೆ ಅರವತ್ತು ಸಾವಿರಕ್ಕೇರಿತ್ತು. ಸಂಜೆಯ ಹೊತ್ತಿಗದು 80 ಸಾವಿರದಷ್ಟಾಗಿತ್ತು. ರಾಜ್ ಬಗ್ಗೆ ಕನ್ನಡಿಗರೆಲ್ಲಾ ಎಂತಹ ಅಭಿಮಾನವಿದೆ ಎಂಬುದಕ್ಕೆ ಇದಕ್ಕಿಂತ ಬೇಕೆ?


ಇಡೀ ಚಿತ್ರರಂಗವೇ ರಾಜ್ ಸಮಾಧಿಯ ಮುಂದೆ ನಿಂತು ಗೌರವಿಸಿತ್ತು. ಆದರೆ ಮುಖ್ಯಮಂತ್ರಿ ಕುಮಾರಸ್ವಾಮಿ ಮಾತ್ರ ಎಲ್ಲಾ ಬಿಟ್ಟು ಭಂಗಿ ನೆಟ್ಟ ಎಂಬಂತೆ ರಾಜ್‌ಗೆ ಗೌರವ ಸಲ್ಲಿಸುವ ಬದಲು ಪಾರ್ವತಮ್ಮನವರು ಕೊಟ್ಟ ಗಡುವನ್ನು ಟೀಕಿಸುತ್ತಿದ್ದರು. ಹೇಳಿ, ಇಷ್ಟೆಲ್ಲ ಆದ ಮೇಲೂ ಸರ್ಕಾರ ರಾಜ್ ಸ್ಮಾರಕವನ್ನು ಕಡೆಗಣಿಸುತ್ತಿದೆ ಎಂಬ ಪಾರ್ವತಮ್ಮನವರ ಮಾತುಗಳಿಗೆ ಅರ್ಥವಿಲ್ಲವೆ?

ದೇವೇಗೌಡರಂಥವರು ಮತ್ತೊಮ್ಮೆ ಹುಟ್ಟಬಹುದು. ನೂರು ಮಂದಿ ಕುಮಾರಸ್ವಾಮಿಗಳು ಆಗಿ ಹೋಗಬಹುದು. ಆದರೆ ಮತ್ತೊಬ್ಬ ರಾಜ್ ಮತ್ತೆ ಹುಟ್ಟಲು ಸಾಧ್ಯವೆ? ಅಂಥಾ ಸಾಂಸ್ಕೃತಿಕ ನಾಯಕನೊಬ್ಬನಿಗೆ ಇಡೀ ವಿಶ್ವವೇ ಹೆಮ್ಮೆಪಡುವಂಥ ಸ್ಮಾರಕವನ್ನು ನಿರ್ಮಿಸಲಾಗದಷ್ಟು ನಿಷ್ಪ್ರಯೋಜಕರೇ ಕನ್ನಡಿಗರು?

ಇದು ಗಂಡಸುತನದ ಪ್ರಶ್ನೆ ಅಲ್ಲ!

ಹಾಗೆ ನೋಡಿದರೆ ಇದೆಲ್ಲ ಉಸಾಬರಿ ಸರ್ಕಾರಕ್ಕೆ ಬೇಕಿರಲಿಲ್ಲ, ಯಾಕೆಂದರೆ ರಾಜ್‌ರವರ ಸಮಾಧಿಯನ್ನು ಅವರ ಸಂಸಾರದವರು ಮೈಸೂರು ರಸ್ತೆಯಲ್ಲಿರುವ ಪುನೀತ್ ಫಾರಂನಲ್ಲಿ ಮಾಡಲು ಸಿದ್ಧರಿದ್ದರು. ಹೇಗಿದ್ದರೂ ರಾಜ್‌ರವರ ಸಹೋದರ, ಸಹೋದರಿಯರ ಸಮಾಧಿಗಳೂ ಅದೇ ಫಾರಂನಲ್ಲಿವೆ.

ಹೋಗಲಿ, ಅದೂ ಬೇಡವೆಂದಿದ್ದರೆ, ರಾಷ್ಟ್ರಕವಿ ಕುವೆಂಪುರವರಿಗೆ ಹೇಗೆ ಅವರ ಊರಾದ ಕುಪ್ಪಳ್ಳಿಯಲ್ಲಿ ಅಂತ್ಯಸಂಸ್ಕಾರಗಳನ್ನು ಮಾಡಿದರೋ ಹಾಗೆಯೇ ರಾಜ್‌ರವರಿಗೆ ಅತಿ ಪ್ರಿಯವಾಗಿದ್ದ ಅವರ ಗಾಜನೂರಿನ ತೋಟದಲ್ಲೇ ಸಮಾಧಿಯನ್ನು ಮಾಡಬಹುದಿತ್ತು, ಅದಕ್ಕೂ ಅವರ ಸಂಸಾರದವರು ಸಿದ್ಧರಿದ್ದರು.



ಅಕಸ್ಮಾತ್ ಗಾಜನೂರಿನಲ್ಲೇ ರಾಜ್ ಸಮಾಧಿ ಮಾಡಿದ್ದರೆ, ಈಗ ಹೇಗೆ ಕುಪ್ಪಳ್ಳಿಯಲ್ಲಿ ಕವಿಶೈಲವನ್ನು ನಿರ್ಮಿಸಲಾಗಿದೆಯೋ ಹಾಗೆಯೇ ಅಲ್ಲಿಯೂ ರಾಜ್ ನೆನಪಿನ ಕೇಂದ್ರವನ್ನು ಸ್ಥಾಪಿಸಬಹುದಿತ್ತು; ಹೇಗೆ ಕುಪ್ಪಳ್ಳಿಯಲ್ಲಿ ವಿಚಾರ ಸಂಕಿರಣಗಳು, ಸಭೆಗಳು ನಡೆಯುತ್ತವೋ ಹಾಗೆಯೇ ಗಾಜನೂರಿನಲ್ಲಿ ಮಾಡಬಹುದಿತ್ತು, ಅವೆಲ್ಲವುಗಳ ಜೊತೆ ಕವಿಶೈಲದಂತೆ ಅದನ್ನು ಒಂದು ಪ್ರವಾಸಿ ಕೇಂದ್ರವಾಗಿಯೂ ಅಭಿವೃದ್ಧಿಪಡಿಸಬಹುದಿತ್ತು.

ಆದರೆ ಕೋ-ಜಾ ಸರ್ಕಾರಕ್ಕೆ ಇದನ್ನೆಲ್ಲ ಯೋಚಿಸಲು ಹೇಗೆ ಸಾಧ್ಯ, ಕ್ರಿಯಾಶೀಲ ಚಿಂತನೆಗಳ ಶೂನ್ಯತೆಯಿಂದಲೇ ಕಂಠೀರವ ಸ್ಟುಡಿಯೋದ ಒಂದು ಮೂಲೆಯಲ್ಲಿ ಕಾಟಾಚಾರಕ್ಕೊಂದು ಸಮಾಧಿಯನ್ನು ನಿರ್ಮಿಸಿ ಈಗ ತಾನೂ ಏನೂ ಮಾಡಲಾಗದ ರಾಜ್ ವಂಶದವರೂ ಏನೂ ಮಾಡಲಾಗದಂತಹ ಸ್ಥಿತಿ ನಿರ್ಮಿಸಿದೆ.

ಅಂದಹಾಗೆ, ಶಿವರಾಜ್‌ಕುಮಾರ್‌ರವರು "ರಾಜ್ ಮಕ್ಕಳಾದ ನಾವು ಮೂವರು ಗಂಡಸರಿದ್ದೇವೆ ನಾವು ಮಾಡಿ ತೋರಿಸ್ತಿವಿ" ಎಂದು ಗುಡುಗಿದ್ದಾರೆ. ಇದು ದುಡುಕಿನ ಮಾತು ಮಾತ್ರವಲ್ಲ, ಗಟ್ಟಿ ಮಹಿಳೆಯಾದ ಅವರ ತಾಯಿ ಪಾರ್ವತಮ್ಮನವರನ್ನೂ ಒಳಗೊಂಡಂತೆ ರಾಜ್ ಅಭಿಮಾನಿಗಳೆಲ್ಲರಿಗೆ ಅಪಮಾನದ ಮಾತಾಗುತ್ತದೆ.

ಶಿವು ನಮ್ಮ ಸಮಾಜದ ಸೂಕ್ಷ್ಮತೆಗಳನ್ನು ಅರಿತು ಮುಂದೆ ಇಂತಹ ಪುರುಷ ಪ್ರಧಾನ ನಿಲುವುಗಳನ್ನು ಬಿಂಬಿಸುವ ಮಾತುಗಳನ್ನಾಡದಿರಲಿ ಎಂಬುದು ಎಲ್ಲರ ಆಶಯ.

ಜಾತಿ ಮೂಲ ವಿವಾದ:

ಬಸವಣ್ಣ ಮಾದಿಗನೆ?

ಸಂದರ್ಶನ: ಪಾರ್ವತೀಶ

ಇದುವರೆಗೂ ಬ್ರಾಹ್ಮಣನೆಂದೇ ಭಾವಿಸಲಾಗಿದ್ದ ಬಸವಣ್ಣ ವಾಸ್ತವವಾಗಿ ಮಾದಿಗ ಜಾತಿಗೆ ಸೇರಿದವನು. ಹೀಗೆಂದು ತಣ್ಣಗಿನ ದನಿಯಲ್ಲಿ ಸಾಂಸ್ಕೃತಿಕ ಬಾಂಬ್ ಒಂದನ್ನು ಕವಿ-ಸ್ಕಾಲರ್ ಡಾ. ಬಂಜಗೆರೆ ಜಯಪ್ರಕಾಶ್ ಸಿಡಿಸಿದ್ದಾರೆ. ಮೊನ್ನೆ ಏಪ್ರಿಲ್ 14 ರ ಶನಿವಾರ ಜಯಪ್ರಕಾಶರ 'ಆನು ದೇವಾ ಹೊರಗಣವನು....' ಎಂಬ ಪುಸ್ತಕ ಬಿಡುಗಡೆಯಾಗಿದೆ. ಶಾಸನಗಳು, ಹಳಗನ್ನಡ ಕೃತಿಗಳು, ಐತಿಹ್ಯ ಪುರಾಣ ಹಾಗೂ ಒಟ್ಟಾರೆ ಆಗಿನ ಸಾಮಾಜಿಕ ಬದುಕು ಮತ್ತು ಸಾಂಸ್ಕೃತಿಕ ಜೀವನಾಭ್ಯಾಸಗಳ ಹಿನ್ನೆಲೆಯಲ್ಲಿ ಬಸವಣ್ಣನ ಜಾತಿ ಮೂಲವನ್ನು ನೆಲೆಗೊಳಿಸುವ ಪ್ರಯತ್ನವನ್ನು ಜಯ ಪ್ರಕಾಶ್ ಮಾಡಿದ್ದಾರೆ.

ಬಸವಣ್ಣ ಬ್ರಾಹ್ಮಣನಲ್ಲವೆಂದು ಹೇಗಾದರೂ ಮಾಡಿ ಸಾಧಿಸಬೇಕೆಂಬುದಾಗಲಿ ಅಥವಾ ಬಸವಣ್ಣ ಮಾದಿಗನೇ ಹೌದೆಂದು ಹಠ ಮಾಡುವ ದುಡುಕಿನ ಉದ್ದೇಶವಾಗಲಿ ಜಯಪ್ರಕಾಶ್‌ಗೆ ಇದ್ದಂತಿಲ್ಲ. ಆದರೆ ಬಸವಣ್ಣ ಬ್ರಾಹ್ಮಣನಾಗಿದ್ದನೆಂಬ ಕೆಲ ವಿದ್ವಾಂಸರ, ಸಂಶೋಧಕರ ನಿಲುವುಗಳು ಹಾಗೂ ಅವರು ಮುಂದಿಟ್ಟಿದ್ದ ತರ್ಕಗಳಲ್ಲೇ ಹಲವಾರು ಬಿರುಕುಗಳು ಕಂಡ ಕಾರಣ ಆ ಕುರಿತು ಇನ್ನಷ್ಟು ಸಂಶೋಧನೆ ನಡೆಸಿದ ಜಯಪ್ರಕಾಶ್‌ಗೆ ಬಸವಣ್ಣ ಮಾದಿಗ ಜನಾಂಗಕ್ಕೆ ಸೇರಿದ್ದ ಎಂಬ ಸತ್ಯ ಗೋಚರವಾಗಿದೆ. ಅವರು ಆ ನಿಲುವಿಗೆ ತಲುಪಲು ಪೂರಕವಾದ ತರ್ಕಗಳನ್ನು ತಮ್ಮ ಹೊಸ ಸಂಶೋಧನಾ ಕೃತಿ 'ಆನು ದೇವಾ ಹೊರಗಣವನು'ನಲ್ಲಿ ಬಹಳ ಸಂಯಮದ ದನಿಯಲ್ಲಿ ಪ್ರತಿಪಾದಿಸಿದ್ದಾರೆ.



ಆದರೆ ನಿರೀಕ್ಷಿಸಿದ್ದಂತೆ ಇದಕ್ಕೆ ವಿರೋಧ ವ್ಯಕ್ತವಾಗಿದೆ. ಡಾ. ಚಿದಾನಂದಮೂರ್ತಿ ಮತ್ತು ಮಾತೆ ಮಹಾದೇವಿ ಜಯಪ್ರಕಾಶರ ನಿಲುವನ್ನು ಖಂಡಿಸಿದ್ದಾರೆ. ಬಹುತೇಕ ಲಿಂಗಾಯತ ಮಠಾಧೀಶರು ಈ ಬಗ್ಗೆ ಇನ್ನೂ ಯಾವ ಪ್ರತಿಕ್ರಿಯೆಯನ್ನು ಹೇಳಿಲ್ಲವಾದರೂ ಈ ಕೃತಿ ವಿವಾದ ವೆಬ್ಬಿಸುವುದು ಖಚಿತವಾಗಿದೆ. ಪಿ.ವಿ. ನಾರಾಯಣರ 'ಧರ್ಮಕಾರಣ', ನಾಟಕಕಾರ ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ'ಕ್ಕೆ ಲಿಂಗಾಯತರಿಂದ ವ್ಯಕ್ತವಾದ ವಿರೋಧ ನೆನೆದುಕೊಂಡರೆ 'ಆನು ದೇವಾ'ವನ್ನು ಇವತ್ತಿನ ಬಸವಣ್ಣನ ಅನುಯಾಯಿಗಳು - ಅದರಲ್ಲೂ ಮೇಲ್ಜಾತಿ ಸ್ಥಾನಮಾನ ಹೊಂದಿರುವ ಜನಾಂಗವಾಗಿ-ಒಪ್ಪಿಕೊಳ್ಳುತ್ತಾರಾ ಎಂಬ ಬಗ್ಗೆ ಅನುಮಾನಗಳಿವೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಸಂಶೋಧಕ ಬಂಜಗೆರೆ ಯವರ ನಿಲುವುಗಳ ಬಗ್ಗೆ ಒಂದು ವೈಚಾರಿಕ ಹಾಗೂ ಸಂಯಮಪೂರ್ಣ, ಆರೋಗ್ಯಕರ ಚರ್ಚೆಯಾಗಲೆಂದು ಆಶಿಸುತ್ತಾ 'ಲಂಕೇಶ್' ಅವರೊಂದಿಗೆ ನಡೆಸಿದ ಸಂದರ್ಶನವನ್ನು ಇಲ್ಲಿ ಪ್ರಕಟಿಸಿದೆ.

ಲಂಕೇಶ್: ಜಯಪ್ರಕಾಶ್ ಏನಿದು 'ಆನು ದೇವಾ ಹೊರಗಣವನು'?

ಜೆಪಿ: ಬಸವಣ್ಣನ ಜಾತಿ ಮೂಲ ಯಾವುದಿರಬಹುದೆಂಬ ಬಗ್ಗೆ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ನೆಲೆಗಟ್ಟಿನಲ್ಲಿ ನಡೆಸಿದ ನನ್ನ ಒಂದು ಅಧ್ಯಯನ ಇದು.

ಬಸವಣ್ಣ ಬ್ರಾಹ್ಮಣನಾಗಿದ್ದು ಜನಿವಾರ ಕಿತ್ತೆಸೆದು ಬಂದ ಎಂಬ ಪ್ರತಿಪಾದನೆಗಳಿವೆ. ಆದರೆ ಅವನ ಬದುಕಿನ ಹಿನ್ನೆಲೆ ಮತ್ತು ಸುತ್ತಲಿನ ಕಥನಗಳ ಒಳಾರ್ಥಗಳನ್ನು ನಾವು ಸರಿಯಾಗಿ ಗ್ರಹಿಸಬಲ್ಲವಾದರೆ ಬಸವ ಬ್ರಾಹ್ಮಣನಾಗಿದ್ದನೆಂಬುದು ಅವಾಸ್ತವಿಕ ಎನಿಸುತ್ತದೆ. ಅವನು ಮಾದಿಗ ಜನಾಂಗದವನೆಂಬ ಸತ್ಯವನ್ನು ತಿರುಚಲಾಗಿದೆ ಎಂಬ ನಿಲುವು ನನ್ನದು.

ಲಂ: ಇದರ ವಿವರಗಳಿಗೆ ಆಮೇಲೆ ಹೋಗೋಣ, ಆದರೆ ಬಸವನ ಜಾತಿ ಮೂಲವನ್ನು ಈಗ ಹುಡುಕಬೇಕೆಂಬುದರ significance ಏನು?

✦ ನಮ್ಮಲ್ಲಿ ಬುದ್ಧಿವಂತಿಕೆ, ಶ್ರೇಷ್ಠ ಸಾಧನೆಗಳೆಲ್ಲಾ ಸಾಧ್ಯವಾಗುವುದು ಕೆಲವು ನಿರ್ದಿಷ್ಟ ಜಾತಿಯವರಿಗೆ ಮಾತ್ರವೇ ವಿನಃ ಇತರರಿಗೆ ಅಸಾಧ್ಯವೆಂಬ ಪೂರ್ವಾಗ್ರಹ ಧೋರಣೆಯಿದೆ. ಜೊತೆಗೆ ಸಂಸ್ಕೃತಿ ನಿರ್ಮಾಪಕರು, ಅದಕ್ಕೆ ಕೊಡುಗೆ ನೀಡುವವರು ಕೆಲವೇ ಕೆಲವು ಜಾತಿಗಳವರೆಂಬ ನಂಬಿಕೆಯೂ ಇದೆ. ಆದರೆ ಸಂಸ್ಕೃತಿಗೆ ಬಹುಮುಖಿ ವಿನ್ಯಾಸ ಇರುತ್ತದೆ. ಅದಕ್ಕೆ ಎಲ್ಲರ ಕೊಡುಗೆಯೂ ಇದೆ ಅನ್ನೋದನ್ನು ನಾವು ನೋಡಬೇಕು ತಾನೆ.

ಲಂ: ಬಸವಣ್ಣ ಯಾವ ಜಾತಿಯವನಾದರೇನು, ಅವನ ಕೊಡುಗೆ ತಾನೆ ನಮಗೆ ಮುಖ್ಯ ಅನ್ನೋ ಮಾತಿದೆಯಲ್ಲ?

✦ ಹಾಗಾದರೆ ಶಂಕರಾಚಾರ್ಯರ ಜಾತಿ ಏಕೆ ಬೇಕಿತ್ತು, ಅದರೊಳಗೊಂದು ಸಾಂಸ್ಕೃತಿಕ ರಾಜಕಾರಣ ಇದೆ. ಬಸವ ಬ್ರಾಹ್ಮಣನಲ್ಲ, ಮಾದಿಗ ಎಂದು ಸಾಬೀತಾದರೆ ಅದನ್ನು ಯಾರೂ ಅವಮಾನ ಅಥವಾ ಹೆಮ್ಮೆಯೆಂದು ಭಾವಿಸುವ ಅಗತ್ಯವಿಲ್ಲ.

ಲಂ: ಈ ಚರ್ಚೆಯನ್ನು ಹೀಗೆ ಹೊಸದಾಗಿ ಶುರು ಮಾಡುತ್ತಿದ್ದೀರೇಕೆ?

✦ ಇದು ಹೊಸ ವಿಚಾರ ಅಲ್ಲ, 20 ವರ್ಷ ದಿಂದಲೂ ಬಸವನ ಜಾತಿ ಮೂಲದ ಬಗ್ಗೆ ಚರ್ಚೆಗಳಾಗುತ್ತಲೇ ಇದೆ. ಪ್ರೊಫೆಸರ್ ಸುಧಾಕರ್ ಬಸವ ಕುರುಬರವನು ಎಂದಿದ್ದರು. ಆದರೆ ಅವರು ಭಾಷಾ ಶಾಸ್ತ್ರೀಯ ಆಧಾರದಲ್ಲಿ ಮಾತ್ರ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದರು. ಚಿದಾನಂದಮೂರ್ತಿ ಪ್ರಜಾವಾಣಿಯಲ್ಲಿ ಸುಧಾಕರ್ ವಾದವನ್ನು ಬುಲ್ಡೋಜ್ ಮಾಡಿಬಿಟ್ಟರು. ಆಮೇಲೆ ಸಾಲಿ ಅಂತ (ತಡೆದು....) ಅವರ ಪೂರ್ಣ ಹೆಸರು ನೆನಪಾಗ್ತಿಲ್ಲ, 'ಬಸವ ಅಕ್ಕಸಾಲಿಗ' ಅಂದರು. ಮತ್ತೊಂದೆಡೆ ದಲಿತ ಕೇರಿಗಳಲ್ಲಿ 'ಬಸವ ನಂ ಜಾತಿ' ವನೆಂಬ ಭಾವನೆಗಳಿವೆ.

ಬಹಳ ಹಿಂದೇನೇ ಸಾಧಕ ಮರುಳಸಿದ್ಧರು ಮಾದಿಗರೆಂಬ ವಿಚಾರ ಸಾಬೀತಾಗಿ ಸ್ವತಃ ಸಿರಿಗೆರೆ ಮಠದವರೂ ಅದನ್ನು ಅನುಮೋದಿಸಿದ್ದರು.


ಚಿದಾನಂದ ಮೂರ್ತಿ

ಲಂ: ಮಲೆ ಮಾದೇಶ್ವರರೂ ಮಾದಿಗರೆಂಬ ಚರ್ಚೆ ಇದೆ ಅಲ್ವಾ?

✦ ಹೌದು, ದೇವಚಂದ್ರನ 'ರಾಜಾವಳಿ ಕತೆ'ಯಲ್ಲೇ ಅದನ್ನು ಸ್ಪಷ್ಟವಾಗಿ ಹೇಳಲಾಗಿದೆ.


ಲಂ: ಬ್ರಿಟಿಷ್ ಅಧಿಕಾರಿ ಕರ್ನಲ್ ಮೆಕೆಂಜಿ 1804ರಲ್ಲಿ ಮೈಸೂರಿನ ಕನಕಗಿರಿಯಲ್ಲಿ ಭೇಟಿಯಾಗಿ ಯಾವುದಾದರೂ ಸ್ಥಳ ಪುರಾಣ ಇದೆಯೇ? ಬರೆದುಕೊಡುತ್ತೀರಾ? ಎಂದು ಕೇಳಿದಾಗ ದೇವಚಂದ್ರ 'ರಾಜಾವಳಿ ಕತೆ' ಬರೆಯುತ್ತಾನೆ. ಅಲ್ಲವೆ?

✦ ಹೌದು. ಆದರೆ ಅದರೊಳಗಿನ ಸತ್ಯ ಚಾರಿತ್ರಿಕ ಅಲ್ಲ ಅಂತಾ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯವರು ಸ್ವಾತಂತ್ರ್ಯ ನಂತರವೂ ಪ್ರಿಂಟ್ ಮಾಡಿರಲಿಲ್ಲ, ಬಹಳ ಕಾಲ ಅದೊಂದು ನಿಷಿದ್ಧ text ಆಗಿಯೇ ಉಳಿದುಹೋಗಿತ್ತು. ಸಂಸ್ಥೆ ಹಾಗೆ ತೀರ್ಮಾನಿಸಿದ್ದು ತಪ್ಪು. ಈಗ ಹೊಸ ತಲೆಮಾರು ಬಂದ ಮೇಲೆ ಚರ್ಚೆಗಳು ಮುಖಾಮುಖಿ ಆಗ್ತಿವೆ.


ಬಂಜಗೆರೆ ಜಯಪ್ರಕಾಶ್

ಲಂ: ಓಕೆ... ಈಗ ಬಸವಣ್ಣನ ಜಾತಿ ಮೂಲ ವಿಚಾರಕ್ಕೆ ಬರೋಣ. ಆತ ಬ್ರಾಹ್ಮಣನಾಗಿರಲಾರ ಎಂಬ ತರ್ಕಕ್ಕೆ ಆಧಾರ ಏನು?

✦ ಅದನ್ನು ನಾಲ್ಕಾರು ಆಯಾಮಗಳಿಂದ ವಿವರವಾಗಿ ಪುಸ್ತಕದಲ್ಲಿ ಹೇಳಿದ್ದೇನೆ. ಇಲ್ಲಿ ಒಂದೆರಡು ವಿಚಾರ ಚರ್ಚಿಸಬಹುದಾದರೆ ಬಸವಣ್ಣ ಜನಿವಾರ ಕಿತ್ತೆಸೆದು ಹೋಗಿ ಶರಣನಾದ ಅನ್ನುತ್ತಾರಲ್ಲ ಆ ಘಟನೆ ನಡೆಯಿತಾ ಇಲ್ಲವಾ ಎಂಬುದು ಬೇರೆ ವಿಚಾರ. ಆದರೆ ಜನಿವಾರ ಎಂದೊಡನೆ ಅದನ್ನು ಬ್ರಾಹ್ಮಣ ಜಾತಿಗೆ ಗಂಟು ಹಾಕಲಾಗದು. ಈ ಹಿಂದೆ ಮತ್ತು ಈಗಲೂ ನಮ್ಮ ಸಮಾಜದ ಎಡಗೈ ಪಣೆಕಟ್ಟಿನ ಕೆಲವು ಕುಶಲಕರ್ಮಿ ಜಾತಿಗಳು, ಯಜ್ಞೋಪವೀತ ಧರಿಸಿರುವುದನ್ನು ನಾವು ಕಾಣಬಹುದು. ದೇವಾಂಗ, ನೇಕಾರ, ಅಕ್ಕಸಾಲಿ, ಕಮ್ಮಾರ ಮುಂತಾದವರು ಜನಿವಾರ ಹಾಕುತ್ತಾರೆ. ಅಸ್ಪೃಶ್ಯರಾದ ಸಿಂಧ್ ಮಾದಿಗರ ಒಂದು ಪಂಗಡವೂ ಜನಿವಾರ ಹಾಕುವುದನ್ನು ಕೋಟಗಾನಹಳ್ಳಿ ರಾಮಯ್ಯ ತಮ್ಮ ಸಾಂಸ್ಕೃತಿಕ ಅಧ್ಯಯನ ಕೃತಿಯಲ್ಲಿ ಹೇಳುತ್ತಾರೆ.



ಸಿಂಧ್ ಮಾದಿಗರ ಕುಲಕಥನದಲ್ಲಿ 'ಗಂಗೆ ನಮ್ಮದು, ಝುಂಝು (ಜನಿವಾರ) ನಮ್ಮದು' ಎಂದು ಸಾರುವ ಹೇಳಿಕೆಗಳಿವೆ.

ಬಸವಣ್ಣನ ಹೆಸರು ಸಾಮಾನ್ಯವಾಗಿ ಬ್ರಾಹ್ಮಣ ಕುಟುಂಬಗಳಲ್ಲಿ ಬರುವ ಹೆಸರಿನಂತಿದೆಯೆ? ಎಂಬ ಬಗ್ಗೆಯೂ ನಾವು ಪರಿಶೀಲಿಸಬೇಕು. 'ಬಸವ' ಎಂಬ ಹೆಸರು ಏಕವಚನ ಸೂಚಿಸುತ್ತಿದೆ. 'ಬಸವ' ಎಂಬುದು ಶಿವನ ವಾಹನ ನಂದಿಯ ಅವತಾರ. ದೇವರ ಸೇವೆಗೆ ಮೀಸಲಾದ ಅಂದರೆ ಊಳಿಗಕ್ಕೆ ಪ್ರತೀಕವಾದ ಹೆಸರನ್ನು ಭೂಸುರರಾದ ಬ್ರಾಹ್ಮಣರು ಇಟ್ಟುಕೊಳ್ಳಲು ಸಾಧ್ಯವಿತ್ತೆ..?

ಲಂ: ಬಸವನನ್ನು ಸಂಗನ ಬಸವ ಎಂದು ಕರೆಯಲಾಗುತ್ತಿತ್ತು ಎಂದಿದ್ದೀರಿ!

✦ ಜನಿವಾರ ಧಾರಣೆ ವಿರುದ್ಧ ಬಂಡಾಯವೆದ್ದು ಕೂಡಲ ಸಂಗಮದ ಈಶಾನ ಗುರುಗಳ ಆಶ್ರಯಕ್ಕೆ ಬಸವಣ್ಣ ಹೋಗಿ ನಿಂತ ಎಂಬ ಘಟನೆ ಸಹಜ ಅನ್ನಿಸೊಲ್ಲ. ಅಲ್ಲಿ ಹೋಗಿ ನಿಂತ ನಂತರ ಆತನ ಹೆಸರು 'ಸಂಗನ ಬಸವ' ಆಯಿತೆಂಬುದಂತೂ ಬಸವಣ್ಣ ತನ್ನ ತಂದೆ ಮಾದಿರಾಜ ದಂಪತಿಗಳ 'ಉದರ ಸಂಜಾತ'ನಾಗಿರದೆ 'ಕರ ಸಂಜಾತ' (ದತ್ತು ಮಗ)ನಾಗಿದ್ದ ಎಂಬುದನ್ನು ತೋರಿಸುತ್ತದೆ.

ಆ ಕಾಲದ ಶರಣರು ಕಾಯಕ ಜೀವಿಗಳಾಗಿದ್ದು ಕುಲನಾಮ ಗುರುತು ಹೇಳಿಕೊಳ್ಳುವುದು ಸಹಜವಾಗಿತ್ತು. ಅದೇ ರೀತಿ ಬಸವಣ್ಣನೂ ತನ್ನ ಹಿನ್ನೆಲೆ ಹೇಳಬೇಕಾಗಿ ಬಂದಾಗ 'ಭಂಡಾರಿ' ಇತ್ಯಾದಿಗಳೆಲ್ಲಾ ಕ್ವಚಿತ್ತಾಗಿ ಬಂದಿವೆ. ನಿಷ್ಕರ್ಷೆ ಏನೆಂದರೆ ಅವನು ಸಂಗನ ಬಸವನ ಸೇವೆಗೆ ಮೀಸಲಾಗಿದ್ದ ಭಕ್ತ. ಅದು ತಂದೆಯ ಹೆಸರೂ ಅಲ್ಲ, ಅದನ್ನು ನಮ್ಮ ವಿದ್ವಾಂಸರು mention ಮಾಡಿಲ್ಲ, referenceಗೂ ತಗೊಂಡಿಲ್ಲ. ಸಂಗನ ಬಸವ ದೊಡ್ಡ cult god. ಅದಕ್ಕೊಂದು ಸಾಂಸ್ಕೃತಿಕ ಹಿನ್ನೆಲೆ ಇದೆ. ಅದು ಸುಮ್ಮನೆ ಬಂದಿಲ್ಲ. ಅಲಂಕಾರಿಕಾನೂ ಅಲ್ಲ.

ಲಂ: ಬಸವಣ್ಣ 'ಕರಸಂಜಾತ' ಪುತ್ರ ಎನ್ನುತ್ತಿದ್ದೀರಿ!

✦ ಹೌದು ಉದರ ಸಂಜಾತ ಅಂದರೆ ಸಾಂಸಾರಿಕ ನೆಲೆಗಟ್ಟಿನಲ್ಲಿ ಜನಿಸಿದವನು. ಕರಸಂಜಾತ ಅಂದರೆ ದತ್ತು ಪಡೆಯುವುದು. ಕೆಲ ಧಾರ್ಮಿಕ ritual ಗಳ ಮೂಲಕ ದತ್ತು ಮಕ್ಕಳನ್ನು ಸ್ವೀಕರಿಸುವ ಪದ್ಧತಿ ನಮ್ಮಲ್ಲಿದೆ. ಮಂಟೇಸ್ವಾಮಿ ಪರಂಪರೆಯಲ್ಲಿ ಶಿಸು ಮಕ್ಕಳನ್ನು ಪಡೆಯುತ್ತಿದ್ದ ರೀತಿ ಅದು. 12-16 ನೇ ಶತಮಾನದವರೆಗೂ ನಮ್ಮಲ್ಲಿ ಆ ಪರಂಪರೆ ಇತ್ತು.

ಅರ್ಜುನವಾಡ ಶಾಸನವೂ ಬಸವಣ್ಣನ ತಂದೆ-ತಾಯಿ ಕುರಿತು ಏನನ್ನೂ ಹೇಳುವುದಿಲ್ಲ ಎಂ.ಎಂ. ಕಲಬುರ್ಗಿ ಕೂಡ "ಹಿಂದುಮುಂದು ಯಾವ ಅನ್ಯ ಆಧಾರಗಳೂ ಇಲ್ಲದ ವಂಶಾವಳಿ ಬಸವಣ್ಣನದು" ಎಂದಿದ್ದಾರೆ.

ಬಸವಣ್ಣನ ವಚನಗಳಲ್ಲಿ ತನ್ನ ಜಾತಿ ಮೂಲ ಯಾವುದೆಂದು ಸೂಚಿಸುವ ಐವತ್ತಕ್ಕೂ ಹೆಚ್ಚು ವಚನಗಳಿವೆ. ಬಸವಣ್ಣ ತಾನು ಮಾದಾರ ಚನ್ನಯ್ಯನ ಮೂಲದವನು ಎಂದು ಹೇಳಿಕೊಳ್ಳುವಂತೆಯೇ, ತನ್ನ ವಚನಗಳಲ್ಲಿ ಮತ್ತೆ ಮತ್ತೆ 'ಮನೆಯ ಮಗ' 'ತೊತ್ತಿನ ಮಗ' 'ತೊತ್ತು' ಮುಂತಾದ ಪರಿಭಾಷೆ ಬಳಸಿದ್ದಾನೆ.

ಲಂ: ಬಸವಣ್ಣನ ವಚನಗಳಲ್ಲಿ ತಾನು ಮೇಲ್ಜಾತಿ ಬ್ರಾಹ್ಮಣನೆಂಬ ಮೇಲರಿಮೆ ನಿವಾರಿಸಿಕೊಳ್ಳಲು confession ರೀತಿಯ ಮಾತುಗಳಿವೆಯಲ್ಲಾ?

✦ ವಾಸ್ತವವಾಗಿ ಅಂತಾ ವಚನಗಳ ಸೂಚ್ಯಾರ್ಥ, ಲಕ್ಷ್ಯಾರ್ಥ ಹಾಗೂ ಧ್ವನ್ಯಾರ್ಥ ಏನಿರಬಹುದು ಎಂಬುದನ್ನು ಪರಿಗಣಿಸುವ ಮೊದಲೇ ಅರ್ಥ ವಿವರಣಾಕಾರರು ಬಸವಣ್ಣ ಬ್ರಾಹ್ಮಣ ಜಾತಿಗೆ ಸೇರಿದ್ದ ಎಂಬ ನಿಶ್ಚಿತ ನೆಲೆಯಲ್ಲಿ ನಿಂತುಕೊಂಡಿರುತ್ತಾರೆ. ಬಸವಣ್ಣ ಬ್ರಾಹ್ಮಣನಾಗಿದ್ದರಿಂದಲೇ ಪದೇಪದೇ ನಿಂದಿತನಾಗಿದ್ದನೆಂಬುದು ಕೇವಲ ಊಹೆ ಅಷ್ಟೆ. ಬ್ರಾಹ್ಮಣರನ್ನು ಅವರ ಜಾತಿ ಮೂಲಕ ಅವಮಾನಿಸುವುದು, ಅನುಮಾನಿಸುವುದು ಒಂದು ಆಧುನಿಕ ವಿದ್ಯಮಾನ ಅಷ್ಟೆ.

ಬಸವಣ್ಣ ಬ್ರಾಹ್ಮಣನೆಂದಾದಲ್ಲಿ ಚನ್ನಬಸವಣ್ಣನೂ ಬ್ರಾಹ್ಮಣನೆ. ಆದರೆ ಅವರ ವಚನಗಳಲ್ಲೇಕೆ ಜಾತಿ ಅಪವರ್ಗೀಕರಣ de castification ಕಂಡುಬರುವುದಿಲ್ಲ.

"ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೈದಾರೆ
ಆನು ದೇವಾ ಹೊರಗಣವನು
'ಸಂಬೋಳಿ ಸಂಬೋಳಿ' ಎನ್ನುತ್ತ ಇಂಬಿನಲ್ಲಿ ಇದೇನೆ
ಕೂಡಲಸಂಗಮದೇವಾ
ನಿಮ್ಮ ನಾಮವಿಡಿದ ಅನಾಮಿಕ ನಾನು'
ಎನ್ನುವ ಬಸವನ ವಚನದಲ್ಲೇ
ಅವನ ಜಾತಿ ಹಿನ್ನೆಲೆ, ಧ್ವನಿಸುತ್ತದೆ

ಅನು ದೇವಾ...ದ ಕೆಲವು ಆಯ್ದ ಭಾಗಗಳು

ಬಸವಣ್ಣನ ಜಾತಿಮೂಲವನ್ನು ಗುರುತಿಸಲು ನಮಗೆ ನೆರವಾಗುವ ಮತ್ತೊಂದು ಪ್ರಮುಖ ಪೂರಕ ಮಾಹಿತಿಯೆಂದರೆ ಬಾಲಬಸವ್ವಗಳದು. 'ಬಾಲಬಸಪ್ಪ'ಗಳು ಮಾದಿಗ ಜಾತಿಯ ಒಂದು ಪಂಗಡವಾಗಿದ್ದು ತಮ್ಮದು ಬಾಲಬಸಪ್ಪಗಳ ಕುಲ ಎಂದೇ ಹೇಳಿಕೊಳ್ಳುತ್ತಾರೆ. ಡಾ. ವೆಂಕಟೇಶ್ ಇಂದ್ವಾಡಿ 'ಬಾಲಬಸಪ್ಪ'ಗಳ ಬಗ್ಗೆ ಕೈಗೊಂಡಿರುವ ಅಪ್ರಕಟಿತ ಅಧ್ಯಯನದಲ್ಲಿ ನೀಡುವ ಮಾಹಿತಿ ಪ್ರಕಾರ, ಸುಮಾರು ಮೂರು ಸಾವಿರದಷ್ಟು ಸಂಖ್ಯೆಯಲ್ಲಿ ಈಗ ಉಳಿದುಕೊಂಡಿರುವ 'ಬಾಲಬಸಪ್ಪ'ಗಳ ಕುಟುಂಬಗಳು ಕಾಲಜ್ಞಾನ ಸಾರುವ ಕಾಯಕ ಮಾಡಿಕೊಂಡು ಊರಿಂದ ಊರಿಗೆ ಸಂಚರಿಸುತ್ತಾರೆ. ಬಳ್ಳಾರಿ, ಹಾವೇರಿ, ಗದಗ, ಕೊಪ್ಪಳ, ಧಾರವಾಡ ಜಿಲ್ಲೆಗಳಲ್ಲಿ ಈ 'ಬಾಲಬಸಪ್ಪ'ಗಳ ನೆಲೆವಾಸಗಳಿದ್ದು, ತಮ್ಮನ್ನು ತಾವು ಬಸವಣ್ಣನ ದತ್ತು ಮಕ್ಕಳೆಂದು ಕರೆದುಕೊಳ್ಳುತ್ತಾರೆ.

ಈ 'ಬಾಲಬಸಪ್ಪ'ಗಳು ಮಾದಿಗ ಜಾತಿಯವರಾದರೂ ಇವರು ಲಿಂಗಧಾರಿಗಳಾದ್ದರಿಂದ ಇವರಿಗೆ ಮಾದಿಗರು ಹೆಣ್ಣು ಕೊಡುವುದಿಲ್ಲ, ಇವರು ಲಿಂಗಧಾರಿಗಳಾಗಿದ್ದರೂ ಇವರನ್ನು ವೀರಶೈವರೆಂದು ಲಿಂಗಾಯತರು ಪರಿಗಣಿಸುವುದಿಲ್ಲ. ಇಂತಹ ಸಂದಿಗ್ಧ ಸಾಮಾಜಿಕ ಪರಿಸ್ಥಿತಿಯಲ್ಲಿರುವ 'ಬಾಲಬಸಪ್ಪ'ಗಳ ಪಂಗಡದಲ್ಲಿ ಮಗ ಹುಟ್ಟಿದರೆ 'ಬಾಲಬಸಪ್ಪ'ನನ್ನು ಮಾಡುತ್ತಾರೆ. ಮಗಳು ಹುಟ್ಟಿದರೆ 'ಬಸವಿ' ಬಿಡುತ್ತಾರೆ. ಹೆಚ್ಚಿನ 'ಬಾಲಬಸಪ್ಪ' ಕುಟುಂಬಗಳು ಈಗ ಊರಿನೊಳಗೆ ನೆಲೆಗೊಳ್ಳತೊಡಗಿದ್ದು, ತಮ್ಮ ಕಾಯಕ ಬಿಟ್ಟು ಮಾಮೂಲಿ ಕೃಷಿಕ ಜೀವನದಲ್ಲಿ ತೊಡಗಿಕೊಂಡು ಮಾದಿಗ ಜಾತಿಯ ಇತರರೊಡನೆ ಸಮ್ಮಿಳಿತಗೊಳ್ಳತೊಡಗಿದ್ದಾರೆ.

'ಬಾಲಬಸಪ್ಪ'ಗಳ ಪರಂಪರೆಯೂ ಬಸವಣ್ಣನ ಜಾತಿ ಮೂಲ ಹುಡುಕುವ ಸಂಶೋಧನೆಗೆ ಬಹಳ ಮುಖ್ಯವಾದ ಒಂದು ಸಾಮಾಜಿಕ ಪದ್ಧತಿಯ ಕೊಂಡಿಯಾಗಿದ್ದು, ಈ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಸಮುದಾಯದ ವಿಸ್ತೃತ ಅಧ್ಯಯನ ನಮಗೆ ಮತ್ತಷ್ಟು ಹೆಚ್ಚಿನ ಪುರಾವೆಗಳನ್ನು ಒದಗಿಸಬಲ್ಲದು. ಯಾಕೆಂದರೆ ಮರುಳಸಿದ್ಧ, ಮಲೆಯ ಮಾದಪ್ಪ, ಸಂಗನ ಬಸವಣ್ಣ, ಗೋಣಿ ಬಸವಣ್ಣ ಮುಂತಾದವರೆಲ್ಲ ತಮ್ಮ ಕಥೆಗಳಲ್ಲಿ ಬಾಲಯೋಗಿಗಳಾಗಿಯೇ ಕಾಣಿಸಿಕೊಳ್ಳುತ್ತಾರೆ. ಬಾಲ್ಯದಿಂದಲೇ ಹೀಗೆ ಶಿವದೀಕ್ಷೆಗೆ ತೊಡಗಿಕೊಳ್ಳುವ ಆಚರಣೆಯನ್ನು ಬಾಲಬಸಪ್ಪಗಳ ಪಂಗಡ ಉಳಿಸಿಕೊಂಡು ಬಂದಿದೆ. ಈ ಎರಡೂ ಅಂಶಗಳ ನಡುವೆ ಕಂಡುಬರುತ್ತಿರುವ ಸಾಮ್ಯತೆಯ ಎಳೆ ಕೇವಲ ಕಾಕತಾಳೀಯವೆಂದು ಭಾವಿಸಿದರೆ ಅದು ಲಭ್ಯವಿರುವ ದತ್ತಾಂಶವನ್ನು ಸಮಗ್ರವಾಗಿ ವಿಶ್ಲೇಷಣೆಗೊಳಪಡಿಸಲಾಗದ ಮಿತಿಯೆಂದಾಗಿಬಿಡುತ್ತದೆ. (ಪುಟ: 79-80)

* * * * * * * *

ದೇವಚಂದ್ರ (1839) ಬರೆದಿರುವ 'ರಾಜಾವಳಿ ಕಥಾ' ಎಂಬ ಕೃತಿಯು ಮಲೆ ಮಾದಪ್ಪನ 'ಚರಿತ್ರೆ'ಯನ್ನು ಹೀಗೆ ವಿವರಿಸುತ್ತದೆ.

"ಕುಂತೂರು ಮಠದಲ್ಲಿ ನಂಜಯ್ಯ ಎಂಬ ಜೋಳಿಗೆ ಒಡೆಯರು ಇದ್ದರು. ಬಡಗು ಸೀಮೆಯಿಂದ ಒಬ್ಬ ಮಾದಿಗರ ಹುಡುಗ ಬಂದು ಆ ಮಠವನ್ನು ಸೇರಿದ. ಆತ ಅಲ್ಲೇ ದನಗಳನ್ನು ಕಾಯ್ದುಕೊಂಡಿದ್ದು, ಹೂವು ತರಲು ಹೋಗಿ, ಚೆಂಡಾಟ ಆಡುತ್ತಾ, ಅಲ್ಲಿ ಸಿಕ್ಕಿದ್ದ ಪ್ರಾಣಿಗಳನ್ನು ಪುಷ್ಪಗಳನ್ನಾಗಿ ಮಾಡಿ ತಂದು ಇಟ್ಟಿದ್ದ. ಇದು ಅವನ ಪೂರ್ವ ಸಿದ್ಧಿ. ಇವನು ಜೋಳಿಗೆ ನಂಜ ಒಡೆಯರಿಗೆ ಶ್ರದ್ಧೆಯಿಂದ ಶಿಷ್ಯತ್ವವನ್ನು ವಹಿಸಿದ. ಭಾನು ಕೀರ್ತಿ(ಶ್ರವಣ)ಗಳೆಂಬ ಜಿನಮುನಿಯು ಆ ಪ್ರದೇಶದಲ್ಲಿ ಮಂತ್ರಿ, ಪ್ರಧಾನಿಗಳೆಲ್ಲರನ್ನೂ, ತನ್ನ ವಶ ಮಾಡಿಕೊಂಡಿದ್ದು, ಆತನಿಗೆ ಕಾದರೆಯ ಮೇಲೆ ಪಾದುಕವನ್ನು ತೊಡಿಸಿ, ನಿಲ್ಲಿಸಿ, ನಂಜರಾಜ ಒಡೆಯರಿಗೆ ಪಟ್ಟವನ್ನು ಕಟ್ಟಿ, ತಾನು ಗುಡ್ಡನಾಗಿದ್ದು ಪರ್ವತದ ಬೋಳರೆಯಲ್ಲಿ ಯೋಗದಲ್ಲಿದ್ದಂಥ ಶ್ರವಣ ಮುನಿಯನ್ನು ಕೊಂದು, ಪಾಪಕ್ಕೆ ಅಂಜದೆ ನಂಜಯ್ಯನ ರಾಜ್ಯಕ್ಕೆ ತಾನೇ ಅರಸನಾಗಿ, ಮಾದರಸನೆಂದು ಪ್ರಸಿದ್ಧನಾದ."

ಹದಿನಾರನೇ ಶತಮಾನದ ಕೊನೆಯ ಭಾಗ ಹಾಗೂ ಹದಿನೇಳನೇ ಶತಮಾನದ ಮೊದಲ ಭಾಗದಲ್ಲಿ ಇದ್ದ ಮಾದಿಗ ಮೂಲದ ಮಲೆ ಮಾದೇಶ್ವರ ಹೀಗೆ ಅಪರ ರಾಜನಂತೆ ವರ್ತಿಸಿದ ಎಂಬ ಪ್ರತೀತಿಯನ್ನು ಗಮನಿಸಿದರೆ ಅಂತಹ ಸಾಧ್ಯತೆಗಳು ಇದ್ದಿರುವ ನಿದರ್ಶನಗಳು ಹೊಳೆಯುತ್ತವೆ.

ಜುಂಜಪ್ಪನ ಕಾವ್ಯದಲ್ಲಿ ಮಂಗಳವೇಡೆಯಲ್ಲಿದ್ದ ಮಾದಿಗ ಪಂಡಿತರ ಉಲ್ಲೇಖ ಬರುತ್ತದೆ. ಜುಂಜಪ್ಪನ ಸೋದರ ಮಾವಂದಿರು ಮಾದಿಗ ಪಂಡಿತರ ಅರಮನೆ ಯಂತಹ ಮನೆಯ ಮುಂದೆ ಹೋಗಿ ಮಾಟ ಮಂತ್ರಗಳ ಮುಖಾಂತರ ತಮಗೆ ನೆರವಾಗುವಂತೆ ಬೇಡಿಕೊಳ್ಳುವ ಪ್ರಸಂಗ ಚಿತ್ರಿತವಾಗಿದೆ. ಇದೇ ಮಂಗಳವೇಡೆಯಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದ ಚೋಕಮೇಲ ಎಂಬ ವಿಠಲ ಭಕ್ತನಾದ 'ಮಾನುಭಾವ' ಆಗಿ ಹೋದ ಐತಿಹಾಸಿಕ ನಿದರ್ಶನಗಳಿವೆ. ಇಂತಹ ಪೂರಕ ನಿದರ್ಶನಗಳು ಒಟ್ಟಾರೆಯಾಗಿ ಮಂಗಳವೇಡೆ, ಕಲ್ಯಾಣ ಮುಂತಾದ ಕಡೆಗಳಲ್ಲಿ ಅಂತ್ಯಜ ಜಾತಿ ಸಮುದಾಯಗಳಿಗೆ ಇದ್ದಿರ ಬಹುದಾದ ಸಾಮಾಜಿಕ ಮಹತ್ವವನ್ನು ಪ್ರತಿಬಿಂಬಿಸುತ್ತಿವೆ. (ಪುಟ: 80-81)


* * * * * * * *

ಇಡೀ ಭಾರತದಲ್ಲೇ ಅಪೂರ್ವವೆನಿಸಿದ ಸಾಮಾಜಿಕ ಕ್ರಾಂತಿಯೊಂದರ ಮುಖ್ಯ ಪಾತ್ರಧಾರಿಗಳು, ನೇತಾರರೆಲ್ಲ ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿ'ಯ ಪ್ರಕಾರ ಈ ಅಸ್ಪೃಶ್ಯ ಜಾತಿಗಳಿಗೆ ಸೇರಿದವರಾಗಿದ್ದರು. ತಮ್ಮ ಮೇಲೆ ಹೇರಲ್ಪಟ್ಟಿದ್ದ ಸಾಮಾಜಿಕ ವಿಧಿ ನಿಷೇಧಗಳು ಮತ್ತು ಆರ್ಥಿಕ ಲೂಟಿಯನ್ನು ವಿರೋಧಿಸಲು ಈ ಸಮುದಾಯಗಳು ಮುನ್ನಡೆಸಿದ ಅಪೂರ್ವ ಹೋರಾಟದ 'ಪ್ರಭೆ' ಅಡಗಿರುವುದೇ ಆ ಸಮುದಾಯಗಳ ತಳಸ್ತರದ ಸಾಮಾಜಿಕ ಹಿನ್ನೆಲೆಯಲ್ಲಿ ಎಂಬುದನ್ನು ಅರಿಯಲು ನಾವು ಸಮಗ್ರವಾದ ಸಂಶೋಧನೆಯನ್ನು ಹಲವು ಆಯಾಮಗಳ ನೆಲೆಯಲ್ಲಿ ಕೈಗೊಳ್ಳಬೇಕು. ಆಗ ಮಾತ್ರವೇ ಬಸವಣ್ಣ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನೆಂಬ ಹುಸಿ ಸತ್ಯವನ್ನು ಹೇಳುವ ಅಪದ್ಧಗಳನ್ನು ನಿವಾರಿಸಲಿಕ್ಕೆ ಸಾಧ್ಯವಾಗುತ್ತದೆ.

ಭಾರತದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಸಂಕೇತವಾಗಿದ್ದ ವೈದಿಕಶಾಹಿ ಜಾತಿ ವ್ಯವಸ್ಥೆಯ ವಿರುದ್ಧ ಸಂಘರ್ಷ ನಡೆಸಿದ ಬಹುಪಾಲು ಜನರು ಭಕ್ತಿ ಪಂಥಗಳ ಮುಂಚೂಣಿಯಲ್ಲಿದ್ದುದು, ಸಮಾಜದ ತಳಸ್ತರಗಳ ಕುಶಲಕರ್ಮಿ ಜಾತಿಗಳಿಂದ ಬಂದ ಮಾನುಭಾವರಾಗಿದ್ದರು. ಅದರಲ್ಲೂ ಕರ್ನಾಟಕದ ವಚನಕಾರ ಚಳವಳಿಯ ಮುಂಚೂಣಿಯಲ್ಲಿ ಕುಶಲಕರ್ಮಿ ಜಾತಿಗಳಾಗಿದ್ದ ಮಾದಿಗ ಮತ್ತು ನೇಕಾರ ಸಮುದಾಯಗಳ ಶರಣರಿದ್ದರು ಎಂಬ ಸತ್ಯ ಪ್ರಕಟಗೊಳ್ಳುತ್ತದೆ. ಜೇಡರ ದಾಸಿಮಯ್ಯ ಮತ್ತು ಮಾದಾರ ಚನ್ನಯ್ಯ ಈ ವಚನಕಾರ ಚಳವಳಿಯ ಆದ್ಯ ವ್ಯಕ್ತಿಗಳಾಗಿರುವುದೂ ಈ ಕಾರಣದಿಂದಲೇ ಎಂಬುದೂ ಆಗ ಸ್ಪಷ್ಟವಾಗುತ್ತದೆ. ಹಾಗೆಯೇ ಸಂಗನ ಬಸವಣ್ಣ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಕಿನ್ನರಿ ಬೊಮ್ಮಯ್ಯ, ಮಡಿವಾಳ ಮಾಚಯ್ಯ ಮುಂತಾದವರು ಈ ತಳವರ್ಗದ ಅಸ್ಪೃಶ್ಯ ಜಾತಿಗಳಿಂದ ಮೂಡಿಬಂದ ಶರಣರಾಗಿದ್ದರು ಎಂಬುದು ನಿರ್ವಿವಾದವಾಗಿ ನೆಲೆಗೊಳ್ಳುತ್ತದೆ. (ಪುಟ: 84) ■

'ಆನು ದೇವಾ...' ಸಿಗುವುದೆಲ್ಲಿ

ಬಸವಣ್ಣನ ಜಾತಿ ಮೂಲದ ವಿಶ್ಲೇಷಣೆಯ 'ಆನು ದೇವಾ ಹೊರಗಣವನು...' ಎಂಬ **90** ಪುಟಗಳ ಸಂಶೋಧನಾ ಕೃತಿಯನ್ನು ಲಕ್ಷ್ಮಿ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಓದುವ ಆಸಕ್ತಿ ಇರುವವರು, ಪ್ರತಿಗಳು ಬೇಕಾದವರು **23516721** ಗೆ ಫೋನ್ ಮಾಡಬಹುದು.



ಮಲೆ ಮಾದೇಶ್ವರ

ಲಂ: ಚಿದಾನಂದಮೂರ್ತಿಯವರು ನಿಮ್ಮ ಅಭಿಪ್ರಾಯ ಒಪ್ಪುವುದಿಲ್ಲ; ಅವರ ಸಂಶೋಧನಾ ವಿಧಾನ ಹಾಗೂ ನಿಲುವುಗಳು ಎಷ್ಟು ವಿಶ್ವಾಸಾರ್ಹ?

◆ ಅವರಿಗೆ ಕೆಲವು **pre assumptions** ಗಳಿವೆ. ಚಿಮೂರ ಸಾಮಾಜಿಕ ಹಿನ್ನೆಲೆಯೂ ಇಲ್ಲಿ ಮುಖ್ಯ. ಅವರು ಆಂಧ್ರ ಮೂಲದ ಆರಾಧ್ಯರು ವೀರಶೈವದೊಳಗೆ **priestly class** ನಿಂದ ಬಂದವರಾಗಿ ಅವರಿಗೆ ವಚನ ಚಳವಳಿಯಲ್ಲಿ ಮೇಲುಜಾತಿಯವರ (ಬಸವ ಬ್ರಾಹ್ಮಣನೆಂಬ) ಪಾತ್ರ ಇತ್ತು ಎಂದು ಸಾಬೀತುಮಾಡಬೇಕಾದ ಸಾಮಾಜಿಕ ಅನಿವಾರ್ಯತೆ ಇದೆ ಅನ್ನಿಸುತ್ತೆ.

ಚಿಮೂರವರು ಬಸವನ ಜಾತಿ ಮೂಲದ ಬಗ್ಗೆ ಇನ್ನಿತರ ಸಾಧ್ಯತೆಗಳ ಕಡೆ ನೋಡುತ್ತಿಲ್ಲ.

ಲಂ: ಸರಿ ಜೆಪಿ ಈ ವಿಚಾರ ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಒಂದು ಆರೋಗ್ಯಕರ ಚರ್ಚೆಗೆ ಅವಕಾಶ ಮಾಡಿಕೊಡಲಿ ಅಂತ ಆಶಿಸೋಣ.

◆ ಇಲ್ಲಿ ನಾನೊಂದು ವಿಚಾರ ಹೇಳಬೇಕು. ಹೊಸ ವಿವಾದ ಸೃಷ್ಟಿಸಬೇಕೆಂತಾಗಲಿ ಅಥವಾ ಪ್ರಚಾರ ಸಿಗಲಿ ಅಂತಾಗಲಿ ನಾನೀ ಅಧ್ಯಯನ ಮಾಡಿಲ್ಲ. ಚರಿತ್ರೆಯನ್ನು ನೋಡುವಾಗ ಯಾವುದೇ ಪೂರ್ವಗ್ರಹಿಕೆಗಳಿಗೆ ಒಳಗಾಗದ ವಾಸ್ತವಿಕ ನೆಲೆಗಟ್ಟು ನಮ್ಮದಾಗಿರಬೇಕೆಂಬ ಹಂಬಲ ನನ್ನದು. ಅಂತಹದ್ದೊಂದು ಚರ್ಚೆ ಈಗ ನಡೆಯುವುದಾದರೆ ಸಂತೋಷ. ■

ಅನಿಸಿಕೆ



ನಿಡುಮಾಮಿಡಿ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ:

ನಾನಿನ್ನೂ ಆ ಪುಸ್ತಕ ಓದಿಲ್ಲ. 4-5 ವರ್ಷದ ಹಿಂದೆ ಕೋಲಾರದಲ್ಲಿ ನಾನೂ ಜಯಪ್ರಕಾಶ್ ಒಂದೇ ವೇದಿಕೆಯಲ್ಲಿದ್ದಾಗ ಅವರು ನನ್ನ ಹತ್ತಿರ ಈ ವಿಚಾರ ಪ್ರಸ್ತಾಪಿಸಿದ್ದರು. ಆನಂತರ ಬರೆದರೂಂತ ಕಾಣುತ್ತೆ, ನಾನು ಖಂಡಿತಾ ಆನು ದೇವಾ ಹೊರಗಣವನು ತರಿಸಿ ಓದಿ ನಂತರ ಮಾತಾಡುತ್ತೇನೆ.



ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಸಾಣೇಹಳ್ಳಿ ಮಠ

ಸಂಶೋಧನೆಯು ಸಾಮಾಜಿಕ ವಾತಾವರಣವನ್ನು ಕಲುಷಿತಗೊಳಿಸದಂತೆ ಇರಬೇಕು. ಇವತ್ತು ಸಂಶೋಧನೆಯ ಹೆಸರಿನಲ್ಲಿ ಇಲ್ಲದ ವಿಚಾರ ಪ್ರಸ್ತಾಪ ಮಾಡಿ ಜನರ ಭಾವನೆಗಳನ್ನು ಕಲಕುವ ಕೆಲಸ ಅಲ್ಲಲ್ಲಿ ನಡೆಯುತ್ತಿದೆ. ಬಸವಣ್ಣನವರು ತಮ್ಮ ಜಾತಿಯ ಬಗ್ಗೆ ಅನೇಕ ಸಾರಿ ನೊಂದು ನುಡಿಯುತ್ತಾರೆ. ಜಾತಿಗಿಂತಾ ವ್ಯಕ್ತಿಗೆ ಮಾನವೀಯತೆ ಹಾಗೂ ಸಾಮಾಜಿಕ ಕಳಕಳಿ ಮುಖ್ಯ ಎಂದವರು ಬಸವಣ್ಣ.

'ಆನು ಹಾರುವನೆಂದರೆ ಕೂಡಲಸಂಗಮ ದೇವ ನಗುವನಯ್ಯ' ಎಂಬ ವಚನದಲ್ಲಿ ಹೇಳಿದ್ದಾರೆ. ಬಸವಣ್ಣನ ಜಾತಿ ಕಟ್ಟಿಕೊಂಡು ಯಾರಿಗೂ ಆಗುವಂತಾದ್ದೇನಿಲ್ಲ. ಬದಲಾಗಿ ಬಸವಣ್ಣನವರು ಪ್ರತಿಪಾದಿಸಿದ ತತ್ವ ಸಮಾಜದಲ್ಲಿ ಅನುಷ್ಠಾನ ಆಗಬೇಕು. ಈ ದಿಸೆಯಲ್ಲಿ ಸಾಹಿತಿಗಳು, ಸಂಶೋಧಕರು ಹಾಗೂ ಸಮಾಜ ಸುಧಾರಕರು ಕೆಲಸ ಮಾಡಬೇಕು. ಇಲ್ಲದಿದ್ದಲ್ಲಿ ಒಬ್ಬರು ಬಸವಣ್ಣನ ವಚನಾಂಕಿತ ಬದಲಿಸಿದ ಹಾಗೆ ಜಯಪ್ರಕಾಶರ ಸ್ಥಿತಿಯೂ ಆದೀತೇನೋ!



ಶಿವಸುಂದರ್, ಬರಹಗಾರರು

ಸಾಮಾಜಿಕ ಪ್ರಾಮುಖ್ಯತೆ ಹೊಂದಿರೊ ಐತಿಹಾಸಿಕ ವ್ಯಕ್ತಿಗಳ ಬದುಕು ಮತ್ತು ತತ್ವಜಿಜ್ಞಾಸೆಗಳ ಐತಿಹಾಸಿಕತೆ ಕೆಲವು ನಿರ್ದಿಷ್ಟ ಸಂದರ್ಭದಲ್ಲಿ ಮತ್ತೆ ಮತ್ತೆ ಪುನರ್ ಮೌಲ್ಯಮಾಪನಕ್ಕೆ ಒಳಗಾಗುವುದು ಸಹಜ. ಪ್ರತಿ ಬಾರಿ ಮರು ಮೌಲ್ಯಮಾಪನಕ್ಕೊಳಗಾದಾಗಲೂ ಈವರೆಗೆ ಪ್ರಧಾನ ಧಾರೆ ತಿಳವಳಿಕೆ ಮರೆಮಾಚಿದ್ದ ಕೆಲವು ದೃಷ್ಟಿಕೋನಗಳು ಹೊರಬೀಳುತ್ತವೆ. ಅಷ್ಟರಮಟ್ಟಿಗೆ ಅದು ಪ್ರಧಾನಧಾರೆಯ ಯಜಮಾನ್ಯವನ್ನು **subverse** ಮಾಡಲಿಕ್ಕೆ ಹಾಗೂ ಪ್ರಜಾತಾಂತ್ರೀಕರಣಗೊಳಿಸಲಿಕ್ಕೆ ಸಹಾಯ ಮಾಡುತ್ತೆ, ಸ್ತ್ರೀವಾದ, ದಲಿತ ಪ್ರಜ್ಞೆ ಹರಿಸರವಾದ ಇನ್ನಿತರ ದೃಷ್ಟಿಕೋನಗಳು ಪ್ರಧಾನಧಾರೆಯನ್ನು ಪ್ರಜಾತಾಂತ್ರೀಕರಣಗೊಳಿಸಿವೆ ಇತಿಹಾಸದಲ್ಲಿ.

ಬಂಜಗೆರೆ ಜಯಪ್ರಕಾಶರ ಈ ಪ್ರಯತ್ನದಲ್ಲಿ ಸಹ ಅದರ ಐತಿಹಾಸಿಕ ಖಚಿತತೆಯನ್ನು ನಿಖಷಕ್ಕೊಳಪಡಿಸಿಯೇ ಚರ್ಚಿಸಬೇಕು. ಬಸವಣ್ಣನವರ ಬದುಕಿನ ಐತಿಹಾಸಿಕತೆ ಬಗ್ಗೆಯೂ ವ್ಯಕ್ತವಾಗಿರುವ ಪ್ರಧಾನಧಾರೆಯ ಪೂರ್ವಗ್ರಹಗಳನ್ನು ಮೀರುವುದಕ್ಕೆ ಸಹಾಯಕ್ಕೆ ಬರುವ ಸಾಧ್ಯತೆಯಾಗಿಯೂ ಈ ಕೃತಿಯನ್ನು ಪರಿಶೀಲಿಸಬಹುದೆಂದು ನನ್ನ ಅನಿಸಿಕೆ.




ಇಂದೂಧರ ಹೊನ್ನಾಪುರ, ಪತ್ರಕರ್ತರು

ಇತಿಹಾಸ ಪ್ರಸಿದ್ಧರ ಮೂಲ ಹುಡುಕುವ ಕೆಲಸ ಅತ್ಯಂತ ಕಠಿಣ ಹಾಗೂ ಜನಪ್ರಿಯವಲ್ಲದ ಕೆಲಸ. ಬಸವಣ್ಣನವರ ಹುಟ್ಟಿನ ಬಗ್ಗೆ ಎದ್ದಿರುವ ವಿವಾದಕ್ಕೆ ಬಂಜಗೆರೆ ಸಾಕಷ್ಟು ಸಾಂಸ್ಕೃತಿಕ ಸಾಕ್ಷ್ಯಾಧಾರಗಳನ್ನು ಇಲ್ಲಿ ಒದಗಿಸಿದ್ದಾರೆ. ಬಸವಣ್ಣ ಮಾದಿಗರವನು ಎನ್ನುವುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಾಗದ ಈ ಸಂದರ್ಭದಲ್ಲಿ ಬಸವಣ್ಣ ಬ್ರಾಹ್ಮಣನಲ್ಲದಿರಬಹುದೆನ್ನುವ ಸತ್ಯವನ್ನು ಸಾಕ್ಷೀಕರಿಸುವಲ್ಲಿ ಈ ಕೃತಿ ಪ್ರಾಮಾಣಿಕವಾಗಿ ಪ್ರಯತ್ನಿಸಿದೆ.


ಜನಪ್ರಿಯವಲ್ಲದ ಸತ್ಯಗಳನ್ನು ಹೇಳಲು ಸಂಶೋಧಕನಿಗೆ ಎಂಟೆದೆ ಬೇಕು. ಅದೂ ಎಲ್ಲ ಹೋರಾಟಗಳನ್ನು-ಕ್ರಾಂತಿಗಳನ್ನು [illegible] ನುಂಗಿ ನೀರು ಕುಡಿಯುವ ವೈದಿಕ ಶಾಹಿಯ ಕುತಂತ್ರವನ್ನು ಬಯಲಿಗೆಳೆಯಲು [illegible] ಅಧ್ಯಯನಗಳು ಬೇಕೆಂಬುದನ್ನು ಊಹಿಸಿಕೊಳ್ಳಲೂ ಕಷ್ಟ. ಬಂಜಗೆರೆ ಅಂಥ ಪ್ರಾಮಾಣಿಕ [illegible]

ಸೋಲಿಲ್ಲದ ಸರದಾರ ಹೊರಟ್ಟಿ ಸೋಲುತ್ತಿರುವುದೇಕೆ?

ಹೇಮಕ್ಕನ ದರ್ಬಾರು



ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುತ್ತಾ ಸೋಲೇ ಅರಿಯದ ಸರದಾರ ಎಂಬ ಕಿರೀಟ ತೊಟ್ಟುಕೊಂಡು ತಿರುಗುತ್ತಿರುವ ಶಿಕ್ಷಣ ಸಚಿವ ಹೊರಟ್ಟಿ ತವರು ಜಿಲ್ಲೆ ಧಾರವಾಡದಲ್ಲಿ ಜೆಡಿಎಸ್ ಎಂಬುವ ಆಳುವ ಪಕ್ಷಕ್ಕೆ ಭದ್ರ ನೆಲೆಯೊದಗಿಸದೇ ತನ್ನ ನೆಲೆಯನ್ನು ಮಾತ್ರ ಗಟ್ಟಿಗೊಳಿಸುತ್ತಾ ಹೊರಟಿರುವುದು ಸೋಲೇ ಅಲ್ಲವೆ.



ಜಿಲ್ಲಾ ಪಂಚಾಯತ್‌ನಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಳ್ಳುವ ಮೂಲಕ ಅಷ್ಟಿಷ್ಟು ಅಸ್ತಿತ್ವ ಉಳಿಸಿಕೊಂಡಿದ್ದ ಜೆಡಿಎಸ್‌ಗೆ ಇತ್ತೀಚೆಗೆ ನಡೆದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ತೀವ್ರವಾದ ಮುಖಭಂಗವಾಯಿತು. "ನಮ್ಮ ಮೈತ್ರಿ ಮುಂದುವರೆದಿದೆ. ಜೆಡಿಎಸ್‌ನಿಂದ ಬಿ.ಬಿ. ಗಂಗಾಧರ ಮಠರನ್ನೇ ಉಪಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ಕಣಕ್ಕಿಳಿಸುತ್ತೇವೆ. ಅವರೇ ಉಪಾಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ" ಅಂತಾ ಊರ ತುಂಬಾ ಡಂಗುರ ಸಾರಿದರು. ಆದರೆ ಆಗಿದ್ದು ಏನು? ಜೆಡಿಎಸ್‌ನ ನಾಯಕರ ಮಾತಿಗೆ ಕವಡೆಕಾಸಿನ ಕಿಮ್ಮತ್ತು ಕೊಡದೇ ಅದೇ ಪಕ್ಷದ ನಿಜನಗೌಡ ಪಾಟೀಲ ಬಂಡಾಯವೆದ್ದು ಸ್ಪರ್ಧಿಸಿದರು ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು ಕೂಡಾ.

ಕಾರಣ ಏನು?

ಜಿಲ್ಲೆಯಲ್ಲಿ ಜೆಡಿಎಸ್‌ನ್ನು ನಿಯಂತ್ರಿಸುತ್ತಿರುವವರು ಕೋನರೆಡ್ಡಿ ಹಾಗೂ ಶಿಕ್ಷಣ ಸಚಿವರ ಮೂರನೇ ಅಧಿಕೃತ ಹೆಂಡತಿ ಹೇಮಲತಾ. ಇದರಿಂದಾಗಿ ಏನೇನೋ ಆಸೆ ಇಟ್ಟುಕೊಂಡು ಜೆಡಿಎಸ್ ಬೆನ್ನು ಹತ್ತಿದ್ದ ಮಾಜಿ ಶಾಸಕರಾದ ಎ.ಬಿ. ದೇಸಾಯಿ, ಶಿವಾನಂದ ಅಂಬಡಗಟ್ಟಿ, ಪಿ.ಸಿ. ಸಿದ್ಧನಗೌಡ್ರ, ಜಿಲ್ಲಾಧ್ಯಕ್ಷ ಶಿವಾನಂದ, ಹೊಳೆಹಡಗಲಿ ರೈತ ಧುರೀಣ ಕೇಶವ ಯಾದವರನ್ನು ಒಳಗೊಂಡು ಎಲ್ಲರೂ ಬೇಜಾರಾಗಿ ಕೈ ತೊಳೆದುಕೊಂಡು ಕುಳಿತಿದ್ದಾರೆ. ಯಾವುದೇ ನಿಗಮ-ಮಂಡಳಿಗಳಿಗೆ ಜೆಡಿಎಸ್‌ನವರು ನೇಮಕಗೊಂಡಿಲ್ಲ. ಇದ್ದವುಗಳನ್ನು ಬಜೆಪಿಯವರು ಕಿತ್ತುಕೊಂಡು ಬಿಟ್ಟರು. ಇಲ್ಲಿದ್ದು ನಾವು ಹುಲ್ಲು ಕೊಯ್ಯಬೇಕೆ ಎಂದು ಪಕ್ಷದಿಂದ ಗ್ರಾಮೀಣ ಕ್ಷೇತ್ರದಿಂದ ಶಾಸಕ ಸ್ಥಾನಕ್ಕೆ ಸ್ಪರ್ಧಿಸಿ ಸೋತಿರುವ ಪಪ್ಪಿ (ಪ್ರಫುಲ್‌ಚಂದ್ರ ರಾಯನಗೌಡ್ರ) ಹುಬ್ಬಳ್ಳಿ-ಧಾರವಾಡ ಮಹಾನಗರ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬಿದ್ದಿದ್ದಾರೆ.

ಹುಬ್ಬಳ್ಳಿಗೆ ಗೃಹಮಂತ್ರಿ ಎಂ.ಪಿ. ಪ್ರಕಾಶ್ ಬಂದರು. ಹೊರಟ್ಟಿಯವರು ಕೋನರೆಡ್ಡಿ, ಕೊರವಿ ಎಂಬ ಭಂಟರಿಗೆ ಫೋನ್ ಹಚ್ಚಿದರು. ಇವರ ಮಾತನ್ನು ಕೇಳಿದ ಎಂ.ಪಿ. ಪ್ರಕಾಶ್ ಮಹಾನಗರ ಜಿಲ್ಲಾ ಅಧ್ಯಕ್ಷರಾದ ಪಪ್ಪಿ ರಾಯನಗೌಡ್ರ ಆಮಂತ್ರಣ ಧಿಕ್ಕರಿಸಿ ಕೊರವಿ ಮನೆಗೆ ಬೆಳಿಗ್ಗೆ ಚಹಾ, ತಿಂಡಿ ಸವಿಯಲು ಹೊರಟೇಬಿಟ್ಟರು. ಇದು ಪಪ್ಪಿಯವರನ್ನು ಕೆರಳಿಸಿತು. ರಾಜೀನಾಮೆ ಬರೆದು ಎಂ.ಪಿ. ಪ್ರಕಾಶರ ಮುಖಕ್ಕೆ ಅಲ್ಲಿಯೇ ಬಿಸಾಕಿದರು. ಇಷ್ಟಾದರೆ ನಡೆಯುತ್ತಿತ್ತು. ಆದರೆ ಚಹಾ ಕುಡಿಯುತ್ತಾ ಕೊರವಿ, ಶಿವು ಹಿರೇಕೆರೂರ, ಸಂತೋಷ ಹಿರೇಕೆರೂರ ಹುಬ್ಬಳ್ಳಿ ಅಧ್ಯಕ್ಷ ಗಿರಿಗಾದಿಗೆ ಹಲ್ಲು ಕಡಿಯುತ್ತಿದ್ದನ್ನು ನೋಡಿದರು. ನೋಡೋಣ ಅಂತಾ ಹೊರಟು ಹೋದರು ಪ್ರಕಾಶ್. ಆದರೆ ಹೊರಟ್ಟಿಯವರು ಸುಮ್ಮನೆ ಇರಬೇಕಲ್ಲ. ಪಕ್ಷಕ್ಕೆ ದುಡಿದ ಪಪ್ಪಿಯನ್ನು ದೂರ ತಳ್ಳಿ ಶಿವು ಹಿರೇಕೆರೂರನನ್ನು ಅಪ್ಪಿಕೊಂಡು ಹುಬ್ಬಳ್ಳಿ-ಧಾರವಾಡ ಮಹಾನಗರ ಅಧ್ಯಕ್ಷಗಿರಿಗಾದಿಯನ್ನು ಕೊಡಿಸಿಬಿಟ್ಟರು.

ಪೊಲೀಸ್ ಇಲಾಖೆ ರೆಡ್ಡಿಗಾರು ಕೇಂದ್ರ

ಸಿ.ಎಂ. ಪತ್ನಿ ಅನಿತಕ್ಕನ ದರ್ಬಾರು ಬೆಂಗಳೂರಿನಲ್ಲಿ ನಡೆಯುತ್ತಿದ್ದರೆ ಹುಬ್ಬಳ್ಳಿ-ಧಾರವಾಡದಲ್ಲಿ ಶಿಕ್ಷಣ ಸಚಿವರ ಪತ್ನಿ ಹೇಮಕ್ಕನ ಆಟ ಪ್ರಾರಂಭವಾಗಿದೆ. ಪೊಲೀಸ್ ಕಮೀಷನರ್ ನಾರಾಯಣ ನಡುಮನಿ ರೆಡ್ಡಿಗಾರು ಹಾಗೂ ಸಚಿವರ ದೂರದ ಸಂಬಂಧಿ ಕೂಡ. ಇನ್ನೂ ಸಂಚಾರಿ ಪೊಲೀಸ್ ಠಾಣೆ ಹುಬ್ಬಳ್ಳಿಯ ಎರಡೂ ಭಾಗದಲ್ಲಿ ಹೊಸಮನಿ ಗಡಾದ ಎಂಬಾತ ಮ್ಯಾಂಗನೀಸ್ ಲಾರಿಗಳಿಂದ ಲಂಚ ತಿಂದು ಈಗ ಸಸ್ಪೆಂಡ್ ಆಗಿದ್ದಾನೆ. ಧಾರವಾಡದ ಸಂಚಾರಿ ಠಾಣೆಯ ಲಿಂಗದಾಳ, ಗೋಕುಲ ಪೊಲೀಸ್ ಠಾಣೆಯ ವೀರನಗೌಡ, ಕಸಬಾಪೇಟೆ ಪೊಲೀಸ್ ಠಾಣೆಯ ನಾಗಸೂರ ಎಲ್ಲರೂ (ಸಿಪಿಐ) ರೆಡ್ಡಿಗಳು. ಅಂದರೆ ನೂರಕ್ಕೆ ತೊಂಭತ್ತು ಪರ್ಸೆಂಟ್ ಹುಬ್ಬಳ್ಳಿ-ಧಾರವಾಡದ ಒಳ್ಳೆಯ ಹುಲ್ಲುಗಾವಲಿನ ಪ್ರದೇಶಗಳಿಗೆ ರೆಡ್ಡಿಗಳೇ ವಕ್ಕರಿಸಿಕೊಂಡು ಮೇಯಲು ಬಿಟ್ಟಿದ್ದಾರೆ ಹೇಮಕ್ಕ. ಇನ್ನೂ ಇದೇ ವರ್ಷ ಜನವರಿಯಲ್ಲಿ ಪೂನಾ ರಿಸಾರ್ಟ್‌ನಲ್ಲಿ ಮಜಾ ಅನುಭವಿಸಿ ಬಂದ ನಂತರ ಎಂಟು ಲಕ್ಷ ರೂಪಾಯಿ ನೈವೇದ್ಯ ಪಡೆದು ಅಣ್ಣಾಜಿ ಮಾಲದತ್ತಿಯನ್ನು ಹುಬ್ಬಳ್ಳಿಯ ಟ್ರಾಫಿಕ್ ಎಸಿಪಿಯನ್ನಾಗಿ ತಂದು ಕೂಡಿಸಿದರು. ಒಂದೇ ಆರ್ಡರ್ ಪಾಸ್ ಮಾಡಿಸಿ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಇತಿಹಾಸ ನಿರ್ಮಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಜಗದೀಶ್ ಶೆಟ್ಟರಿಗೆ ಪೊಲೀಸ್ ಇಲಾಖೆಯಲ್ಲಿ ಕೈಯಾಡಿಸಲು ಬಿಡಲೇ ಇಲ್ಲ. ಈಗ ಅದೇ ರಾದ್ಧಾಂತಕ್ಕೆ ಕೂಡಾ ಕಾರಣವಾಗಿದೆ.

ನಾರಾಯಣ ನಡುಮನಿಗಿಂತ ಮೊದಲಿದ್ದ ಕಮೀಷನರ್ ಗಗನದೀಪ್‌ನ ಅವಧಿಯಲ್ಲಿ ನಕಲಿ ಮದ್ಯವನ್ನೇ ತಯಾರಿಸುವ ಕುಳಗಳ ವಿರುದ್ಧ ಪ್ರಾರಂಭವಾದ ಕಾರ್ಯಾಚರಣೆಯನ್ನು ಮುಂದುವರೆಸಿಕೊಂಡು ಹೋಗಿರುವ ನಾರಾಯಣ ನಡುಮನಿಯವರು, ಹುಬ್ಬಳ್ಳಿಯ ಕಮರಿಪೇಟೆಯ ನಕಲಿ ಮದ್ಯದ ಕುಳಗಳು ಮೊದಲಿನಿಂದಲೂ ಬೆಂಬಲಿಸುತ್ತ ಬಂದಿರುವ ಚೆಡ್ಡಿ (ಬಿಜೆಪಿ) ನಾಯಕರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಅಧಿಕಾರದಲ್ಲಿದ್ದರೂ ತಮ್ಮ ಆಟ ಸಾಗುತ್ತಿಲ್ಲ ಎಂಬ ಕೊರಗು ಬೇರೆ. ಅದೇ ಸರ್ಕಾರ ಜುಲೈನಿಂದ ಸರ್ಕಾರಿ ಸಾರಾಯಿ ಮಾರಾಟ ಬಂದ್ ಮಾಡಿಸಲು ಹೊರಟಿರುವುದರಿಂದ ಈ ಮೊದಲು ಹುಬ್ಬಳ್ಳಿ-ಧಾರವಾಡ ಅವಳಿನಗರದಲ್ಲಿಯ ನಕಲಿ ಮದ್ಯ ಮಾರಾಟ ಅಂಗಡಿಗಳೇ ಸರ್ಕಾರಿ ಸಾರಾಯಿ ಮಾರಾಟ ಅಂಗಡಿಗಳಾಗಿ ಮಾರ್ಪಟ್ಟಿದ್ದವು. ಇಷ್ಟು ದಿನವೂ ಅಲ್ಪಸ್ವಲ್ಪ ಉಳಿದಿದ್ದ ನಕಲಿ ಮದ್ಯವನ್ನೇ ಇಲ್ಲಿ ಮಾರಾಟ ಮಾಡಿ ಕೆಲವು ಜನರು ಬದುಕುತ್ತಿದ್ದರು. ಇವರೆಲ್ಲಾ ರಾಮನ ಭಕ್ತರೇ! ಆದ್ದರಿಂದ ಈಗ ರಾಮ ಭಜನಾ ಮಂಡಳಿಗೇ ಸಿಟ್ಟು ಬಂದಿದೆ. ಒಂದೆಡೆ ಆನ್‌ಲೈನ್ ಲಾಟರಿ ನಡೆಸಬೇಕೆಂದರೆ ಅದು ಇಲ್ಲ. ಸರ್ಕಾರಿ ಸಾರಾಯಿ ಮಾರಬೇಕೆಂದರೆ ಅದಕ್ಕೂ ಕಲ್ಲು. ಇವೆರಡೂ ಬಂದಾದ ನಂತರ ಇದೇ ನಕಲಿ ಮದ್ಯದ ಕುಳಗಳು ನಾರಾಯಣ ನಡುಮನಿನ ಬೇರೆ ಕಡೆಗೆ ಕಳಿಸಿ ಅವರ ಜಾಗಕ್ಕೆ ತಮಗೆ ಬೇಕಾದವರನ್ನು ತಂದು ಕೂಡಿಸಿ ನಕಲಿ ಮದ್ಯ ಮಾರಾಟ ಪ್ರಾರಂಭಿಸಲು ಅದರ ಜೊತೆಗೆ ಓಸಿ (ಮಟ್ಕಾ) ಪ್ರಾರಂಭಿಸಲು ತಂತ್ರಗಾರಿಕೆ ಹೆಣೆದಿದ್ದಾರೆ.

ಜಿಲ್ಲೆಗೊಬ್ಬ ಎಸ್ಪಿ ತಂದು ಕೂಡಿಸಲಾರ... ಜೋಭದ್ರಗೇಡಿ ಸರ್ಕಾರ ಬೇರೆ. ಇದನ್ನೇ ನೆಪವಾ... ಟ್ಟುಕೊಂಡಿರುವ ಚೆಡ್ಡಿ ಚತುರ ಲೋಕಸಭಾ ಸದ... ಪ್ರಹ್ಲಾದ ಜೋಷಿ ಹಾಗೂ ಆತನ ಪಟಾಲಂ ನಾರಾಯ... ನಡುಮನಿ ವಿರುದ್ಧ ಬಹಿರಂಗ ಜಗಳಕ್ಕೆ ಇಳಿದಿದ್ದಾ... ಅವಳಿ ನಗರಗಳಲ್ಲಿ ದರೋಡೆ ಪ್ರಕರಣಗಳ... ನಡೆಯದೇಹೋದರೂ ನಡೆದಿವೆ ಎಂದು ವಾದಿಸುತ್ತಾ... ಆದರೆ ಹೊರಟ್ಟಿ, ಹೇಮಕ್ಕ ಇರುವತನಕ ನಾರಾಯ... ನಡುಮನಿ ನಿಶ್ಚಿಂತವಾಗಿದ್ದಾರೆ.

ಯಾರಿ ಹೇಮಕ್ಕ

ಬಸವರಾಜ ಹೊರಟ್ಟಿ ಮೂಲತಃ ಬಿಜಾಪೂರ ಜಿಲ್ಲೆ... ಮುಧೋಳ ತಾಲ್ಲೂಕಿನ ಯಡಹಳ್ಳಿ ಗ್ರಾಮದವರು. ಇದ... ವಿರೋಧ ಪಕ್ಷದ ನಾಯಕ ಎಚ್.ಕೆ. ಪಾಟೀಲ... ಹೆಂಡತಿಯ ತವರೂರು ಕೂಡಾ ಹೌದು. ಹೀಗಾ... ನಿನಗಿದ್ದ ನಾ ನಿನಗೆ ಎನ್ನುತ್ತಾ ರಾಜಕೀಯ... ಚದುರಂಗದಾಟದಲ್ಲಿ ಇಬ್ಬರ ನಡುಗೆ ಒಂದೇ ಆಗಿದೆ...

ದೈಹಿಕ ಶಿಕ್ಷಕನಾಗಿ ಹುಬ್ಬಳ್ಳಿಯ ಲ್ಯಾಮಿಂಗಟನ... ಶಾಲೆ ಸೇರಿದ ಹೊರಟ್ಟಿ ಆಗಿನ್ನೂ ಪ್ರಾರಂಭವಾದ, ಶಿಕ್ಷಕ... ಸಮಸ್ಯೆಗಳಿಗೆ ದಿಟ್ಟ ಹೋರಾಟ ನಡೆಸುತ್ತಿದ್ದ ಮಾಧ್ಯಮಿ... ಶಾಲಾ ನೌಕರರ ಸಂಘದ ಒಳಗೆ ನುಗ್ಗಿದ. ಈ... ಹೋರಾಟವನ್ನು ಕಟ್ಟಿದವರು ಎಡಪಂಥೀಯ ಚಳವ... ಹಾಗೂ ನೀತಿಗಳನ್ನು ಅಳವಡಿಸಿಕೊಂಡಿದ್ದ ನ್ಯೂ ಇಂಗ್ಲಿಷ...

ದರ್ಶನಾಪುರ್ V/s ಹೇರೂರ್

ಧೂಳೀಪಟದತ್ತ ಜಿಲ್ಲಾ ಜೆಡಿಎಸ್


ದರ್ಶನಾಪುರ್

ಗುಲ್ಬರ್ಗಾ ಜಿಲ್ಲೆಯ ಕಾಂಗ್ರೆಸ್‌ನ ಭದ್ರಕೋಟೆಯನ್ನು ಬೇಧಿಸುವಲ್ಲಿ ಇದೇ ಮೊದಲ ಬಾರಿ ಯಶಸ್ವಿಯಾಗಿದ್ದ ಮೈತ್ರಿ ಪಕ್ಷದ ಜೆಡಿಎಸ್‌ನಲ್ಲೀಗ ಮತ್ತೆ ಭಿನ್ನಮತದ ಹೊಗೆಯಾಡುತ್ತಿದೆ. ಕೃಷಿ ಮಾರುಕಟ್ಟೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಹಾಗೂ ವಿಧಾನ ಪರಿಷತ್‌ನ ಮಾಜಿ ಮುಖ್ಯ ಸಚೇತಕ ವಿಠ್ಠಲ್ ಹೇರೂರ್ ಮಧ್ಯೆ ಮತ್ತೆ ರಾಜಕೀಯ ಸಮರ ಮುಂದುವರಿದಿದೆ.

ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ದೇವೇಗೌಡರೊಂದಿಗೆ ತುಂಬಾ ಸಲಿಗೆ ಬೆಳೆಸಿರುವ ವಿಠ್ಠಲ್ ಹೇರೂರ್ ಈ ಹಿಂದೆ ವಿಧಾನ ಪರಿಷತ್ ಸದಸ್ಯರು ಹಾಗೂ ಮುಖ್ಯ ಸಚೇತಕರೂ ಆಗಿ ಕೆಲಸ ನಿರ್ವಹಿಸಿದ್ದಾರೆ. ಜಿಲ್ಲೆಯಲ್ಲಿನ ಕಬ್ಬಲಿಗ ಜನಾಂಗದ ಮುಖಂಡರಾದ ಹೇರೂರ್ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಧೂಳೀಪಟವಾಗುವಂತೆ ಮಾಡುವಲ್ಲಿ ಶ್ರಮಿಸಿದ್ದರು.


ವಿಧಾನ ಪರಿಷತ್ ಸದಸ್ಯರ ಅವಧಿ ಮುಗಿಯುತ್ತಿದ್ದಾಗ ದೇವೇಗೌಡರನ್ನು ಕಟ್ಟಿಕೊಂಡು ಮತ್ತೆ ಅದೇ ಸ್ಥಾನದಲ್ಲಿ ಮುಂದುವರಿಯಬೇಕೆಂದು ಬಯಸಿದ್ದ ಹೇರೂರ್‌ಗೆ ಆಗ ತಾನೆ ಸಚಿವರಾಗಿದ್ದ ದರ್ಶನಾಪುರ್ ರಾಜಕೀಯ ಹುನ್ನಾರ ನಡೆಸಿ ಅವರನ್ನು ಮತ್ತೆ ಪರಿಷತ್ ಪ್ರವೇಶಿಸದಂತೆ ಕಟ್ ಮಾಡಿದ್ದರು. ಇದನ್ನು ಮನಗಂಡಿದ್ದ ಹೇರೂರ್ ಆಗ ದರ್ಶನಾಪೂರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದರು.

ಗುಲ್ಬರ್ಗಾ

ಗುಲ್ಬರ್ಗಾ ಜಿಲ್ಲೆಯ ದೇವಲಗಾಣಗಾಪುರದ ವಿಠ್ಠಲ್ ಹೇರೂರ್, ನಿಜ ಶರಣ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವ ಮೂಲಕ ಇಡೀ ಕಬ್ಬಲಿಗ ಸಮುದಾಯದ ಮೇಲೆ ಹಿಡಿತ ಸಾಧಿಸಿದವರು. ಈ ಸಮಾರಂಭಗಳಿಗೆ ಮಂತ್ರಿ ಮಹೋದಯರನ್ನು ಕರೆ ತರುವ ಮೂಲಕ ರಾಜಕೀಯ ಪ್ರವೇಶಿಸಿ 1999 ರಲ್ಲಿ ಬಿಎಸ್‌ಪಿ ವತಿಯಿಂದ ಲೋಕಸಭೆಗೆ ಸ್ಪರ್ಧಿಸಿ ಸೋತಿದ್ದರು ಕೂಡ.

ಸುಮಾರು 15 ವರ್ಷಗಳಿಂದ ನಿರಂತರವಾಗಿ ಅಫ್ಜಲ್ಪುರದ ಗುತ್ತೇದಾರ ಕುಟುಂಬವನ್ನು ವಿರೋಧಿಸುತ್ತಾ ಬಂದು ದೇವೇಗೌಡರು ಹಾಕಿದ ಗಾಳದಲ್ಲಿ ಸಿಲುಕಿ ಜೆಡಿಎಸ್ ಸೇರಿಕೊಂಡರು. ಏಳೆಂಟು ವರ್ಷಗಳ ಹಿಂದೆ ಚೌಡಾಪುರ ಕ್ರಾಸ್ ಹತ್ತಿರ ಸಣ್ಣ ಘಟನೆಗೆ ಸಂಬಂಧಿಸಿದಂತೆ ಹೇರೂರ್ ಮೇಲೆ ಗುತ್ತೇದಾರ್ ಕುಟುಂಬದಿಂದ ಮಾರಣಾಂತಿಕ ಹಲ್ಲೆ ನಡೆಯಿತು. ಆಗ ಗುತ್ತೇದಾರ್ ವಿರುದ್ಧ ಬಲು ಅಬ್ಬರವಾಗಿ ಘರ್ಜಿಸಿ ಅವರ ಮೇಲೆ ಕೇಸು ಜಡಿದುಬಿಟ್ಟರು!

ಈ ಘಟನೆಯನ್ನೇ ತಮ್ಮ ರಾಜಕೀಯ ಜೀವನಕ್ಕೆ 'ಎನ್‌ಕ್ಯಾಷ್' ಮಾಡಿಕೊಂಡ ಹೇರೂರ್ ತಮ್ಮ ಸಮುದಾಯವನ್ನು ಸಂಘಟಿಸಿ ಕಾಂಗ್ರೆಸ್ ಪಕ್ಷದ ವಿರುದ್ಧ ಛೂ ಬಿಟ್ಟರು. ಅಂದಿನಿಂದ ರಾಜ್ಯಮಟ್ಟದ ನಾಯಕನಾಗಿ ಬೆಳೆದ ಹೇರೂರ್ ಅಂಬಿಗರ ಚೌಡಯ್ಯನವರ ಜಯಂತೋತ್ಸವಗಳಿಗೆ ಸಿದ್ಧರಾಮಯ್ಯ ದೇವೇಗೌಡರನ್ನು ಕರೆಸುವ ಮೂಲಕ ಅವರಿಗೆ ಆಪ್ತನಾಗಿ ಜೆಡಿಎಸ್ ಮಡಿಲಲ್ಲಿ ಬಂದುಬಿದ್ದರು. ಇದರಿಂದಾಗಿ


ಹೇರೂರ...

ಮೊದಲಿನಿಂದ ಜೆಡಿಎಸ್‌ನಲ್ಲಿದ್ದ ದರ್ಶನಾಪುರ್ ಹಾಗೂ ವಿಶ್ವನಾಥ ಪಾಟೀಲ ಹೆಬ್ಬಾಳರಿಗೆ ತುಂಬಾ ಇರುಸುಮುರುಸಾಯಿತು. ಹೀಗಾಗಿ ಹೈಕಮಾಂಡಿನಲ್ಲಿ ಹೇರೂರ್ ವಿರುದ್ಧ ಹುನ್ನಾರ, ತಂತ್ರಗಳು ಆರಂಭವಾಗಿದ್ದವು.

ದರ್ಶನಾಪುರ್ ಹಾಗೂ ಹೆಬ್ಬಾಳರ ಕುತಂತ್ರದಿಂದಾಗಿ... ಹೇರೂರ್‌ಗೆ ಸಹಜವಾಗಿ ಪಕ್ಷದಲ್ಲಿ ಯಾವುದೇ... ಸ್ಥಾನಮಾನಗಳು ದಕ್ಕಲಿಲ್ಲ. ಇದರಿಂದ ಕುಪಿತ... ಗೊಂಡಂತಾದ ಹೇರೂರ್, ಯಾವುದೇ ಸಾರ್ವಜನಿ... ಸಭೆ ಸಮಾರಂಭಗಳಲ್ಲಿ ಬಹಿರಂಗವಾಗಿಯೇ ಈ... ಇಬ್ಬರನ್ನು ಹಿಗ್ಗಾಮುಗ್ಗಾ ಬೈಯ್ದು ಅವರ ಜನ... ಜಾಲಾಡುತ್ತಿದ್ದರು. ಆಗ ಜಿಲ್ಲೆಯ ಜೆಡಿಎಸ್‌ನಲ್ಲಿ ಬಹಿರಂಗ... ಬಂಡಾಯಕ್ಕೆ ನಾಂದಿ ಹಾಡಿದ್ದ ಹೇರೂರ್ ದೇವೇಗೌಡ...

ಪಪ್ಪಿ ಕಾಂಗ್ರೆಸ್‌ಗೆ

ಹುಬ್ಬಳ್ಳಿಯಲ್ಲಿ ಜೆಡಿಎಸ್‌ಗೆ ಭದ್ರನೆಲೆವೊದಗಿಸಿದ್ದ ಪ್ರಫುಲ್‌ಚಂದ್ರ ರಾಯನಗೌಡ್ರ ಉರುಫ್ ಪಪ್ಪಿ, ಹೇಮಕ್ಕನ ಪಕ್ಷದ ಮೇಲಿನ ಹಿಡಿತ ಮತ್ತು ಹೊರಟ್ಟಿಯ ರೆಡ್ಡಿ ಗತ್ತಿನಿಂದ ರೊಚ್ಚಿಗೆದ್ದ ಪಪ್ಪಿ ಪಕ್ಷಕ್ಕೆ ರಾಜೀನಾಮೆ ನೀಡಿದರು. ರಾಜಕೀಯದಲ್ಲಿ ಪುನರ್‌ಪ್ರವೇಶಕ್ಕೆ ಪಪ್ಪಿ ಮತ್ತೆ ತಟ್ಟಿದ್ದು ಕಾಂಗ್ರೆಸ್ ಬಾಗಿಲನ್ನು. ಇದರಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ಗ್ರಾಮೀಣ (ಹುಬ್ಬಳ್ಳಿ) ಪ್ರದೇಶದಲ್ಲಿ ಬಲ ಬಂದಂತಾಗಿದೆ. ಈಗಾಗಲೇ ಜೆಡಿಎಸ್ ವಿರುದ್ಧ ಸೆಡ್ಡು ಹೊಡೆದಿರುವ ಪಪ್ಪಿ, ಈ ಭಾಗದಲ್ಲಿ ಮೇ ತಿಂಗಳಲ್ಲಿ ನಡೆಯಲಿರುವ ಮಹಾನಗರ ಪಾಲಿಕೆಗೆ ಚುನಾವಣೆಯಲ್ಲಿ ಕನಿಷ್ಠ ಪಕ್ಷ ನಾಲ್ಕು ಜನರನ್ನಾದರೂ ತಮ್ಮ ಸ್ವಂತದ ಬಲದಿಂದ ಮಹಾನಗರ ಪಾಲಿಕೆಗೆ ಕಳಿಸುವ ಪಣ ತೊಟ್ಟಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷದಲ್ಲಿ ಇವರ ಆಗಮನ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದ ಅನಿಲಕುಮಾರ ಪಾಟೀಲರಲ್ಲಿ ನಡುಕ ಹುಟ್ಟಿಸಿದೆ. ಪಪ್ಪಿ ಹಾಗೂ ಅನಿಲ ಒಂದಾಗಿ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡಿದರೆ ಬಿಜೆಪಿ ಶಾಸಕ ಹಾಗೂ ಮಂತ್ರಿ ಜಗದೀಶ ಶೆಟ್ಟರ ತಳಕೀಳುವುದು ಗ್ಯಾರಂಟಿ. ಆದರೆ ಅನಿಲ ಪಾಟೀಲ ಈಗ ಜೆಡಿಎಸ್ ಬಾಗಿಲು ತಟ್ಟುತ್ತಿರುವ ಸುದ್ದಿ ಕೂಡಾ ಬಂದಿದೆ. ಹಾಗಾದರೆ ಮತ್ತೆ ಕಾಂಗ್ರೆಸ್‌ಗೆ ದುರಂತ, ಬಿಜೆಪಿಗೆ ಸಂತೋಷ!

ಸ್ಕೂಲ್‌ನಲ್ಲಿ ಮಾಸ್ತರ ಆಗಿದ್ದ ಕೆ.ವಿ. ರಾಯಚೂರ ಎನ್ನುವವರು. ಇಡೀ ರಾಜ್ಯದಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ಧ್ವನಿ ಕೊಟ್ಟಿದ್ದ ಈ ಸಂಘಟನೆಯಲ್ಲಿ ನುಸುಳಿದ ಬಸವರಾಜ ಹೊರಟ್ಟಿಯನ್ನು ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಲು ಇದೇ ರಾಯಚೂರ ಮಾಸ್ತರ ಅವಕಾಶ ಮಾಡಿಕೊಟ್ಟರು. ತಾನು ಗೆದ್ದ ನಂತರ ಸಂಸ್ಥೆ ಪ್ರಾರಂಭಿಸಿದವರನ್ನೇ ಹೊರಹಾಕಿದ ಹೊರಟ್ಟಿ ಶಾಸಕನಾದ ನಂತರ ಇಡೀ ಸಂಘಟನೆಯನ್ನೇ ತನ್ನ ಹಿಡಿತಕ್ಕೆ ತೆಗೆದುಕೊಂಡು ಬಿಟ್ಟ. ಬಾಶಿಲ್ ಮಿಷನ್ ಹೈಸ್ಕೂಲ್‌ನಲ್ಲಿ ಕೆಲಸ ಮಾಡುತ್ತಿದ್ದ ವಿಲ್ಸನ್ ಗಡ್ಡಿ ತರಹದ ತನ್ನ ಹಿಂಬಾಲಕರನ್ನು ಸಂಘದ ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಿ ಹಣ ಲೂಟಿಗೆ ಇಳಿದೇಬಿಟ್ಟ. ಇವನ ನುಂಗಣ್ಣತನ ಕಂಡು ರಾಯಚೂರ ಮಾಸ್ತರರು ಬೇರೆ ಸಂಘ ಕಟ್ಟಿ ಶಿಕ್ಷಕರ ಕ್ಷೇತ್ರದಿಂದ ಹೊರಟ್ಟಿ ವಿರುದ್ಧ ಸ್ಪರ್ಧಿಸಿ ಸೋತರು ಕೂಡಾ. ಆನಂತರ ಅಂತಹ ದುಸ್ಸಾಹಸಕ್ಕೆ ರಾಯಚೂರ ಹೋಗಲಿಲ್ಲ. ಹೀಗಾಗಿ ಶಿಕ್ಷಕ ಕ್ಷೇತ್ರವೆಂದರೆ ಹೊರಟ್ಟಿ, ಹೊರಟ್ಟಿ ಎಂದರೆ ಶಿಕ್ಷಕ ಕ್ಷೇತ್ರವೆನ್ನುವಂತಾಗಿದೆ. ತನ್ನನ್ನು ಆರಿಸಿ ಕಳುಹಿಸಿರುವ ಹುಬ್ಬಳ್ಳಿಯಂತಹ ಕ್ಷೇತ್ರದ ನಗರದಲ್ಲಿ ಇರುವುದು ಒಂದೇ ಒಂದು ಸರ್ಕಾರಿ ಕಾಲೇಜು. ಅದು ಕೂಡಾ ಪದವಿ ಪೂರ್ವ ಕಾಲೇಜು. ಅದನ್ನು ಇದೂವರೆಗೆ ಮೇಲ್ದರ್ಜೆಗೆ ಏರಿಸಲು ಒಮ್ಮೆ ಕೂಡಾ ಪ್ರಯತ್ನಿಸಿಲ್ಲ. ಕರ್ನಾಟಕದ ಎರಡನೇ ರಾಜಧಾನಿಯಲ್ಲಿ ಶಿಕ್ಷಣ ಸ್ಥಿತಿಯ ಬಗ್ಗೆ ಹೊರಟ್ಟಿಗಿರುವ ಶಿಕ್ಷಣ ಪ್ರೇಮಕ್ಕೆ ಇದೊಂದು ಸ್ಯಾಂಪಲ್. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡುವ ಹೊರಟ್ಟಿಯ ಉದ್ದೇಶ ಓಟಿನ ರಾಜಕಾರಣ. ಚುನಾವಣೆಯಲ್ಲಿ ತನಗೆ ಓಟ್ ಹಾಕದಿದ್ದರೆ ಸಂಸ್ಥೆಗಳಿಗೆ ನೀಡುತ್ತಿರುವ ಅನುದಾನ ಬಂದ್ ಮಾಡುವ ಹೆದರಿಕೆ.


ವಸಂತ್

ಹುಬ್ಬಳ್ಳಿ

ಬಸವರಾಜ ಹೊರಟ್ಟಿಯ ಮೊದಲನೇ ಮದುವೆ ತೊಟ್ಟಿಲ ಮದುವೆ ಅನ್ನುವುದು ಅನೇಕರಿಗೆ ಗೊತ್ತಿಲ್ಲದ ವಿಷಯ. ಇವರ ಹತ್ತಿರದ ಸಂಬಂಧಿ ಪ್ರೇಮಾ ಅನ್ನುವವರೇ ಮೊದಲನೇ ಅಧಿಕೃತ ಹೆಂಡತಿ. ಇವರ ಮಗನೇ ವಸಂತ ಹೊರಟ್ಟಿ. ಈತ ಹುಬ್ಬಳ್ಳಿಯ ನೂತನ ಆಕ್ಸ್‌ಫರ್ಡ್ ಸೈನ್ಸ್ ಕಾಲೇಜಿನ ಡೈರೆಕ್ಟರ್ ಮತ್ತು ಗೌರವ ಕಾರ್ಯದರ್ಶಿ. ಹಾವೇರಿ ಜಿಲ್ಲೆಯ ಶಕುಂತಲಾ ಎಂಬುವವರು ಹೊರಟ್ಟಿಯವರ ಎರಡನೆ ಪತ್ನಿ. ಅವರು ಈಗಾಗಲೇ ಕೈಲಾಸ ಸೇರಿಯಾಗಿದೆ. ಇಂದು ಮೂರನೆ ಪತ್ನಿಯಾಗಿರುವ ಹೇಮಲತಾ ಉರುಫ್ ಹೇಮಕ್ಕ. ಮೊದಲನೇ ಪತ್ನಿ ಜೀವಂತ ಇರುವಾಗಲೇ ಮತ್ತೊಂದು ಲಗ್ನ ಆಗುವುದು ಅಪರಾಧವಾದರೂ ಶಿಕ್ಷಣ ಸಚಿವರಿಗೆ ಇದು ಅನ್ವಯಿಸುವುದಿಲ್ಲ. ಇದೊಂದು ಲವ್ ಮ್ಯಾರೇಜ್. ಹೇಮಲತಾರವರು ಲ್ಯಾಮಿಂಗಟನ್ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗಲೇ ಅಲ್ಲಿಯೇ ದೈಹಿಕ ಶಿಕ್ಷಕರಾಗಿ ಹೊರಟ್ಟಿಯವರೊಡನೆ ಗೆಳೆತನ, ಪ್ರೀತಿ ನಂತರ ಮದುವೆ ಕೂಡಾ ಆಗಿದೆ. ಇದು **objectable** ಪ್ರಶ್ನೆ ಅಲ್ಲಾ ತಾನೆ?

ಇದೇ ಹೇಮಕ್ಕನೇ ಹುಬ್ಬಳ್ಳಿ-ಧಾರವಾಡದಲ್ಲಿ ಇಂದು ಪೊಲೀಸ್ ಇಲಾಖೆಯನ್ನು ಇಡೀಯಾಗಿ ರೆಡ್ಡಿಮಯ ಮಾಡಿಬಿಟ್ಟಿರುವುದು. ಇದಕ್ಕೆ ಸಾಥ್ ನೀಡುತ್ತಿರುವವನೇ ಹೇಮಕ್ಕನ ಸಹೋದರ ಸಂಬಂಧಿ ಕೊನರೆಡ್ಡಿ. ಇನ್ನು ಅಧಿಕಾರ ಬಂದ ಮೇಲೆ ಆಸ್ತಿ ಮಾಡದಿದ್ದರೆ ಹೇಗೆ? ಅಂತಹ ಅನಿತಕ್ಕನೇ ಕೋಟಿಗಟ್ಟಲೇ ಗೆಬರುತ್ತಿರುವಾಗ ಹೇಮಕ್ಕ ಸುಮ್ಮನೆ ಇರಲಾಗುತ್ತದೆಯೇ? ಹುಬ್ಬಳ್ಳಿಯ ಪೂನಾ-ಬೆಂಗಳೂರು ರಸ್ತೆಗೆ ಹೊಂದಿಕೊಂಡಿರುವ ಛಬ್ಬಿ ಕ್ರಾಸ್ ಹತ್ತಿರ ಫಾರಂ ಹೌಸ್ ಮಾಡಿದ್ದಾಳೆ. ಹಾಗೆಯೇ ನವಲೂರ ಹತ್ತಿರ ಪ್ರತಿ ಎಕರೆಗೆ 11 ಲಕ್ಷ ರೂಪಾಯಿ ನೀಡಿ 16 ಎಕರೆ ಹೊಲವನ್ನು ಹೇಮಕ್ಕ ಹಾಗೂ ಕೋನರೆಡ್ಡಿ ಪಾರ್ಟನರ್‌ಶಿಪ್‌ನಲ್ಲಿ ಖರೀದಿಸಿದ್ದಾರೆ. ಧಾರವಾಡದಲ್ಲಿ ಕೋನರೆಡ್ಡಿ ಕಟ್ಟಿಸಿರುವ ಮನೆಯೇ 30 ಲಕ್ಷಕ್ಕೂ ಅಧಿಕ.


ಆಕ್ಸ್‌ಫರ್ಡ್ ಸೈನ್ಸ್ ಕಾಲೇಜನ್ನು ಹುಟ್ಟುಹಾಕಿದ ಮನೀಶ್ ಕೊಟಾರಿ, ವಿನಯಚಂದ್ರ, ಮಹೇಂದ್ರಕರ, ಶಾಂತಿಲಾಲ್ ಜೈನ್ ಎಂಬ ಮಾರ್ವಾಡಿ ಗ್ಯಾಂಗ್ ಸರ್ಕಾರದ ಅನುಮತಿಗಾಗಿ ಹೊರಟ್ಟಿ ಮನೆ ಬಾಗಿಲು ತಟ್ಟಿದ ತಕ್ಷಣ, ಅಡುಗೆ ಮನೆಯಿಂದ ಓಡಿಬಂದ ಹೇಮಕ್ಕ "ನನ್ನ ಮಗಾ ವಸಂತಗ್ ಡೈರೆಕ್ಟರ್ ಅಂತಾ ಸೇರಿಸಿಕೊಂಡರ ಮಾತ್ರ ಸಹಿ ಮಾಡ್ರಿ" ಅಂತಾ ಶಿಕ್ಷಣ ಸಚಿವರಿಗೇ ಆದೇಶ ಹೊರಡಿಸಿಯೇ ಬಿಟ್ರು. ಅದಕ್ಕೆ ಎಸ್ ಅಂದ್ರು ಹೊರಟ್ಟಿ ಸಾಹೇಬರು!

ಈ ಎಲ್ಲಾ ಕೆಲಸಗಳ ನಡುವೆ ಪಾರ್ಟಿ ಕೆಲಸಕ್ಕೆ ಪುರುಸೊತ್ತಿಲ್ಲ ಹೊರಟ್ಟಿಯವರಿಗೆ. ಹೊರಟ್ಟಿ ದರ್ಪ, ಹೇಮಕ್ಕನ ಆಡಳಿತಕ್ಕೆ ಧಾರವಾಡ ಜಿಲ್ಲಾ ಜೆಡಿಎಸ್ ಮಲಗಿಬಿಟ್ಟಿದೆ.

–ವರದಿಗಾರ

ಮಧ್ಯಸ್ಥಿಕೆಯಿಂದಾಗಿ ಕೆಲ ದಿನಗಳ ಕಾಲ ಸುಮ್ಮನಿರಬೇಕಾಯ್ತು.

ಆದರೆ ಒಳಗೊಳಗೆ ಕುದಿಯುತ್ತಿದ್ದ ಈ ಭಿನ್ನಮತ ಇದೀಗ ಮತ್ತೆ ಬಹಿರಂಗವಾಗಿ ಸ್ಫೋಟಗೊಂಡಿದೆ. ನಿಜ ಶರಣ ಅಂಬಿಗರ ಚೌಡಯ್ಯನವರ 5 ನೇ ರಾಜ್ಯಮಟ್ಟದ ಜಯಂತೋತ್ಸವದ ಅಂಗವಾಗಿ ದೇವಲ ಗಾಣಗಾಪುರದಿಂದ ಇದೇ 8 ರಂದು ಆರಂಭವಾದ ಜ್ಯೋತಿಯಾತ್ರೆಗೆ ದೇವೇಗೌಡರಿಂದ ಚಾಲನೆ ನೀಡಬೇಕೆಂದುಕೊಂಡಿದ್ದ ಹೇರೂರ್‌ಗೆ ಇದೀಗ ದರ್ಶನಾಪುರ್, ಹೆಬ್ಬಾಳ್ ಮತ್ತು ಎಂ.ವೈ. ಪಾಟೀಲ ಅಡ್ಡಗಾಲಾಗಿದ್ದಾರೆ.


ಎಂ.ವೈ. ಪಾಟೀಲ

'ಬಾಯಿ ತೆರೆದರೆ ಬೊಂಬಾಯಿ' ಎಂಬಂತಿರುವ ವಿಠ್ಠಲ್ ಹೇರೂರ್ ದರ್ಶನಾಪೂರ್ ಜತೆಗೆ ಎಂ.ವೈ. ಪಾಟೀಲರನ್ನು ಸೇರಿಸಿ ಮನಬಂದಂತೆ ಮಾತನಾಡುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಅವರ ವಿರುದ್ಧ ಪ್ರಚಾರ ಮಾಡಿ ಅವರನ್ನು ಸೋಲಿಸುವುದೇ ತನ್ನ ಗುರಿ ಎಂದು ಜೆಡಿಎಸ್ ಪಕ್ಷದಲ್ಲಿ ಸೆಡ್ಡು ಹೊಡೆದು ನಿಂತಿದ್ದಾರೆ. ದರ್ಶನಾಪುರನನ್ನು ಸೋಲಿಸುವುದೇ ನನ್ನ ಗುರಿ ಎಂದು ಹೇರೂರ್ ಹೇಳಿರುವುದೇ ಹಾಸಿಗೆ ಹಿಡಿದು ಮಲಗಿದ ಎಂ.ವೈ. ಪಾಟೀಲರಿಗೆ ಪುನರ್‌ಜನ್ಮ ನೀಡಿದೆ. ಆದರೆ ಅವರು ಇದೀಗ "ದಡ ಸೇರಿದ ಮೇಲೆ ಅಂಬಿಗನನ್ನು ಮರೆತಂತೆ ನನ್ನ ವಿರುದ್ಧವೇ ಪಿತೂರಿ ನಡೆಸಿದ್ದಾರೆ. ಈ ಮೂವರನ್ನು ಸೋಲಿಸದೇ ನಾನು ವಿಶ್ರಮಿಸುವುದಿಲ್ಲ" ಎಂದು ದೊಡ್ಡದಾದ ದನಿಯಲ್ಲಿ ಗುಡುಗಿದ್ದಾರೆ.



ವಿಶ್ವನಾಥ ಪಾಟೀಲ ಹೆಬ್ಬಾಳ

ಅದೇ ರೀತಿಯಾಗಿ ದರ್ಶನಾಪೂರ್ ಸಹ "ನನ್ನನ್ನು ಸೋಲಿಸಲು ಈತ ಯಾರು? ನಾವೂ ಕೂಡ ಅವರ ತಂತ್ರಕ್ಕೆ ಸಿದ್ಧರಾಗಿದ್ದೇವೆ" ಎಂದು ಪ್ರತಿ ಹೇಳಿಕೆ ನೀಡುತ್ತಿದ್ದಾನೆ. ಜಿಲ್ಲೆಯ 13 ವಿಧಾನಸಭಾ ಕ್ಷೇತ್ರಗಳಲ್ಲಿ ಕೇವಲ ಮೂರು ಕ್ಷೇತ್ರ (ಶಹಾಪುರ, ಅಫ್ಜಲ್ಪುರ, ಚಿತಾಪುರ) ಗಳಿಂದ ಮಾತ್ರ ಜೆಡಿಎಸ್ ಗೆದ್ದುಕೊಂಡಿತ್ತು. ಆದರೆ ಯಾದಗಿರಿಯ ವೀರ ಬಸವಂತರೆಡ್ಡಿ ಹಾಗೂ ಸುರಪುರದ ರಾಜೂಗೌಡರು ಜೆಡಿಎಸ್‌ನೊಂದಿಗೆ ಗುರುತಿಸಿಕೊಂಡಿದ್ದರಿಂದ ಐದರ ಸಂಖ್ಯಾಬಲ ಹೊಂದಿರುವ ಜಿಲ್ಲಾ ಜೆಡಿಎಸ್‌ನಲ್ಲೀಗ ಮತ್ತೆ ಭಿನ್ನಮತ ಸ್ಫೋಟಗೊಂಡಿದೆ.

ಹೇರೂರ್ ಮತ್ತು ದರ್ಶನಾಪೂರ್ ಗ್ಯಾಂಗಿನ ಮಧ್ಯೆ ನಡೆದ ಈ ರಾಜಕೀಯ ಸಮರ ಮುಂಬರುವ ಮಹಾನಗರ ಪಾಲಿಕೆ ಹಾಗೂ ಪುರಸಭೆಯ ಮೇಲೆ ಪರಿಣಾಮ ಬೀರಬಲ್ಲದು ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ನಗರಸಭೆ, ಪುರಸಭೆ ಚುನಾವಣೆ ಮುಗಿದ ನಂತರ ಜಿಲ್ಲಾ ಜೆಡಿಎಸ್‌ನಲ್ಲಿ ಬಹಿರಂಗ ಕದನ.... ಅಧಿಕಾರಕ್ಕಾಗಿ, ಸ್ವಪ್ರತಿಷ್ಠೆಗಾಗಿ, ಪ್ರಾಬಲ್ಯಕ್ಕಾಗಿ ಕಿತ್ತಾಟ ಶುರುವಾಗಿ ಬಿರುಕು ಕಾಣಿಸಿಕೊಳ್ಳುವ ಮುನ್ಸೂಚನೆಗಳು ಕಂಡುಬರುತ್ತಿವೆ. ಇದನ್ನು ಯಾವ ರೀತಿ ಸರಿಪಡಿಸುವರೋ ಕಾದು ನೋಡಬೇಕಾಗಿದೆ.

–ವರದಿಗಾರ


ಹಮ್ ತುಮ್ ದೋನೋ ಜಬ್ ಮಿಲ್ ಜಾಯೆಂಗೆ....


ಇಕ್ಬಾಲ್ ಅನ್ಸಾರಿ

ಕಳೆದ 9 ತಿಂಗಳಿಂದ ವಿರುದ್ಧ ದಿಕ್ಕಿಗೆ ಮುಖ ಮಾಡಿ ಕುಂತಿದ್ದ ಕಾರ್ಮಿಕ ಮಂತ್ರಿ ಇಕ್ಬಾಲ್ ಅನ್ಸಾರಿ, ಜೆಡಿ(ಎಸ್) ಜಿಲ್ಲಾಧ್ಯಕ್ಷ ಸಂಗಣ್ಣ ಕರಡಿ ಈಗ ಒಂದಾಗಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಕಟನೆ ಹೊರಬೀಳುವ ಹಿಂದಿನ ದಿನ ಸೋಮವಾರ ಇಬ್ಬರು ಅಪ್ಪಿಕೊಂಡಿದ್ದು ಕಂಡು ಕಾರ್ಯಕರ್ತರು ದಿಲ್‌ಖುಷ್ ಆಗಿದ್ದಾರೆ. ಕರಡಿ-ಅನ್ಸಾರಿ ಒಂದಾಗಿದ್ದರಿಂದ ಕೊಪ್ಪಳ-ಗಂಗಾವತಿ-ಕುಷ್ಟಗಿ-ಯಲಬುರ್ಗಾ ಮುನ್ಸಿಪಲ್ ಮೇಲೆ ಜೆಡಿ(ಎಸ್) ಝಂಡಾ ಹಾರಿಸುತ್ತೇವೆಂಬ ಉಮೇದಿಯಲ್ಲಿದ್ದಾರೆ. ಆದರೆ ಇಬ್ಬರೂ ಒಂದಾಗಿರುವುದು ಕಾರ್ಯಕರ್ತರಿಗಾಗಿ, ಮುನ್ಸಿಪಲ್ ಚುನಾವಣೆಗಾಗಿ, ಅಭಿವೃದ್ಧಿ ಕಾರ್ಯಕ್ಕಾಗಿ ಅಂದುಕೊಂಡರೆ ಅದು ತಪ್ಪು. ಯಾವತ್ತೂ ಬಗ್ಗಲಾರೆ ಅಂತಿದ್ದ ಅನ್ಸಾರಿ ಶರಣಾಗಿಯೂ ಇಲ್ಲ. ಸೆಡ್ಡು ಹೊಡೆದಿದ್ದ ಸಂಗಣ್ಣನೂ ಸೋತಿಲ್ಲ. ಇಲ್ಲಿ ಪ್ಯಾಲಿಯಾಗಿದ್ದೆಂದರೆ ಇವರ ಜಗಳವನ್ನು ನಂಬಿ ಪರಸ್ಪರ ದ್ವೇಷ ಕಟ್ಟಿಕೊಂಡ ಕಾರ್ಯಕರ್ತರು. ಈಗ ಹೌಹಾರಿರುವವರೂ ಅವರೇ. ಆದರೆ ಕರಡಿ-ಅನ್ಸಾರಿ ಮಾತ್ರ 'ಏಕ್ ದುಜೆಕೆಲೀಯೆ' ಸಿನಿಮಾದ 'ಹಮ್ ತುಮ್ ದೋನೋ ಜಬ್ ಮಿಲ್ ಜಾಯೆಂಗ್.... ತೊ... ಏಕ್ ನಯಾ ಇತಿಹಾಸ್ ಬನಾಯೆಂಗೆ....' ಹಾಡುತ್ತಿದ್ದಾರೆ. ಇತಿಹಾಸ ಬನಾಯೆಂಗೆ ಅಂದ್ರೆ ಇವರು ಕೊಪ್ಪಳ ಜಿಲ್ಲೆಯನ್ನು ತಿರುವಿ ಇಡಲ್ಲ.

ಕಳೆದ ಜುಲೈನಲ್ಲಿ ಪಾರ್ಟಿಯೊಳಗೆ ಏನೇ ತಿಪ್ಪರಲಾಗ ಹಾಕಿದರೂ ಸಂಗಣ್ಣ ಕರಡಿಗೆ ಹಾವು ಆಡಿಸಲು ಬಿಡಲಾರದ್ದೆಂದರೆ ಮಂತ್ರಿ ಇಕ್ಬಾಲ್ ಅನ್ಸಾರಿ. ಅದಕ್ಕೆ ಅನ್ಸಾರಿಯನ್ನು ಹಿಗ್ಗಾ-ಮುಗ್ಗಾ ಬೈದು, ಅನ್ಸಾರಿ ಒಬ್ಬ ಜಾತಿವಾದಿ ಎನ್ನುವ ಮಟ್ಟಕ್ಕೂ ಹೋಗಿ ಬರಬರನೆ ರಾಜೀನಾಮೆ ಕೆರೆದು ಒಗೆದುಬಿಟ್ಟ ಸಂಗಣ್ಣ. ಇದಕ್ಕೂ ಮುನ್ನ ಸಂಗಣ್ಣನಿಗೆ ಆದ ಮುಖಭಂಗ ಅಂದ್ರೆ ಗಂಗಾವತಿಗೆ ಬಂದಿದ್ದ ಕುಮಾರಸ್ವಾಮಿಯನ್ನು ಕೊಪ್ಪಳಕ್ಕೆ ಹೋಗದಂತೆ ಅನ್ಸಾರಿ ತಡೆದದ್ದು! ಇವರಿಬ್ಬರ ಜಗಳದಿಂದ ಜೆಡಿ(ಎಸ್) ಎರಡು ಭಾಗವಾಗಿ ಹೋಯಿತು. ಸಂಗಣ್ಣ ಬಿಟ್ಟಿದ್ದ ರಾಜೀನಾಮೆಯ ಅರಿವೆ ಹಾವು ಬೆಂಗಳೂರು ಮುಟ್ಟದಿದ್ದಾಗ ಅನ್ಸಾರಿ ಚಲ್ ಚಲ್ ಅಂದುಬಿಟ್ಟ.


ಇಷ್ಟಾದ ಮೇಲೆ ಸಂಗಣ್ಣನು ಅನ್ಸಾರಿಯ ರಾಜಕೀಯ ವಿರೋಧಿ ಶ್ರೀನಾಥನೊಂದಿಗೆ ಕಾಮನೂರು ತೋಟದಲ್ಲಿ ಮಾತೂ ಆಡಿದ್ದ. ಅದಕ್ಕೆ ಪ್ರತಿಯಾಗಿ ಕೊಪ್ಪಳದ ಶಾಸಕ ಹಿಟ್ನಾಳನನ್ನು ಕೆಡವುವ ಡೀಲ್‌ನ್ನು ಪಡಕೊಂಡಿದ್ದ. ಆದರೆ ಏನ್ ಮಾಡೋದು? ಸಂಗಣ್ಣನ ಕಾರ್ಯಕರ್ತರ ಪಡೆ ದಿನೇದಿನೇ ಕರಗತೊಡಗಿತು. ಮುಂದಿನ ಚುನಾವಣೆಯಲ್ಲಿ ಟಿಕೆಟ್‌ಗೆ ಅನ್ಸಾರಿ ಅಡ್ಡಗಾಲು ಹಾಕುವ ಸಂದೇಹ ಒಂದೆಡೆ, ಇದ್ದಬಿದ್ದ ಕಾರ್ಯಕರ್ತರೆಲ್ಲ ಕಾಂಗ್ರೆಸ್‌ಗೆ ಜಂಪ್ ಹೊಡೆದು, ಅಮರೇಶ ಹೊಸಮನಿ, ಈಶಪ್ಪ ಮಾದಿನೂರು ತರಹದವರು ಜಿಲ್ಲಾ ಪಂಚಾಯ್ತಿಗೆ ಗೆದ್ದು ಬಿಟ್ಟರು. ಶೇಖಪ್ಪ ಲಕ್ಷಾಣಿ ಜನತಾ ಪಾರ್ಟಿ ಪಾಲಾದರೆ, ಮಹೇಂದ್ರ ಚೋಪ್ರಾ, ಬಿಜಕಲ್ ಶಿವಪ್ಪ, ಸಿದ್ದಣ್ಣ ತಳವಗೇರಿ, ಕೆ.ಕೆ. ಮಹೇಂದ್ರ, ಅಂದಪ್ಪ ಬೆಣಕಲ್ ಸಂಗಣ್ಣನಿಂದ ದೂರ ಸರಿದರು. ಇದೆಲ್ಲವೂ 10 ವರ್ಷಕ್ಕೆ ನಾಲ್ಕು ಪಕ್ಷ ಬದಲಿಸಿರುವ ಸಂಗಣ್ಣನಿಗೆ ದಿಗಿಲು ಹುಟ್ಟಿಸಿದ್ದು ನಿಜ. ಈ ದಿಗಿಲಿನೊಂದಿಗೆ ಇನ್ನೊಂದು ಬುಗುಲು ಕರಡಿಗೆ ಹೊಕ್ಕಿದ್ದೇನೆಂದರೆ ಚಾಮುಂಡೇಶ್ವರಿ ಎಲೆಕ್ಷನ್ ನಂತರ ತನಗೆ ಗೇಟ್‌ಪಾಸ್ ಸಿಗಬಹುದು ಅಂತ. ಆದರೆ ಹಾಗೇನೂ ಆಗಲಿಲ್ಲ. ಸಂಗಣ್ಣನ ಮೇಲಿನ ಸಿಟ್ಟಿಗೆ ಕೆಲ ಅಭಿವೃದ್ಧಿ ಕಾರ್ಯಗಳು ಕೊಪ್ಪಳಕ್ಕೆ ಬಾರದಂತೆ ಅನ್ಸಾರಿ ಪಡೆದದ್ದೂ ನಿಜ. ಅದಕ್ಕೆ ತಾಜಾ ಉದಾಹರಣೆ ಗದಗ-ಹೊಸಪೇಟೆ ರಸ್ತೆ ಅಗಲೀಕರಣ.


ಸಂಗಣ್ಣ ಕರಡಿ

ಇಬ್ಬರ ಜಗಳದಲ್ಲಿ ಕೊಪ್ಪಳ ಅನಾಥ ಮಗುವಿನಂತೆ ನರಳತೊಡಗಿತು. ಇದೇ ಹೊತ್ತಿಗೆ ವಿಧಾನ ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡನೆಯಲ್ಲಿ ಸಂಗಣ್ಣ ಕರಡಿ ಏರಿಯಾ ಕೊಪ್ಪಳದ ಇರಕಲ್‌ಗಡ ಹೋಬಳಿ ಅನ್ಸಾರಿಯ ಗಂಗಾವತಿ ಕ್ಷೇತ್ರಕ್ಕೂ, ಅನ್ಸಾರಿ ಗೆಲುವಿಗೆ ಕಾರಣವಾಗಿದ್ದ ಹಿಟ್ನಾಳ ಹೋಬಳಿ ಕೊಪ್ಪಳ ಕ್ಷೇತ್ರಕ್ಕೆ ಸೇರಿಬಿಟ್ಟಿದೆ. ಹೀಗಾಗಿ ಅನ್ಸಾರಿ ಜುಟ್ಟು ಕರಡಿ ಕೈಲಿ, ಕರಡಿ ಬಾಲ ಅನ್ಸಾರಿ ಕೈಲಿ ಎಂಬಂತಾಗಿಬಿಟ್ಟಿತು. ಒಂದೊಂದು ಹೋಬಳಿಯೂ 15-20 ಸಾವಿರ ಮತದಾರರನ್ನು ಹೊಂದಿರುವುದರಿಂದ ಹೀಗೆ ಪರಸ್ಪರ ತಾವು ದ್ವೇಷ ಕಟ್ಟಿಕೊಂಡರೆ ಕೈಗೆ ಚಿಪ್ಪು ಗ್ಯಾರಂಟಿ ಎಂಬುದು ಗೊತ್ತಾಗಿದೆ. ಮುಂದಿನ ಚುನಾವಣೆಯಲ್ಲಿ ಇರಕಲ್‌ಗಡದ ಓಟುಗಳನ್ನು ಅನ್ಸಾರಿಗೆ, ಹಿಟ್ನಾಳ್ ಓಟುಗಳನ್ನು ಕರಡಿಗೆ ಹಾಕಿಸಬೇಕೆಂಬ ಒಪ್ಪಂದ ಆಗಿಹೋಗಿದೆ.

ಇದೇ ಸಂದರ್ಭದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಶ್ವಿನ್ ಜಾಂಗಡಾನಂತಹ ಅಲ್ಪಸಂಖ್ಯಾತನನ್ನು ಹಿಂದಕ್ಕೆ ತಳ್ಳಿ ಲಿಂಗಾಯತ ವರ್ಗದ ಗುರುಬಸವರಾಜ ಹೊಳಗುಂದಿಗೆ ಅಧ್ಯಕ್ಷನನ್ನಾಗಿ ಆದೇಶ ತಂದೇಬಿಟ್ಟ. ಕರಡಿ ಅನ್ಸಾರಿಗೂ ಒಂದಾಗಲೂ ಒಂದು ವೇದಿಕೆ ಬೇಕಿತ್ತು. ಹೊಳಗುಂದಿ ಅಧಿಕಾರ ಸ್ವೀಕಾರ ಸಂದರ್ಭದಲ್ಲಿ ಭಿನ್ನಾಭಿಪ್ರಾಯ ಇಲ್ಲ ಎಂಬ ಹಳೇ ಕ್ಯಾಸೆಟ್ ಹಾಕಿದರು ಇಬ್ಬರೂ. ಒಂದು ಹಂತದಲ್ಲಂತೂ ನಾಯಕರ ನಡುವಿನ ಜಗಳಕ್ಕೆ ಕಾರ್ಯಕರ್ತರು ತಲೆ ಹಾಕಬಾರದು ಅಂತ ಅನ್ಸಾರಿ ರೇಗಿದ್ದು ನೋಡಿ ಕಾರ್ಯಕರ್ತರು ಸ್ವಲ್ಪ ಹೆದರಿ ಬಿಟ್ಟರು. ಇಬ್ಬರೂ ಪರಸ್ಪರ ಅಭಿವೃದ್ಧಿಗೆ ಸಹಕಾರ ಕೊಡುತ್ತೇವೆ ಎಂದು ಹೇಳಿಕೊಂಡರು. ಕಾರ್ಯಕರ್ತರಿಗೆ ಗೊತ್ತಿಲ್ಲ ಇವರು ಯಾಕೆ ಒಂದಾದರು ಅಂತ. ಗಂಗಾವತಿಯಲ್ಲಿ ಅನ್ಸಾರಿಯನ್ನು ಕೆಡವಲು ಬಿಜೆಪಿ ರಹಸ್ಯ ತಂತ್ರ ಹೂಡುತ್ತಿದೆ. ಕರಡಿಯಿಂದ ಸಿಡಿದು ಹೋದವರು ಈಗ ಒಂದೊಂದು ಹೋಬಳಿಯಲ್ಲಿ ಬಲಿಷ್ಠರಾಗಿದ್ದಾರೆ. ಸದ್ಯಕ್ಕೆ ಇಬ್ಬರೂ ಒಂದಾಗಿರುವುದು ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ? ಮುಂಬರುವ ವಿಧಾನಸಭಾ ಚುನಾವಣೆಯೇ ಉತ್ತರ ಹೇಳಲಿದೆ.

–ವರದಿಗಾರ



ಪುಸ್ತಕ ವಿಮರ್ಶೆ

ಕಾದಂಬರಿಯೂ ಅಲ್ಲದ ಇತಿಹಾಸವೂ ಅಲ್ಲದ ಹೇಸರಗತ್ತೆ!

ಎಸ್.ಎಲ್. ಭೈರಪ್ಪನವರ ಕಾದಂಬರಿ 'ಆವರಣ' ಕನ್ನಡದಲ್ಲಿ ದಾಖಲೆ ನಿರ್ಮಿಸಿದೆ. ಲೇಖಕನೊಬ್ಬ ತನ್ನದಲ್ಲದ ಧರ್ಮದ ಕುರಿತು ಇಷ್ಟು ದ್ವೇಷ ಅಸಹನೆಗಳನ್ನು ಕಾರಿಕೊಂಡ ಇನ್ನೊಂದು ಉದಾಹರಣೆ ಕನ್ನಡದಲ್ಲಂತೂ ಇಲ್ಲ. ಭೈರಪ್ಪ ತನ್ನ ಕಾದಂಬರಿಯಲ್ಲಿ ಭಾರತದ 15 ಕೋಟಿ ಮುಸ್ಲಿಮರೂ ಸೇರಿದಂತೆ, ಇಡೀ ವಿಶ್ವದ ಮುಸ್ಲಿಮರನ್ನು ಸ್ವಭಾವತಃ ಕ್ರೂರಿಗಳು, ಅಸಹಿಷ್ಣುಗಳು, ಮೂರ್ತಿಭಂಜಕರು, ಅಷ್ಟು ಕಾಲದಷ್ಟೇ ವಿಕೃತ ಕಾಮಿಗಳೂ ಆಗಿರುವವರು ಎಂದು ಚಿತ್ರಿಸಿದ್ದಾರೆ. ಈ ಬಗೆಯ ಪರಮತ ಖಂಡನೆ ಕನ್ನಡ ಪರಂಪರೆಗೆ ಮತ್ತು ಭಾರತೀಯ ಸಂಸ್ಕೃತಿಗೆ ತಕ್ಕುದಾದದ್ದೇ ಎಂಬ ಸಂದೇಹ ಕಾದಂಬರಿ ಓದುತ್ತಿದ್ದಂತೆ ಮತ್ತೆ ಮತ್ತೆ ತಲೆದೋರುತ್ತದೆ.

ತನ್ನ ಕಾದಂಬರಿಯಲ್ಲಿ ಭೈರಪ್ಪ ಮುಸ್ಲಿಮರನ್ನು ಮಾತ್ರವಲ್ಲ, ಎಡಪಂಥೀಯರು, ಸೆಕ್ಯೂಲರ್‌ವಾದಿಗಳು ಮತ್ತು ಕೆಲವೆಡೆ ಕ್ರೈಸ್ತರನ್ನೂ ಸಹ ಕಟಕಟೆಯಲ್ಲಿ ನಿಲ್ಲಿಸಿ, ಅವರೆಲ್ಲರ ವಿರುದ್ಧ ಆರೋಪಗಳನ್ನು ಹೊರಿಸಿದ್ದಾರೆ. ಈ ಆರೋಪಗಳನ್ನು ಸಾಬೀತುಪಡಿಸಲು, ಅವರೇ ಏಕಪಕ್ಷೀಯವಾಗಿ ಆಯ್ದುಕೊಂಡ 'ಪುರಾವೆ'ಗಳನ್ನು ನುರಿತ ವಕೀಲನಂತೆ ಓದುಗರ ಮುಂದಿರಿಸಿದ್ದಾರೆ. ಕೋರ್ಟಿನ ವಿಚಾರಣೆ, ಸಾರ್ವಜನಿಕ ಚರ್ಚೆ ಅಥವಾ ಪತ್ರಿಕಾ ಕಾಲಮ್ಮುಗಳಲ್ಲಿ ಯಾರಾದರೂ ಇಂತಹ ಆರೋಪಗಳನ್ನು ಮಾಡಿದರೆ, ಎದುರಾಳಿಗಳು ಅದಕ್ಕೆ ತಮ್ಮ ಪ್ರತಿವಾದಗಳನ್ನು, ತಮ್ಮ ಪುರಾವೆಗಳ ಜೊತೆ ಮಂಡಿಸಬಹುದಾದ ಸಾಧ್ಯತೆ ಇದೆ. ಆದರೆ ಕಾದಂಬರಿಯೊಂದರಲ್ಲಿ ಈ ಬಗೆಯ ಅನುಸಂಧಾನ ಮತ್ತು ಸತ್ಯ ನಿಷ್ಕರ್ಷೆಗಳಿಗೆ ಅವಕಾಶವಿಲ್ಲ. ಭೈರಪ್ಪ ಕಾದಂಬರಿಯ ಸೋಗುಹಾಕಿಕೊಂಡಿರುವ ತನ್ನ 'ಅಪರಾಧಿಗಳ ವಿಚಾರಣೆ'ಯಲ್ಲಿ ಪ್ರತಿವಾದಗಳಿಗೆ ಆ ಅವಕಾಶವನ್ನು ಕಲ್ಪಿಸಿಲ್ಲ, ಅವರು, ಆರೋಪಗಳನ್ನು ತಾವೇ ಮಂಡಿಸಿ, ಸಾಕ್ಷಗಳನ್ನು ತಾವೇ ಒದಗಿಸಿ ಪ್ರತಿವಾದ ಮಂಡನೆ, ತನಿಖೆಗಳನ್ನು ಸಹ ತಾವೇ ನಡೆಸಿ, ಈ ದೇಶದ ಮುಸ್ಲಿಮರು, ಕ್ರೈಸ್ತರು, ಎಡಪಂಥೀಯರು ಮತ್ತು ಹಿಂದೂತ್ವವನ್ನು ವಿರೋಧಿಸುವ ಎಲ್ಲರೂ ಅಪರಾಧಿಗಳು ಎಂಬ ತೀರ್ಪನ್ನು ಸಹ ತಾವೇ ಕೊಟ್ಟಿದ್ದಾರೆ. ಇಡೀ ಕಾದಂಬರಿ, ಭೈರಪ್ಪನವರು ಮನಸಾರೆ ದ್ವೇಷಿಸುವ ವಿಚಾರಗಳ ವಿರುದ್ಧ ಹೊರಡಿಸಿದ ಒಂದು ಸುದೀರ್ಘ ಕರಪತ್ರದಂತಿದ್ದು, ಅದಕ್ಕೆ ಕಾದಂಬರಿಯ ಆಕೃತಿಕೊಡಲು, ಅವರು ಬಳಸಿರುವ ಹಾಸ್ಯಾಸ್ಪದ ತಂತ್ರ ಕೂಡ ಕನ್ನಡದ ಮಟ್ಟಿಗೆ ಒಂದು ದಾಖಲೆಯೇ ಸರಿ.

'ಆವರಣ'ದ ಕಥಾನಕ, ಸ್ವತಂತ್ರ ಭಾರತದ ವರ್ತಮಾನ ಮತ್ತು ಮುಸ್ಲಿಂ ಆಳ್ವಿಕೆಯ ಮಧ್ಯಯುಗದ ಭಾರತ - ಎರಡರಲ್ಲೂ ಸಂಭವಿಸುವಂತಹದ್ದು. ಅದರ ಹರಹು ಬೆಂಗಳೂರು, ಹಂಪಿ, ದೆಹಲಿ, ಕಾಶಿಗಳನ್ನು ಒಳಗೊಂಡ ಭಾರತ, ಯಾಕೆ ಇಡೀ ವಿಶ್ವವೇ ಎಂದರೂ ಸರಿಯೆ. ಮುಸ್ಲಿಮರು ಎಲ್ಲಕಾಲ, ಎಲ್ಲ ದೇಶಗಳಲ್ಲೂ ಸಮಾನವಾಗಿ ದುಷ್ಟರು; ಅವರ ದುಷ್ಟತನದ ಮೂಲ ಇಸ್ಲಾಂ ಧರ್ಮದಲ್ಲೇ ಇರುವುದರಿಂದ, ಅವರಲ್ಲಿ ಬಡವ-ಬಲ್ಲಿದ, ರಾಜ-ಪ್ರಜೆ, ದಣಿ-ಸೇವಕ, ಶೋಷಕ-ಶೋಷಿತ ಮುಂತಾದ ಪ್ರಭೇದಗಳೇ ಇಲ್ಲ ಎಂದು ಪ್ರತಿಪಾದಿಸುವುದಕ್ಕೆ ಭೈರಪ್ಪ ಬಳಸಿರುವ ತಂತ್ರ ಇದು! ಗತಕಾಲದ ಮುಸ್ಲಿಮರ ದೌರ್ಜನ್ಯವನ್ನು ಓದುಗರಿಗೆ ಮನವರಿಕೆ ಮಾಡಿಕೊಡಲು ಭೈರಪ್ಪ ಮಧ್ಯ ಯುಗದ ಮುಸ್ಲಿಮ್ ಅರಸರ ಆಕ್ರಮಣ, ಅತ್ಯಾಚಾರಗಳನ್ನು ನಿದರ್ಶನಗಳಾಗಿ ಬಳಸಿಕೊಳ್ಳುತ್ತಾರೆ. ಆದರೆ ಅದರಲ್ಲಿ ಹೊಸತೇನೂ ಇಲ್ಲ.

ಭಾರತದ ಚರಿತ್ರೆಯ ಬಗೆಗಿನ ಸಂಘಪರಿವಾರದ ನಿರೂಪಣೆಗಳನ್ನು ಭೈರಪ್ಪ ಇಲ್ಲಿ ನಿಷ್ಠೆಯಿಂದ ನಕಲು ಮಾಡಿದ್ದಾರೆ, ಮತ್ತು ಈ ನಿರೂಪಣೆಗಳ ಸತ್ಯಾಸತ್ಯತೆಯನ್ನು ಪ್ರಶ್ನಿಸುವವರನ್ನು ಮನಸ್ವೀ ಬೈದು, ತಮ್ಮ ಸಿಟ್ಟು ತೀರಿಸಿಕೊಂಡಿದ್ದಾರೆ. ಈ ಮುಸ್ಲಿಮ್ ಅರಸರ ಬಗ್ಗೆ 'ಆವರಣ' ಹೇಳುವ ಅಷ್ಟೂ ಮಾತುಗಳನ್ನು ಒಪ್ಪಿಕೊಂಡರೂ, ಅದು ಹೇಗೆ ಅವರು ಎಲ್ಲ ಕಾಲದ ಮತ್ತು ಇಡೀ ವಿಶ್ವದ ಮುಸ್ಲಿಮರನ್ನು ಪ್ರತಿನಿಧಿಸುವವರಾಗುತ್ತಾರೆ?

ಕಾದಂಬರಿಯ ಮುನ್ನುಡಿಯಲ್ಲಿ ಭೈರಪ್ಪ ಹೀಗೆ ಹೇಳುತ್ತಾರೆ, "ಹಿಂದಿನವರು ಮಾಡಿದ ತಪ್ಪುಗಳಿಗೆ ಇಂದಿನವರು ಜವಾಬ್ದಾರರಲ್ಲ; ಹಿಂದಿನವರೊಡನೆ ತಮ್ಮನ್ನು ತಾವು ಸಮೀಕರಿಸಿಕೊಂಡು, ತಾವು ಅವರ ವಾರಸುದಾರರೆಂಬ ರಾಗಕ್ಕೆ ಸಿಕ್ಕಿಕೊಂಡರೆ ಹಿಂದಿನವರ ತಪ್ಪಿನ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ." ಭಾರತದ ಸಮಕಾಲೀನ ಮುಸ್ಲಿಮ್ ಪ್ರಜೆಗಳು, ಹಿಂದೆ ಆಳಿದ ಮುಸ್ಲಿಮ್ ಅರಸರ ಜೊತೆ ತಮ್ಮನ್ನು ಸಮೀಕರಿಸಿಕೊಂಡಿದ್ದಾರೆ ಎನ್ನುವುದು ಭೈರಪ್ಪನವರ ಮಾತಿನ ಇಂಗಿತಾರ್ಥ. ಇಲ್ಲಿಯೂ ಮುಸ್ಲಿಮರ ಬಗ್ಗೆ ಭೈರಪ್ಪ ಹೊಸತೇನೂ ಹೇಳಿಲ್ಲ, 'ಬಾಬರ್‌ಕಿ ಔಲಾದ್' ಎಂಬ ಆರ್.ಎಸ್.ಎಸ್‌ನ ಅಶ್ಲೀಲ ಬೀದಿ ಕೂಗನ್ನೇ ಅವರು ತಮ್ಮ ಮಾತಿನಲ್ಲಿ ಧ್ವನಿಸಿದ್ದಾರೆ. ಭೈರಪ್ಪನವರ ಮಾತಿನ ಧಾಟಿ ಅಂತಿಮ ತೀರ್ಪು ನೀಡುವ ನ್ಯಾಯಾಧೀಶನದ್ದು. ಅವರು ಗತಕಾಲದ ಮುಸ್ಲಿಮ್ ಅರಸರ ತಪ್ಪುಗಳ ಜವಾಬ್ದಾರಿಯನ್ನು ಇಂದಿನ ಮುಸ್ಲಿಮರ ಮೇಲೆ ತಾವೇ ಏಕಪಕ್ಷೀಯವಾಗಿ ಹೊರಿಸಿದ್ದಾರೆ. ಮುಸ್ಲಿಮರು ಈ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ ಎಂಬ ಮಾತಿನ ಅರ್ಥವೇನು?

ಹಿಂದೂತ್ವವಾದದ ಗೂಂಡಾಪಡೆ ಅವರ ಮೇಲೆ ನಡೆಸುವ ಹಿಂಸಾಚಾರವನ್ನು ಮರುಮಾತಿಲ್ಲದೆ ಅನುಭವಿಸಬೇಕು ಎಂದಲ್ಲವೇ? ಜರ್ಮನಿಯಲ್ಲಿ ನಾಝಿಗಳು ಯಹೂದಿಗಳ ಬಗ್ಗೆ ಹೇಳಿದ್ದೂ ಇದೇ ಮಾತನ್ನೇ - "ಅವರು ನಮ್ಮೊಡನೆ ಬೆರೆಯುವುದಿಲ್ಲ; ಅವರು ಸದಾ ಪ್ರತ್ಯೇಕವಾಗಿರುತ್ತಾರೆ. ಅವರು ತಮ್ಮ ಹಿಂದಿನವರ ತಪ್ಪಿನ ಜವಾಬ್ದಾರಿ ಹೊರಬೇಕಾಗುತ್ತದೆ". ಹಿಟ್ಲರ್ ಮತ್ತೆ ಮತ್ತೆ ತನ್ನ ಭಾಷಣಗಳಲ್ಲಿ "The Jewish Problem" ಬಗ್ಗೆ ಕಿರುಚಾಡಿದ. ವಿಶ್ವಾದ್ಯಂತ ಹರಡಿಹೋಗಿದ್ದ ಕೋಟ್ಯಂತರ ಜನರ ಸಮುದಾಯ ಅವನ ಮಟ್ಟಿಗೆ ಒಂದು ಸಮಸ್ಯೆ! ಐದು ಮಿಲಿಯ ಯಹೂದಿಗಳ ನರಹತ್ಯೆ ಈ ಸಮಸ್ಯೆಗೆ ಹಿಟ್ಲರ್ ಕಂಡುಕೊಂಡ ಅಂತಿಮ ಪರಿಹಾರ- the final solution! ಗುಜರಾತ್ ನರಮೇಧ ಕುರಿತ ರಾಕೇಶ್ ಶರ್ಮರ ಖ್ಯಾತ ಸಾಕ್ಷ್ಯ ಚಿತ್ರದ ಹೆಸರು ಕೂಡ ಅದೇ- the final solution! ಆದರೆ ಗುಜರಾತ್ ಬಗ್ಗೆ ನರೇಂದ್ರ ಮೋದಿ ಮಾತ್ರವಲ್ಲ ವಾಜಪೇಯಿ ಕೂಡ ಹೇಳಿದ್ದು ಭೈರಪ್ಪ ಹೇಳಿದ ಮಾತನ್ನೇ - "ಗುಜರಾತ್‌ನ ಮುಸ್ಲಿಮರು, ತಮ್ಮವರು ಮಾಡಿದ ತಪ್ಪಿನ ಜವಾಬ್ದಾರಿ ಹೊರಬೇಕಾಗುತ್ತದೆ."

'ಆವರಣ'ದಲ್ಲಿ ಸಮಕಾಲೀನ ಮುಸ್ಲಿಮ್ ಪಾತ್ರಗಳೂ ಇವೆ. ನಿಖರವಾಗಿ ಅವುಗಳ ಸಂಖ್ಯೆ $2^1/_2$. ಪ್ರಗತಿಪರ ಸಾಕ್ಷ್ಯ ಚಿತ್ರನಿರ್ಮಾಪಕ - ಡೋಂಗಿ ಮನುಷ್ಯ ಎಂದು ಓದಿಕೊಳ್ಳಿ - ಅಮೀರ್ ಮತ್ತು ಅವನ ಮಗ ನಜೀರ ಶೇಕಡಾ ನೂರಕ್ಕೆ ನೂರು ಮುಸ್ಲಿಮ್ 'ರಕ್ತಗುಣ'ವುಳ್ಳ ಮುಸ್ಲಿಮರು. ಅಮೀರ್‌ನ ಪತ್ನಿ, ಅಂದರೆ ನಜೀರ್‌ನ ತಾಯಿ ರಜಿಯಾ, ಹಿಂದೂವಾಗಿ ಹುಟ್ಟಿ ಬೆಳೆದು, ಅಮೀರ್‌ನನ್ನು ಪ್ರೀತಿಸಿ ಮದುವೆಯಾಗಿ ಅವನ ಒತ್ತಾಯಕ್ಕೆ ಮಣಿದು ಇಸ್ಲಾಂಗೆ ಮತಾಂತರಗೊಂಡು, ಭೈರಪ್ಪನವರು ಕಾದಂಬರಿ ಬರೆಯುವ ಹೊತ್ತಿಗೆ ಮರಳಿ ಮಾತೃ ಧರ್ಮಕ್ಕೆ ಬಂದವಳು. ಹಾಗಾಗಿ ಸದ್ಯ, ರಜಿಯಾ ಉರ್ಫ್ ಲಕ್ಷ್ಮಿಯನ್ನು ಶೇಕಡಾ 50 ಮುಸ್ಲಿಮ್ 'ರಕ್ತಗುಣ'ವುಳ್ಳ ಪಾತ್ರ ಎಂದು ಭಾವಿಸಬಹುದು. (ರಕ್ತಗುಣ- ಭೈರಪ್ಪನವರದ್ದೇ ನುಡಿಗಟ್ಟು, ಅವರ ಪ್ರಕಾರ ಹಿಂದೂ ರಕ್ತಗುಣವಂತೂ ಇದೆ. ಹಾಗೆಂದ ಮೇಲೆ ಮುಸ್ಲಿಮ್ ರಕ್ತಗುಣವೂ ಇರಲೇಬೇಕು- ನೋಡಿ. 'ಆವರಣ' ಪುಟ17)

ಭೈರಪ್ಪ ಮುಸ್ಲಿಮರೊಬ್ಬರ ಮನೆಯಲ್ಲಿ ಐದು ದಿನ ವಾಸವಾಗಿದ್ದು ಅವರ ಆಚಾರ ವಿಚಾರಗಳನ್ನೆಲ್ಲಾ ತಿಳಿದುಕೊಂಡರಂತೆ. ಅದನ್ನು ಓದುಗರಿಗೆ ಸಾಬೀತುಪಡಿಸಲು, ಕಾದಂಬರಿಯಲ್ಲಿ ಒಂದೆಡೆ ಅವರು ನಮಾಜ್ ವಿಧಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಇನ್ನೊಂದೆಡೆ ಕಾದಂಬರಿಯ ನಾಯಕಿ ರಜಿಯಾ/ ಲಕ್ಷ್ಮಿಗೆ, ಅವಳ ಮಗ ನಜೀರ್ ನಮಾಜಿನ ಮಹತ್ವವನ್ನು ವಿವರಿಸುತ್ತಾನೆ. ನಜೀರ್ ತನ್ನ ತಾಯಿಯನ್ನು, ನೋಡದೆ ಎರಡು ವರ್ಷಗಳಾಗಿವೆ. ಆದರೂ ತನ್ನ ತಾಯಿಯೊಡನೆ ಅವನ ಮೊದಲ ಸಂಭಾಷಣೆ ನಮಾಜಿನ ಮಹತ್ವದ ಕುರಿತು! ವಾಸ್ತವ ಶೈಲಿಯಲ್ಲಿ ಹಲವು ಕಾದಂಬರಿಗಳನ್ನು ಬರೆದಿರುವ ಭೈರಪ್ಪನವರಿಗೂ ಈ ಅಸಂಬದ್ಧತೆಯ ಅರಿವು ಇದೆ. ನಜೀರ್ ಹೇಳುತ್ತಾನೆ, "ಅಮ್ಮಾಜಾನ್, ಅಷ್ಟು ದೂರದಿಂದ ಬಂದು ತಾಯಿಯ ಕೈಲಿ ಧಾರ್ಮಿಕ ವಿಷಯದ ವಾಗ್ವಾದ ಹೂಡುವುದು ಸಂತೋಷದ ವಿಷಯವಲ್ಲ" (ಪುಟ 139). ಆದರೆ ಈ ಪ್ರಸಂಗದಲ್ಲಿ ವಾಸ್ತವವಾಗಿ ರಜಿಯಾ/ ಲಕ್ಷ್ಮಿ ಮತ್ತು ದೂರದೇಶದಿಂದ ಆಗತಾನೆ ಬಂದ ಅವಳ ಮಗ ನಜೀರ್ ಪರಸ್ಪರ ಮಾತಾಡಿಕೊಳ್ಳುತ್ತಿಲ್ಲ, ಅವರಿಬ್ಬರೂ, ಓದುಗರನ್ನು ಉದ್ದೇಶಿಸಿ ಮಾತಾಡುತ್ತಿದ್ದಾರೆ!

"ಯಾವ ಕತೆಗಾರನೂ ಓದುಗರಿಗಾಗಿ ಬರೆಯುವುದಿಲ್ಲ; ಯಾವ ಸಂಗೀತಗಾರನೂ ಕೇಳುಗರಿಗಾಗಿ ಹಾಡುವುದಿಲ್ಲ; ಯಾವ ಚಿತ್ರಕಾರನೂ ನೋಡುಗರಿಗಾಗಿ ಚಿತ್ರ ಬಿಡಿಸುವುದಿಲ್ಲ" ಎಂದು ವಾಲ್ಟರ್ ಬೆಂಜಮಿನ್ ಹೇಳುತ್ತಾನೆ. ಓದುಗರ ತಲೆಯೊಳಗೆ ತಮ್ಮ ವಾದಗಳನ್ನು ತುರುಕುವುದೇ ಬರವಣಿಗೆಯ ಉದ್ದೇಶವಾಗಿರುವ ಮೂರನೆಯ ದರ್ಜೆಯ ಲೇಖಕರು, ಮತ ಪ್ರಚಾರಕರು ಮತ್ತು ದಸ್ತಾವೇಜು ಬರಹಗಾರರು ಮಾತ್ರ ಓದುಗರನ್ನು ಉದ್ದೇಶಿಸಿ ಬರೆಯುವುದು. 'ಆವರಣ'ದ ಎಲ್ಲ ಪಾತ್ರಗಳೂ ಓದುಗರತ್ತ ಮುಖಮಾಡಿ ಭಾಷಣಗಳಂತಹ ಸಂಭಾಷಣೆಗಳನ್ನು ಒಪ್ಪಿಸುವುದರಿಂದ, ಕಾದಂಬರಿಯ ಗದ್ಯ ಯಾಂತ್ರಿಕವಾಗಿದೆ. ಆದರೆ ಕಾದಂಬರಿಯ ಪುಟಪುಟಗಳಲ್ಲೂ ವ್ಯಕ್ತವಾಗಿರುವ ದ್ವೇಷ ಮತ್ತು ಸೇಡಿನ ಭಾವನೆಗಳ ಎದುರು, ಅದರ ತಾಂತ್ರಿಕ ದೋಷಗಳು ಗೌಣವಾಗಿಬಿಡುತ್ತವೆ!.

ನರಭಕ್ಷಕನ ಸುಳಿವು ಸಿಕ್ಕ ಕ್ಷಣ

ನಾನು ಸಾಗುತ್ತಿದ್ದ ರಸ್ತೆ ಬದಿಯಲ್ಲಿ ಒಂದೆರಡು ಕಡೆ ತಗ್ಗುಗಳಿದ್ದುದನ್ನು ಬಿಟ್ಟರೆ ಇಡೀ ಪ್ರದೇಶವನ್ನು ಒರಟಾದ ತುಂಡು ಹುಲ್ಲು ಆವರಿಸಿಕೊಂಡಿತ್ತು, ಈ ಹುಲ್ಲಿನ ನಡುವೆ ಹೆಜ್ಜೆ ಗುರುತುಗಳನ್ನು ಹುಡುಕಲು ಸಾಧ್ಯವಿರಲಿಲ್ಲ, ಉಳಿದ ತಗ್ಗಿನ ಪ್ರದೇಶಗಳಲ್ಲಿ ಇದರ ಸಾಧ್ಯತೆ ಇತ್ತು, ಈ ರಸ್ತೆಯ ಅಂಚಿನಿಂದ ಸ್ವಲ್ಪ ದೂರ ಕೆಳಕ್ಕೆ ಹೋದರೆ ರಸ್ತೆಯು ಏಣಿನಿಂದ ಹೊರಬರುವುದಕ್ಕೆ ಸಮಾನಾಂತರವಾಗಿ ಒಂದು ನಿಶ್ಚಲವಾದ ಹಸಿರು ನೀರಿನ ಹೊಂಡವಿತ್ತು, ಇದು ಹೆಚ್ಚಾಗಿ ಸಾರಂಗಗಳು ನೀರು ಕುಡಿಯಲು ಬಳಸಿದಂತಿತ್ತು, ಇಲ್ಲಿಂದ ಸ್ವಲ್ಪ ಮುಂದಕ್ಕೆ ಅಂದರೆ ಕೃಷಿ ಭೂಮಿಯನ್ನು ದಾಟಿ ರಸ್ತೆ ಏಣಿನತ್ತ ತಿರುಗುವಲ್ಲಿ ಅನೇಕ ಕೆರೆದ ಗುರುತುಗಳಿದ್ದವು. ಕೆಲವು ತೀರಾ ಹಳೆಯವು, ಕೆಲವು ಮೂರು ದಿನಗಳಷ್ಟು ಹೊಸವು. ಈ ಗುರುತುಗಳಿಂದ ಸುಮಾರು ಇನ್ನೂರು ಗಜಗಳಷ್ಟು ಮುಂದೆ ರಸ್ತೆಯ ಮೂರನೇ ಎರಡು ಭಾಗದ ಮೇಲೆ ಕೋಡುಗಲ್ಲೊಂದು ಚಾಚಿಕೊಂಡಿತ್ತು, ಇದರ ಹತ್ತು ಅಡಿ ಉದ್ದದ ಚಾಚಿನ ಕೆಳಗೆ ರಸ್ತೆ ಹಾದು ಹೋಗಿತ್ತು, ಈ ಬಂಡೆ ಮೇಲ್ಭಾಗ ಎರಡು ಗಜಗಳಷ್ಟು ವಿಶಾಲವಾಗಿತ್ತು, ಈ ಭಾಗವನ್ನು ನಾವು ಹಳ್ಳಿಯ ಕಡೆಯಿಂದ ಬರುವಾಗ ಮಾತ್ರ ನೋಡಬಹುದಿತ್ತು.


ಈ ಕೋಡುಗಲ್ಲಿನ ಏಣಿನ ಬಳಿ ನಾನು ಇನ್ನಷ್ಟು ಕೆರೆದ ಗುರುತುಗಳನ್ನು ನೋಡಿದೆ, ಆದರೆ ಹೆಜ್ಜೆ ಗುರುತುಗಳಿರಲಿಲ್ಲ, ಇಲ್ಲಿಂದ ಸ್ವಲ್ಪ ಮುಂದಕ್ಕೆ ಹೋದರೆ ರಸ್ತೆ ಹಿಮ್ಮುರಿಯಾಗಿ ತಿರುಗುತಿತ್ತು, ಈ ತಿರುವಿನ ಪಕ್ಕದಲ್ಲಿ ಹುಲಿಯ ಹೆಜ್ಜೆ ಗುರುತುಗಳು ಮೂಡಿದ್ದವು. ಇಲ್ಲಿ ಹುಲಿ ತಿರುವಿನ ನಡುಭಾಗವನ್ನು ಅಡ್ಡಕ್ಕೆ ಸರಳರೇಖೆಯಂತೆ ಹಾದುಹೋಗಿತ್ತು, ಅಲ್ಲಿಂದ ರಸ್ತೆಯ ಅಂಚಿನಲ್ಲಿದ್ದ ಕಾಲುವೆಯಂಥ ತಗ್ಗನ್ನು ಎಗರಿ ಮುಂದೆ ಸಾಗಿತ್ತು, ಅದು ಎಗರಿದ ತಗ್ಗಿನ ಆ ಬದಿಗಿದ್ದ ಮೆದು ಮಣ್ಣಿನಲ್ಲಿ ಅದರ ಪಾದ ಮುದ್ರಿಕೆಗಳು ಅಚ್ಚೆ ಹೊಡೆದಂತೆ ಮೂಡಿದ್ದವು. ಇವು ನಿನ್ನೆಯಷ್ಟೇ ಮೂಡಿದ್ದ ಗುರುತುಗಳಾಗಿದ್ದವು. ಇವು ಇದೊಂದು ದೊಡ್ಡಗಾತ್ರದ ತುಂಬು ವಯಸ್ಸಿನ ಗಂಡು ಹುಲಿ ಎಂಬುದನ್ನು ಖಚಿತವಾಗಿ ಹೇಳುತ್ತಿದ್ದವು.

ನರಭಕ್ಷಕನ ಕಾರ್ಯಕ್ಷೇತ್ರದಲ್ಲಿ ಹುಡುಕಾಟದಲ್ಲಿರುವ ಒಬ್ಬ ಶಿಕಾರಿದಾರನ ಕೆಲಸಗಳ ಪ್ರಗತಿ ತೀರಾ ನಿಧಾನವಾಗಿರುತ್ತದೆ. ಒಂದೊಂದು ಪೊದೆ ಮರ ಗಿಡ ತಗ್ಗು ಹಾಗೂ ಕಲ್ಲಿನ ಮರೆಗಳನ್ನೂ ಆತ ಜಾಗರೂಕತೆಯಿಂದ ಪರೀಕ್ಷಿಸುತ್ತಾ ಎಚ್ಚರಿಕೆಯಿಂದ ಮುಂದೆ ಸಾಗಬೇಕಾಗುತ್ತದೆ. ಇಲ್ಲಿ ಸಾವು ಎತ್ತಲಿಂದಾದರೂ ಹಠಾತ್ತಾಗಿ ಬಂದೆರಗಬಹುದು. ಒಂದು ಕ್ಷಣದ ಅಜಾಗರೂಕತೆ ಕ್ಷಣಾರ್ಧದಲ್ಲಿ ಎಲ್ಲವನ್ನೂ ಮುಕ್ತಾಯಗೊಳಿಸಿಬಿಡಬಹುದು. ಇದರೊಂದಿಗೆ ಗಾಳಿಯ ದಿಕ್ಕನ್ನು ಅನುಸರಿಸುವುದು ಅತೀ ಮುಖ್ಯ ಹುಲಿಯ ಕಡೆಯಿಂದ ನಮ್ಮತ್ತ ಗಾಳಿ ಬೀಸುತ್ತಿದ್ದರೆ ಸರಿ, ನಮ್ಮ ಕಡೆಯಿಂದ ಹುಲಿಯತ್ತ ಗಾಳಿ ಬೀಸುತ್ತಿದ್ದರೆ ಅದು ಪ್ರಾಣಾಂತಿಕ, ಹುಲಿಯ ಮೂಗು ವಾಸನೆ ಹಿಡಿಯುವಲ್ಲಿ ಎಷ್ಟು ದುರ್ಬಲವಾಗಿದ್ದರೂ ಸಹ. ಹೀಗಾಗಿ ಮೈ ಎಲ್ಲಾ ಕಣ್ಣಾಗಿದ್ದರೂ ಶಿಕಾರಿದಾರ ಕ್ಷೇಮವಾಗಿ ಹಿಂತಿರುಗುವುದು ಕಷ್ಟ.

ಇವೆಲ್ಲಕ್ಕಿಂತ ಮುಖ್ಯವಾಗಿ ಹಿಮಾಲಯದ ಈ 4000-5000 ಅಡಿಗಳ ಎತ್ತರದಲ್ಲಿ ಅದರಲ್ಲೂ ಬೇಸಿಗೆ ಕಾಲದ ಮೇ ತಿಂಗಳಿನಲ್ಲಿ ಇನ್ನೂ ಎಚ್ಚರಿಕೆ ವಹಿಸಬೇಕಾಗುತ್ತವೆ. ಈ ಕಾಲದಲ್ಲಿ ತಮ್ಮ ಅನುಪಮ ಸೌಂದರ್ಯದೊಂದಿಗೆ ಗರಿಷ್ಠ ಗಾತ್ರದಲ್ಲಿ ತೂಗಾಡುವ ಆರ್ಕಿಡ್‌ಗಳು ನಿಮ್ಮನ್ನು ಪರವಶರನ್ನಾಗಿ ಮಾಡಿಬಿಡುತ್ತವೆ. ಅವುಗಳ ದೈವೀಕ ಚೆಲುವು-ವೈವಿಧ್ಯಗಳು ಚಿತ್ತಾಪಹಾರಿಯಾಗಿರುತ್ತವೆ. ಎಂಥವನೂ ಅವುಗಳ ಸೆಳೆತದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ, ಇಲ್ಲಿ ಶ್ವೇತವರ್ಣದ ಪಾತರಗಿತ್ತಿ ಆರ್ಕಿಡ್‌ಗಳಂತೂ ಪ್ರತೀ ಎರಡನೇ ಮರಕ್ಕೆ ಮೂರು ನಾಲ್ಕರಂತೆ ತೂಗಿಬಿದ್ದಿದ್ದವು. ಅತ್ತ ಹುಲಿ-ಇತ್ತ ಆರ್ಕಿಡ್‌ಗಳು ಯಾವುದನ್ನೂ ಕಡೆಗಣಿಸುವಂತಿಲ್ಲ.

ಇದರೊಂದಿಗೆ ಇಲ್ಲಿ ನನ್ನದೇ ಆದ ಇನ್ನೊಂದು ಆಕರ್ಷಣೆ ನನಗೆ ಎರವಾಗುತ್ತಿತ್ತು, ಪರ್ವತದ ಅಂಬರ ಗುಬ್ಬಿಗಳ ಪಕ್ಷಿ ಸಮೂಹ ನನ್ನನ್ನು ದಿಕ್ಕು ತಪ್ಪಿಸುವ ಇನ್ನೊಂದು ಬಲವಾದ ಆಕರ್ಷಣೆಯಾಗಿತ್ತು, ಇವುಗಳ ಬಗ್ಗೆ ಬಹಳ ಹಿಂದೆ ನಾನು ಬಾಂಬೇ ನ್ಯಾಚುರಲ್ ಹಿಸ್ಟರಿ ಸೊಸೈಟಿಯಲ್ಲಿ ಕೇಳಿದ್ದೆ. ಆನಂತರ ಅವಕ್ಕೆ ಈ ಹೆಸರು ಬಂದಿತು. ಇವುಗಳ ಹೊರಮೈ ಸಮವಾಗಿ ಹರಡಿದಂಥ ಬೂದುಬಣ್ಣವಿರುತ್ತದೆ. ಎದೆಯ ಬಳಿ ತೆಳು ಕಿತ್ತಳೆ ಬಣ್ಣದ ಲೇಪವಿರುತ್ತದೆ. ಗಾತ್ರದಲ್ಲಿ ಕೇಸರಿ ಮೈನಾಹಕ್ಕಿಗಿಂತ ಸ್ವಲ್ಪ ಚಿಕ್ಕದಾಗಿರುತ್ತದೆ. ಈ ಹಕ್ಕಿಗಳ ಹಲವು ಕುಟುಂಬಗಳು ಎತ್ತರದ ಮರವೊಂದರ ಒಣ ಕೊಂಬೆಯ ಮೇಲೆ ಪ್ರಾರ್ಥನೆಗೆ ಕುಂತಂತೆ ಸಾಲಾಗಿ ಕುಳಿತಿದ್ದವು. ಕೆಲವು ಮರಿಗಳು ತರಲೆ ಮಾಡುತ್ತಿದ್ದರೆ, ದೊಡ್ಡವು ಗಾಳಿಯಲ್ಲಿ ತೇಲುತ್ತಾ ಕ್ರಿಮಿಕೀಟಗಳನ್ನು ಬೆನ್ನಟ್ಟಿ ಹಿಡಿಯುತ್ತಿದ್ದವು. ಇವುಗಳ ಹಾರುವ ವೇಗ ರೋಮಾಂಚಕವಾದದ್ದು. ನನ್ನ ಮಟ್ಟಿಗಂತೂ ಈ ಉತ್ತರ ಭಾರತದಲ್ಲೇ ಇವುಗಳ ಪುಚ್ಛಕ್ಕೆ ಸಾಟಿಯಾದ ಇನ್ನೊಂದಿಲ್ಲ, ನಮ್ಮ ಕಡೆಗೆ ವಲಸೆ ಬರುವ ಗ್ರೇಟ್ ಟಿಬೆಟನ್ ಸ್ವಾಲೋ ಹಕ್ಕಿಯೂ ಸೇರಿದಂತೆ. ಈ ಅಂಬರದ ಹಕ್ಕಿಗಳ ಇನ್ನೊಂದು ವಿಶೇಷವೆಂದರೆ ಇವುಗಳ ದೃಷ್ಟಿ ಸಾಮರ್ಥ್ಯ ಹಾಗೂ ಅಪರೂಪಕ್ಕೆ ನೂರಾರು ಗಜ ದೂರದವರೆಗೂ ಅಸಂಖ್ಯ ಹಕ್ಕಿಗಳು ನಿಖರವಾದ ಸರಳರೇಖೆಯಲ್ಲಿ ಅಸಾಧ್ಯ ವೇಗದಲ್ಲಿ ಹಾರುವುದು ಮತ್ತು ಹಾಗೆ ಹಾರುವಾಗ ಕ್ರಿಮಿಕೀಟಗಳನ್ನು ಶಿಕಾರಿ ಮಾಡುವುದು ನನಗಂತೂ ಸೋಜಿಗದ ಸಂಗತಿ. ಅವು ಹಾರುತ್ತಿರುವ ವೇಗದಲ್ಲಿ ಮನುಷ್ಯ ಮಾತ್ರರಿಗೆ ಆ ಕ್ರಿಮಿಕೀಟಗಳು ಕಾಣುವುದು ಸಾಧ್ಯವೇ ಇಲ್ಲ.

ಈ ಜೀವಲೋಕದ ವಿಸ್ಮಯಗಳನ್ನು ಸವಿಯುತ್ತಾ ಸಾಗುತ್ತಿದ್ದ ನಾನು ಅದೇ ಹೊತ್ತಿನಲ್ಲಿ ಕಾಡಿನ ಜನಪದರ ಸದ್ದುಗಳಿಗೆ ಕಿವಿಗೊಟ್ಟು ನಡೆದಿದ್ದೆ. ಆ ಹೊತ್ತಿನಲ್ಲಿ ಕಣಿವೆಯ




ಆವರಣ'ದ ಬಹು ಮುಖ್ಯಪಾತ್ರವಾಗಿರುವ ರಜಿಯಾ/ ಕ್ಷ್ಮಿಯೇ ಕಾದಂಬರಿಯ ಸಾಕ್ಷೀಪ್ರಜ್ಞೆ; ಮತ್ತು ಲೇಖಕರ ಮುಖವಾಣಿ. ಅವಳ ಅಪ್ಪ ತೀರಿಕೊಂಡ ಮೇಲೆ, ರಜಿಯಾ ವರ ಸಂಗ್ರಹದಲ್ಲಿದ್ದ ಚರಿತ್ರೆ ಗ್ರಂಥಗಳನ್ನು ಓದಿ, ಮುಸ್ಲಿಮ್ ರಸರ ಕರಾಳತೆಯನ್ನು ಮನಗಂಡು ಮಾತೃ ಧರ್ಮಕ್ಕೆ ಮರಳುವ ಸಂಕಲ್ಪ ಮಾಡಿದ್ದಾಳೆ. ತನ್ನ ಹೊಸ ಓದು ಮತ್ತು ಜೀವನಾನುಭವಗಳ ಆಧಾರದಲ್ಲಿ ಆಕೆ ಮುಸ್ಲಿಮ್ ರಸರ ಕ್ರೌರ್ಯದ ಬಗ್ಗೆ ಒಂದು ಕಾಲ್ಪನಿಕ ಐತಿಹಾಸಿಕ ಕಾದಂಬರಿಯನ್ನೂ ಬರೆದಿದ್ದು, ಅದರ ಪೂರ್ಣಪಾಠವನ್ನು ಭೈರಪ್ಪ ತಮ್ಮ ಕಾದಂಬರಿಯೊಳಗೆ ಅಳವಡಿಸಿಕೊಂಡಿದ್ದಾರೆ. ಈ 'ಕಾದಂಬರಿಯೊಳಗಿನ ಕಾದಂಬರಿ' ಯಲ್ಲಿ ಭೈರಪ್ಪನವರ ಪೂರ್ವಾಗ್ರಹಗಳೆಲ್ಲ ರಜಿಯಾ/ಲಕ್ಷ್ಮಿಯ ಪ್ರಜ್ಞೆಯಲ್ಲಿ ಒತ್ತೊಮ್ಮೆ ಸೋಸಿ ಹೊರಬರುತ್ತದೆ- ದಿಢೀರ್ ಚರಿತ್ರೆಯಾಗಿ- 'ಇಗೋ ಈಗ' ಎಂಬ ವಾಸ್ತವವಾದಿ ಶೈಲಿಯಲ್ಲಿ.

ತನ್ನ ಈ ಕಾಲ್ಪನಿಕ ಐತಿಹಾಸಿಕ ಕಾದಂಬರಿಗೆ ಅವಶ್ಯವಾದ ಮಾಹಿತಿ ಸಂಗ್ರಹಿಸಲು ರಜಿಯಾ/ ಲಕ್ಷ್ಮಿ ಕಾಶಿಗೆ ಪ್ರಯಾಣ ಬೆಳೆಸುತ್ತಾಳೆ. ಆಕೆಯ ಮನೋಲಹರಿಯನ್ನು ಭೈರಪ್ಪ ಬಣ್ಣಿಸುವುದು ಹೀಗೆ, "ಈಗ ಬೆಂಗಳೂರಿನಿಂದ ಕಾಶಿಯವರೆಗೆ ಒಬ್ಬಳೇ ರೈಲಿನಲ್ಲಿ ಪ್ರಯಾಣ ಮಾಡುವುದೇ ಹೆಚ್ಚು ಫಲಪ್ರದವಾಗುತ್ತಿತ್ತು. ಯಾವ ನಿಲ್ದಾಣ ಬಂದರೂ ಅದು ಯಾವ ಪ್ರದೇಶದ್ದು, ಕಳೆದ ಸಾವಿರ ವರ್ಷದಿಂದ ಅದು ಯಾವ ರಾಜನಿಂದ ಬೇರೆ ಯಾವ ರಾಜನ ಅಥವಾ ಸುಲ್ತಾನನ ವಶಕ್ಕೆ ಹೋಯಿತು, ಅದರ ಸುತ್ತಮುತ್ತ ಯಾವ ಮಂದಿರ ಸ್ತೂಪ ವಿಹಾರ ಬಸದಿಗಳಿದ್ದವು ಯಾವ ನವಾಬ ಸುಲ್ತಾನ ಬಾದಶಹರು ಅವನ್ನು ಧ್ವಂಸ ಮಾಡಿದರು ಅಥವಾ ಮಾಡದೇ ಉಳಿಸಿದರು ಎಂಬುದನ್ನು ನೆನಪು ಮಾಡಿಕೊಳ್ಳುತ್ತಾ ಇಡೀ ಉಪಖಂಡದ ಇತಿಹಾಸವನ್ನು ಪುನರಾವಲೋಕಿಸುತ್ತಾ ಚಲಿಸಬಹುದು" (ಪುಟ179).

ಕಾದಂಬರಿಯಲ್ಲಿ ಆತ್ಮಾವಲೋಕನ, ಆತ್ಮ ವಿಮರ್ಶೆಗೆ ತನ್ನನ್ನು ತಾನೇ ಒಳಪಡಿಸಿಕೊಳ್ಳುವ ಗುಣವಿರುವುದು ಲಕ್ಷ್ಮಿ / ರಜಿಯಾ ಒಬ್ಬಳಿಗೆ ಮಾತ್ರ. ಅವಳ ಅಪ್ಪನಿಗೂ ಆ ಗುಣವಿತ್ತು. ಕಾದಂಬರಿಯ ಯಾವ ಮುಸ್ಲಿಮ್ ಪಾತ್ರಕ್ಕೂ ಆ ಗುಣ ಕಿಂಚಿತ್ತೂ ಇಲ್ಲ. ಮುಸ್ಲಿಮರು ಮಾತ್ರವಲ್ಲ, ಕಾದಂಬರಿಯ 'ಪ್ರಗತಿಶೀಲ'ರಿಗೂ ಆ ಗುಣವಿಲ್ಲ. ತನ್ನ ತಂದೆಯ ಸಾವಿನ ನಂತರ ರಜಿಯಾ/ ಲಕ್ಷ್ಮಿ ಅನುಭವಿಸುವ ಒಳನೋವು ನೈಜವಾದದ್ದು! ಆದರೆ ಭೈರಪ್ಪ ಪ್ರಗತಿಶೀಲರನ್ನು ಲೇವಡಿ ಮಾಡಲೆಂದೇ ಸೃಷ್ಟಿಸಿರುವ ಶಾಸ್ತ್ರಿಗೆ ತನ್ನ ತಾಯಿ ತೀರಿಕೊಂಡಾಗ ಆಗುವ ಧರ್ಮಸಂಕಟಗಳೆಲ್ಲಾ ಹಾಸ್ಯಾಸ್ಪದ. ಯಾಕೆಂದರೆ ಅವನು ಹಿಂದೂವಾಗಿ ಹುಟ್ಟಿದರೂ ಈಗ ಪ್ರಗತಿಶೀಲ; ಸಾಲದ್ದಕ್ಕೆ ಕ್ರೈಸ್ತಳೊಬ್ಬಳನ್ನು - ಅದೂ ವಿದೇಶೀಯಳನ್ನು - ಮದುವೆಯಾದವನು. ಆದರೆ ರಜಿಯಾಳಾದರೋ ಮಾತೃ ಧರ್ಮಕ್ಕೆ ಮರಳಿ ಹಿಂದೂವಾದವಳು; ಮತ್ತು ಹಿಂದುಗಳು ಜಗತ್ತಿನ ಎಲ್ಲ ಸದ್ಗುಣಗಳ ಏಕೈಕ ವಾರಸುದಾರರು. ಆದರೆ ಈ ಸದ್ಗುಣಗಳ ಗಣಿ ಲಕ್ಷ್ಮಿ ಅಭ್ಯಾಸ ಮಾಡುವ ಚರಿತ್ರೆಯ ಪುಸ್ತಕಗಳಲ್ಲಿ ಹೆಚ್ಚಿನವು ಸಂಘ ಪರಿವಾರದ ಸಿದ್ಧಾಂತಗಳನ್ನು ಎತ್ತಿ ಹಿಡಿಯುವಂತಹವು! ಹಾಗಾಗಿ ಅವಳಿಗೆ ಇಡೀ ಉಪಖಂಡದ ಕಳೆದ 700 ವರ್ಷಗಳ ಚರಿತ್ರೆ, ರಾಜರು, ಸುಲ್ತಾನರು, ನವಾಬರು ಮತ್ತು ಬಾದಶಹರ ಆಳ್ವಿಕೆ, ಆಕ್ರಮಣ, ಅತ್ಯಾಚಾರಗಳಷ್ಟೇ ಆಗಿದೆ.

ಇವರ ಆಳ್ವಿಕೆಯಲ್ಲೂ, ಭಾರತದ ವಿಭಿನ್ನ ಜಾತಿ ಪಂಗಡಗಳ ಜನಸಮುದಾಯ, ತನ್ನ ನಂಬಿಕೆಗಳನ್ನು, ಬದುಕಿನ ಸ್ವಾಯತ್ತತೆಯನ್ನು ಉಳಿಸಿಕೊಂಡಿತ್ತು. ಆದರೆ ಭೈರಪ್ಪನವರಿಗೆ ಭಾರತೀಯ ಸಂಸ್ಕೃತಿಯ ಈ ಅಂತಃಸ್ಸತ್ವದ ಬಗ್ಗೆಯೇ ಅಪನಂಬಿಕೆ. ಹಾಗಾಗಿ ಗತಕಾಲದ ಮುಸ್ಲಿಮ್ ಅರಸರು ಮಾಡಿರುವ ಅಪರಾಧಗಳ ಜೊತೆ, ಮಾಡದೇ ಇರುವ ಅಪರಾಧಗಳನ್ನು ಅವರಿಗೆ ಭೈರಪ್ಪ ಆರೋಪಿಸಿ ಹಲ್ಲು ಕಡಿಯುತ್ತಿದ್ದಾರೆ. ತಮ್ಮ ಸಿಟ್ಟಿನ ಭರದಲ್ಲಿ ಅವರಿಗೆ ದಕ್ಷಿಣ ಭಾರತದ ಮುಸ್ಲಿಮ್ ಅರಸರ ವಿರುದ್ಧ ಮೊಘಲರು ದಂಡೆತ್ತಿ ಬಂದುದಾಗಲೀ, ವಿಜಯ ನಗರದದ ಹಿಂದೂ ಸಾಮ್ರಾಜ್ಯದ ವಿರುದ್ಧ ಅದರ ಹಿಂದೂ ಸಾಮಂತ ರಾಜರೇ ತಿರುಗಿ ಬಿದ್ದುದಾಗಲೀ, ಮೈಸೂರು ಒಡೆಯರು, ಗ್ವಾಲಿಯರ್‌ನ ಸಿಂಧ್ಯಗಳು ಮತ್ತು ಇನ್ನೂ ಹಲವು ಹಿಂದೂ ಅರಸೊತ್ತಿಗೆಗಳು ಬ್ರಿಟಿಷ್ ವಸಾಹತುಶಾಹಿಯೊಡನೆ ಶಾಮೀಲಾಗಿ, ಟಿಪ್ಪು ಮತ್ತು ಝಾನ್ಸಿ ಲಕ್ಷ್ಮೀಬಾಯಿಯಂತಹವರ ವಿರುದ್ಧ ಒಳಸಂಚಿನಲ್ಲಿ ಭಾಗಿಯಾದದ್ದಾಗಲೀ ಕಾಣಿಸುವುದೇ ಇಲ್ಲ.



ಭೈರಪ್ಪ ಹಿಂದೂಗಳ ಅತ್ಯಂತ ಪುರಾತನ ಪವಿತ್ರ ಕ್ಷೇತ್ರವಾಗಿರುವ ಕಾಶಿಯನ್ನಾದರೂ ಸರಿಯಾಗಿ ನೋಡಿದ್ದಾರೆಯೇ? ಕಾದಂಬರಿಯಲ್ಲಿ ಅವರ ಧೋರಣೆಗಳನ್ನು ಪ್ರತಿನಿಧಿಸುವ ರಜಿಯಾ/ ಲಕ್ಷ್ಮಿ ಕಾಶಿಗೆ ಮೊದಲ ಬಾರಿ ಬರುತ್ತಿದ್ದಾಳೆ. ಕಾಶಿ ಪ್ರವೇಶಿಸುತ್ತಿದ್ದಂತೆ ಅವಳ ಗಮನ ಸೆಳೆಯುವುದು ಗ್ಯಾನ ವಾಪಿ ಮಸೀದಿ- "ಮೂಲ ವಿಶ್ವನಾಥ ಮಂದಿರವನ್ನು ಔರಂಗಜೇಬ್ ಒಡೆಸಿ, ಅವೇ ಗೋಡೆ ಕಂಬ ತೊಲೆ ಬೋದಿಗೆಗಳಿಗೆ ಗುಂಬಜ್ ಹಾಕಿ ಕಟ್ಟಿಸಿದ್ದು" (ಪುಟ 182). ರಜಿಯಾ/ ಲಕ್ಷ್ಮಿ ಕಾಶಿಯಲ್ಲಿ ಏನನ್ನು ನೋಡಲೆಂದು ಬಂದಿದ್ದಳೋ, ಅಷ್ಟನ್ನು ಮಾತ್ರ ನೋಡುತ್ತಾಳೆ. ಸಮಕಾಲೀನ ಕಾಶಿಯ ವೈವಿಧ್ಯಮಯವೂ, ಚೈತನ್ಯಭರಿತವೂ ಆದ ಜನಜೀವನ ಅವಳ ಕಣ್ಣೋಟದಿಂದ ಪೂರ್ತಿ ಹೊರಗೆ ಉಳಿದುಬಿಡುತ್ತದೆ.

ಭೈರಪ್ಪನವರ ಚಿತ್ರಣದಲ್ಲಿ ಕಾಶಿ ತನ್ನ ಜೀವಂತಿಕೆಯನ್ನು ಕಳೆದುಕೊಂಡು ಬರೀ ಅವಶೇಷಗಳ ನಗರವಾಗುತ್ತದೆ. ಕುಬ್ಜವಾಗುತ್ತದೆ. 'ಆವರಣ' ದಲ್ಲಿ ಭೈರಪ್ಪ ಚಿತ್ರಿಸುವ ಕಾಶಿಯನ್ನು 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಎಂಬ ತಮ್ಮ ಆತ್ಮಚರಿತ್ರೆಯಲ್ಲಿ ಬಿ.ವಿ. ಕಾರಂತರು ಚಿತ್ರಿಸುವ ಕಾಶಿಯ ಜೊತೆ ಹೋಲಿಸಿದರೆ ಭೈರಪ್ಪ ಮುಸ್ಲಿಮರ ಕುರಿತ ತನ್ನ ದ್ವೇಷದಲ್ಲಿ ಕಾಶಿ ಮಾತ್ರವಲ್ಲ, ಆಧುನಿಕ ಭಾರತೀಯ ಸಂಸ್ಕೃತಿಯ ಎಷ್ಟು ಸಂಗತಿಗಳಿಗೆ ಕುರುಡರಾಗಿದ್ದಾರೆ ಎಂದು ಮನವರಿಕೆಯಾಗುತ್ತದೆ.

ಗ್ಯಾನ್ ವಾಪಿ ಮಸೀದಿ ಸಮಕಾಲೀನ ಕಾಶಿಯ ಒಂದು ವಾಸ್ತವ ಎಂಬುದು ನಿಜ. ಟೂರಿಸ್ಟರಿಗೆ ಕಾಶಿಯಲ್ಲಿ ಮೊದಲು ಕಣ್ಣಿಗೆ ಬೀಳುವುದು ದೇವಾಲಯದ ತಳಪಾಯದ ಮೇಲೆ ಕಟ್ಟಿರುವ ಆ ಮಸೀದಿ ಎಂಬುದು ನಿಜವೇ. ಆದರೆ ಅದೊಂದೇ ಕಾಶಿಯ ವಾಸ್ತವವಲ್ಲ. ಈಗಲೂ ಕಾಶಿಯಲ್ಲಿ ಹಿಂದೂಗಳನ್ನು ಬಿಟ್ಟರೆ ಅತಿ ದೊಡ್ಡ ಸಮುದಾಯ ಮುಸ್ಲಿಮರದ್ದೇ. ಈ ನಗರದ ಬದುಕಿನಲ್ಲಿ ಅವರು ಹಾಸುಹೊಕ್ಕಾಗಿ ಬೆರೆತಿದ್ದಾರೆ. ಕಾಶಿಯ ನೇಯ್ಗೆ, ಲೋಹದ ಕೆಲಸ ಮುಂತಾದ ಕಸುಬುಗಳ ದುಡಿಮೆಗಾರರಲ್ಲಿ ಹೆಚ್ಚಿನವರು ಮುಸ್ಲಿಮರು. ಗ್ಯಾನ್ ವಾಪಿ ಮಸೀದಿಯನ್ನು ಹಿಂದೂತ್ವವಾದಿಗಳು ವಿವಾದ ವಸ್ತುವಾಗಿ ಮಾಡಿಕೊಂಡಿದ್ದರೂ ಕಾಶಿಯ ಹಿಂದೂಗಳೇನು ಅಲ್ಲಿನ ಮುಸ್ಲಿಮರ ಜೊತೆ ಇದುವರೆಗೆ ಜಗಳಕ್ಕೆ ನಿಂತಿಲ್ಲ. ತಮ್ಮ ಆತ್ಮಚರಿತ್ರೆಯಲ್ಲಿ ಬಿ.ವಿ. ಕಾರಂತ ಹೇಳುತ್ತಾರೆ,"ಯಾವ ಧರ್ಮದ, ವರ್ಗದ, ಉಪವರ್ಗದ ಮಠಗಳೆಲ್ಲಾ ಕಚ್ಚಾಡದೆ ಜೊತೆಗೇ ಲಾಗಾಯ್ತಿನಿಂದಲೂ ಬದುಕಿಕೊಂಡು ಬಂದಂಥ ಊರು-ಕಾಶಿ. ಕೋಮು ಜಗಳಗಳು ಏನೇ ಇದ್ದರೂ ಅದೆಲ್ಲ ಈಗೀಗ ಭಜರಂಗದಳ ಮತ್ತು ವಿಹಿಂಪದಿಂದಲೇ ಅಲ್ಲಿನ ವಾತಾವರಣ ಹದಗೆಡುತ್ತಿದೆಯೇ ಹೊರತು ನಿತ್ಯಕ್ಕೆ ಅಂತಹ ಯಾವುದೂ ಇಲ್ಲದ ಸಹಜ ಅಸ್ತಿತ್ವ ಸಾಧಿಸಿದ ನಗರವದು. ಎಲ್ಲೋ ಸಣ್ಣ ಪುಟ್ಟ ಜಗಳಗಳಾಗಿರಬಹುದು ಅಷ್ಟೆ........" (ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ- ನಿರೂಪಣೆ ಬಿ.ವಿ. ಕಾರಂತ. ಕೃತಿರೂಪ-ವೈದೇಹಿ, ಪ್ರಿಸಂ ಬುಕ್ಸ್, ಬೆಂಗಳೂರು, 2003. ಪುಟ 202. ಒತ್ತು ನನ್ನದು.)

'ಆವರಣ'ದಲ್ಲಿ ಭೈರಪ್ಪ ಮುಸ್ಲಿಮ್ ಆಳ್ವಿಕೆ ಮತ್ತು ಮುಸ್ಲಿಮರ ಸ್ವಭಾವ (ಅಂತಹದ್ದು ಒಂದಿದ್ದರೆ)ದ ಕುರಿತು ನೀಡುವ ವಿವರಣೆಗಳ ಮೂಲ, ಒಂದೋ ಹಿಂದುತ್ವದ ಸಿದ್ಧಾಂತಕ್ಕೆ ಸರಿಹೊಂದುವಂತೆ ಬರೆದಿರುವ ಚರಿತ್ರೆಕಾರರ ನಿರೂಪಣೆಗಳು ಅಥವಾ ವಸಾಹತುಶಾಹೀ ಚರಿತ್ರೆಕಾರರ ಗ್ರಂಥಗಳು. ಈ ಚರಿತ್ರೆಕಾರರನ್ನು ಅಲ್ಲಗಳೆದಿರುವ ವಿದ್ವಾಂಸರನ್ನು ಭೈರಪ್ಪ ಗಂಭೀರವಾಗಿ ಪರಿಗಣಿಸುವುದಿಲ್ಲ. ಇವರ ವಾದಗಳನ್ನೂ, ಪರ್ಯಾಯ ದೃಷ್ಟಿಕೋನಗಳನ್ನೂ ಭೈರಪ್ಪ ಅಪಹಾಸ್ಯದಲ್ಲಿ ಹೀಗಳೆಯುತ್ತಾರೆ. ಕಾದಂಬರಿಯ ಉದ್ದಕ್ಕೂ ಭೈರಪ್ಪ ಹಲವು ಸಮಾಜಶಾಸ್ತ್ರೀಯ, ಮಾನವಶಾಸ್ತ್ರೀಯ ಹೇಳಿಕೆಗಳನ್ನೂ ಇತಿಹಾಸಕ್ಕೆ ಸಂಬಂಧಿಸಿದಂತಹ ತೀರ್ಮಾನಗಳನ್ನು ನೀಡಿದ್ದಾರೆ; ಆದರೆ ತನ್ನ ಮಾತುಗಳನ್ನು ಈ ಶಾಸ್ತ್ರಗಳ ಶಿಸ್ತಿಗೆ ಅನುಗುಣವಾಗಿ ಸಮರ್ಥಿಸಿಕೊಳ್ಳುವುದಿಲ್ಲ, ಯಾಕೆಂದರೆ ಅವರು ಬರೆದಿರುವುದು ಕಾದಂಬರಿ! ಭೈರಪ್ಪನವರ ಚಿಣ್ಣಿ ಆರಾಧಕನೊಬ್ಬ "'ಆವರಣ' ವನ್ನು ಕಾದಂಬರಿ ಎಂದೇ ಓದಬೇಕು; ಅದು ಇತಿಹಾಸವಲ್ಲ" ಎಂದು ಕಾದಂಬರಿ ಕುರಿತ ಬೆಂಗಳೂರಿನ ಹೌಸ್‌ಫುಲ್‌ಸೆಮಿನಾರಿನಲ್ಲಿ ಬಡಬಡಿಸಿದ್ದಾನೆ. ಆದರೆ ವಾಸ್ತವವಾಗಿ 'ಆವರಣ' ಅತ್ತ ಕಾದಂಬರಿಯೂ ಅಲ್ಲದ ಇತ್ತ ಇತಿಹಾಸವೂ ಅಲ್ಲದ ಹೇಸರಗತ್ತೆ!.

'ಆವರಣ'ದ ಅತಿ ದೊಡ್ಡ ಸಮಸ್ಯೆ ಎಂದರೆ ಹಿಂಸೆಯ ವಿರುದ್ಧ ಭೈರಪ್ಪನವರಿಗೆ ಹೇಳಿಕೊಳ್ಳುವ ನೈತಿಕ ನಿಲುವೇ ಇಲ್ಲದಿರುವುದು. ಕಾದಂಬರಿಯಲ್ಲಿ ಹಿಂಸೆ ಅಮೂರ್ತ ವಿಚಾರವಾಗಿಯೂ ಇದೆ; ದೈಹಿಕ ಹಿಂಸೆಯ ಮೂರ್ತ ರೂಪದಲ್ಲೂ ಇದೆ. ಜೊತೆಗೆ ಮನೋದೈಹಿಕ ಹಿಂಸೆಯ ಹಲವು ಪರಿಗಳನ್ನು ಭೈರಪ್ಪನವರು ನಿರೂಪಿಸುತ್ತಾರೆ. ಆದರೆ ಕಾದಂಬರಿಯಲ್ಲಿ ಈ ನಾನಾ ಬಗೆಯ ಹಿಂಸೆಗಳಿಗೆ ನಿಶ್ಚಿತ ಕಾಲ ದೇಶಗಳ ಜೊತೆ ಮತ ಧರ್ಮದ ಚೌಕಟ್ಟು ಕೂಡ ಇದೆ. ಅಂದರೆ ಕಾದಂಬರಿಯಲ್ಲಿ ಹಿಂಸೆ ಎಸಗುವವರು ಮುಸ್ಲಿಮರು; ಹಿಂಸೆಗೆ ಬಲಿಯಾಗುವವರು ಮುಸ್ಲಿಮೇತರರು. ಆ ಕಾಲಘಟ್ಟದಲ್ಲಿ ಹಿಂದೂಗಳು ಹಿಂದೂಗಳ ವಿರುದ್ಧ ಮತ್ತು ಮುಸ್ಲಿಮರು ಮುಸ್ಲಿಮರ ವಿರುದ್ಧ ಹಿಂಸೆ ನಡೆಸಲೇ ಇಲ್ಲವೇ? ಈ ಕಾದಂಬರಿಯ ಕಾಲಾವಧಿಯಲ್ಲೇ ಹತ್ತು ಲಕ್ಷ ಜನರನ್ನು ಬಲಿತೆಗೆದುಕೊಂಡು 1 ಕೋಟಿ ಜನರನ್ನು ಸ್ಥಳಾಂತರಿಸಿದ ದೇಶ ವಿಭಜನೆಯ ಗಲಭೆಗಳು ನಡೆದವು. ಭೈರಪ್ಪ ಇದರ ಬಗ್ಗೆ ಏನೂ ಹೇಳುವುದಿಲ್ಲ. ಸ್ವಾತಂತ್ರ್ಯೋತ್ತರ ಭಾರತದ ಹಲವು ಭೀಕರ ಹತ್ಯಾಕಾಂಡಗಳನ್ನೂ ಭೈರಪ್ಪ ಪ್ರಸ್ತಾಪಿಸುವುದಿಲ್ಲ. ಹಿಂಸೆಯ ಪೂರ್ತ ಜವಾಬ್ದಾರಿಯನ್ನು ಅವರು ಮುಸ್ಲಿಮರ ತಲೆಗೆ ಕಟ್ಟಿ, ಅದು ಅವರ ರಕ್ತಗುಣ ಮಾತ್ರವಲ್ಲ, ಇಸ್ಲಾಂ ಎತ್ತಿಹಿಡಿಯುವ ಮೌಲ್ಯವೂ ಹೌದು ಎಂದು ಪ್ರತಿಪಾದಿಸುತ್ತಾರೆ. ಹಿಂಸೆ ಮನುಷ್ಯನ ದುರಂತ ಎಂದು ಭೈರಪ್ಪ ಭಾವಿಸದೆ ಅದಕ್ಕೆ ಮುಸ್ಲಿಮರನ್ನೇ ಪೂರ್ತ ಜವಾಬ್ದಾರರನ್ನಾಗಿ ಮಾಡುವುದರಿಂದ ಹಿಂಸೆಯ ಕುರಿತು ಅವರಿಗೆ ಕಳವಳವೂ ಇಲ್ಲ. ಕಾದಂಬರಿಯ ನೈತಿಕ ಜಗತ್ತಿನಲ್ಲಿ ಗಾಂಧೀಜಿ ಸಹ ಸಂಪೂರ್ಣವಾಗಿ ನಾಪತ್ತೆ! ಎಲ್ಲಕ್ಕಿಂತ ಹೆಚ್ಚಾಗಿ 'ಆವರಣ' ದ ಓದುಗನನ್ನು ಕಂಗೆಡಿಸುವುದು ಅದರ ಭಯಾನಕ ನೈತಿಕ ಶೂನ್ಯತೆ.

-ಜಿ. ರಾಜಶೇಖರ

ಶಿಕಾರಿ ಜಿಮ್ ಕಾರ್ಬೆಟ್‌ನ ಕಥನಗಳು



ಮೋಹನಾದ ನರಭಕ್ಷಕ

ತಗ್ಗಿನ ಕಡೆಯಿಂದ ಕಾಡುಮೇಕೆ ಮತ್ತು ಲಂಗೂರಗಳು ಕೂಗುತ್ತಾ ಓಡಿಹೋಗಿದ್ದು ನನಗೆ ಕೇಳಿಸಿತು. ಬಹುಶಃ ಅವು ಚಿರತೆಯನ್ನು ನೋಡಿರಬೇಕು! ಕಾಲ ವೇಗವಾಗಿ ಸರಿಯುತ್ತಿತ್ತು. ಸೂರ್ಯ ಮುಳುಗುವ ಮುಂಚೆ ಆ ರಸ್ತೆಯತ್ತ ಚಾಚಿದ್ದ ಕೋಡುಗಲ್ಲನ್ನು ದಾಟ ಬಿಡಲು ತೀರ್ಮಾನಿಸಿ ನಾನು ನಡೆಯುತ್ತಿದ್ದೆ. ಇದು ಈವರೆಗೂ ನಾನು ಓಡಾಡಿದ ಜಾಗಗಳಲೆಲ್ಲಾ ಅತ್ಯಂತ ಅಪಾಯಕಾರಿ ಎಂದು ಹೋಗುವಾಗಲೇ ಅನಿಸಿತ್ತು. ಈ ಕೋಡುಗಲ್ಲಿನ ಮೇಲ್ಭಾಗದಲ್ಲಿದ್ದ ಒಂದಿಷ್ಟು ಅಗಲದ ದಟ್ಟವಾದ ಹುಲ್ಲಿನ ನಡುವೆ ಹುಲಿ ಕಾಯ್ದು ಮಲಗುವ ಸಾಧ್ಯತೆ ಇತ್ತು. ಅದು ಅಲ್ಲಿ ಮಲಗಿ ಕಾಯುವುದಾದರೆ ಆ ಕಲ್ಲಿನ ಕೆಳಗಿನಿಂದ ಹಾದುಹೋಗುವ ಯಾರೂ ಅದರ ದಾಳಿಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಸ್ವಲ್ಪ ಮಬ್ಬುಗತ್ತಲೆಯಾಯಿತೆಂದರೆ ನಾನೂ ಅದರ ಕರುಣೆಯಲ್ಲಿಯೇ ಹಿಂತಿರುಗಬೇಕಿತ್ತು, ಆ ರಸ್ತೆಯಲ್ಲಿ ಸಂಚರಿಸುವ ಪ್ರತಿಯೊಬ್ಬರೂ ಈ ನಿಯಮವನ್ನು ಪಾಲಿಸಲೇಬೇಕಿತ್ತು.

ನಾನು ಸಕಾಲದಲ್ಲಿ ಆ ಬಂಡೆಯನ್ನು ದಾಟ ಗುಡಿಸಲಿಗೆ ಹಿಂತಿರುಗಿದೆ. ನಾನು ಬರುವಷ್ಟರಲ್ಲಿ ನಮ್ಮ ಎರಡು ಕೋಣಗಳೂ ಬಂದಿದ್ದವು. ಆದರೆ ಅವುಗಳ ಬಳಕೆಯನ್ನು ಆರಂಭಿಸಲು ಇದು ಸರಿಯಾದ ಸಮಯವಲ್ಲ, ಕತ್ತಲಿನಲ್ಲಿ ಅವುಗಳನ್ನು ಹೊಡೆದುಕೊಂಡು ಹೋಗಿ ಕಟ್ಟಬರಲು ಸಾಧ್ಯವಿರಲಿಲ್ಲ. ಅತ್ತ ನನ್ನ ಸಹಾಯಕರು ಇಡೀ ದಿನ ಗುಡಿಸಲಿನಲ್ಲಿ ಬೆಂಕಿ ಉರಿಸಿದ್ದ ಕಾರಣದಿಂದ ದುರ್ವಾಸನೆ ಮಾಯವಾಗಿ ಒಳಗಿನ ಹವೆ ಹಿತವಾಗಿತ್ತು, ಆದರೂ ಬಾಗಿಲುಗಳನ್ನೆಲ್ಲಾ ಮುಚ್ಚಿ ಮಲಗುವ ಮೂಲಕ ಮತ್ತೆ ಗಂಟಲಿನ ತೊಂದರೆಯನ್ನು ಆಹ್ವಾನಿಸಲು ನಾನು ಸಿದ್ಧನಿರಲಿಲ್ಲ. ಹಾಗಾಗಿ ಹಿಂದಿನ ಬಾಗಿಲನ್ನು ತೆರೆದಿಟ್ಟು, ಸುತ್ತಮುತ್ತ ಬೆಳೆದಿದ್ದ ಮುಳ್ಳುಕಂಪೆಗಳನ್ನು ಕತ್ತರಿಸಿ ಅವನ್ನು ಬಲವಾಗಿ ಬಾಗಿಲಿನ ಅಗಲ-ಆಕಾರಕ್ಕೆ ಹೊಂದಿಸಿ ಕಟ್ಟಿದೆವು. ಈಗ ಲೀಸಾಗಿ ತಾಜಾ ಗಾಳಿ ಬರುತ್ತಿತ್ತು, ಅಂದು ರಾತ್ರಿ ಹಿಂದಿನ ಬಾಗಿಲ ಕಡೆಯಿಂದ ಯಾವ ಸದ್ದುಗಳೂ ಕೇಳಲಿಲ್ಲ, ಬೆಳಗ್ಗೆ ಎದ್ದಾಗ ತುಂಬಾ ಲವಲವಿಕೆಯಿಂದಿದ್ದೆ, ನನ್ನ ಗಂಟಲು ಬಹುಪಾಲು ರಿಪೇರಿಯಾಗಿತ್ತು.

ಮಧ್ಯಾಹ್ನದವರೆಗೂ ನಾನು ಎಲ್ಲಿಗೂ ಹೋಗಲಿಲ್ಲ. ಬೆಳಿಗ್ಗೆ ಆರಂಭವಾದ ನನ್ನ ಹಳ್ಳಿಗರ ನಡುವಿನ ಮಾತುಕತೆಗಳು ಮುಂದುವರಿದಿದ್ದವು. ಅವರು ಇನ್ನೂ ಬಾಕಿ ಇದ್ದ ನರಭಕ್ಷಕನ ಅನೇಕ ಕತೆಗಳನ್ನೂ, ಅದನ್ನು ಹೊಡೆಯಲು ಈವರೆಗೂ ನಡೆದ ಪ್ರಯತ್ನಗಳನ್ನೂ ವಿವರವಾಗಿ ಹೇಳುತ್ತಿದ್ದರು. ಮಧ್ಯಾಹ್ನದ ನಂತರ ಊಟ ಮುಗಿಸಿ ಕೋಣಗಳನ್ನು ಸರಿಯಾದ ಜಾಗದಲ್ಲಿ ಕಟ್ಟಬರಲು ಹೊರಟೆ. ಒಂದನ್ನು ಈ ಹಿಂದೆ ಹುಲಿ ಹೆಂಗಸನ್ನು ಎತ್ತಿಕೊಂಡು ಹೋಗುವಾಗ ಒಂದು ಕಂದಕವನ್ನು ಎಗರಿ ಹೋಗಿತ್ತು ಎಂದು ಹೇಳಿದ್ದೆನಲ್ಲಾ ... ಆ ಕಂದಕದ ಆಚೆದಂಡೆಯಲ್ಲಿ ಕಟ್ಟಿದೆ. ಇನ್ನೊಂದನ್ನು ನಿನ್ನೆ ಹಿಮ್ಮುರಿ ತಿರುವಿನ ಬಳಿ ಹುಲಿಯ ಹೆಜ್ಜೆ ಗುರುತುಗಳು ಬಿದ್ದಿದ್ದ ಜಾಗದಲ್ಲಿ ಕಟ್ಟಿದೆ.

ಮರುದಿನ ಹೋಗಿ ನೋಡಿದಾಗ ಎರಡೂ ಕೋಣಗಳು ಕ್ಷೇಮವಾಗಿದ್ದವು. ನಾನು ಹಾಕಿದ್ದ ದೊಡ್ಡ ಹುಲ್ಲಿನ ಹೊರೆಯನ್ನು ಪೂರ್ತಿ ತಿಂದು ಪ್ರಶಾಂತವಾಗಿ ಮಲಗಿದ್ದವು. ನಾನು ಇವುಗಳ ಕೊರಳಿಗೆ ಗಂಟೆಗಳ ಸರವನ್ನು ಕಟ್ಟಿದ್ದೆ, ಕೋಣಗಳು ಮಾಡಬಹುದಾದ ಎಲ್ಲಾ ಸದ್ದುಗಳ ಗೈರುಹಾಜರಿಯಲ್ಲೂ ಸಹ ಈ ಗಂಟೆಗಳು ಶಬ್ದಮಾಡಿ ಹುಲಿಯನ್ನು ಆಕರ್ಷಿಸಬಹುದೆಂಬ ಆಶಯದಿಂದ. ಹಾಗೇ ದಾಳಿಯ ಸಮಯದಲ್ಲಿ ಹುಲಿ ಎಷ್ಟೇ ನಿಶ್ಶಬ್ದವಾಗಿ ಕೊಲ್ಲಲು ಪ್ರಯತ್ನಿಸಿದರೂ ಗಂಟೆಗಳ ಸದ್ದು ಕೇಳುತ್ತದೆಂಬ ನಂಬಿಕೆಯಿಂದ. ಈ ಕೋಣಗಳಂತೂ ನನ್ನೆಲ್ಲಾ ನಂಬಿಕೆಗಳನ್ನು ನೀರುಪಾಲು ಮಾಡಿ, ಕತ್ತನ್ನು ಸಹ ಅಲ್ಲಾಡಿಸದೆ ನಿಶ್ಚಿಂತೆಯಿಂದ ನಿದ್ದೆ ಹೊಡೆಯುತ್ತಿದ್ದವು. ಸಂಜೆಯ ಹೊತ್ತಿಗೆ ಹಿಮ್ಮುರಿ ತಿರುವಿನ ಬಳಿ ಇದ್ದ ಕೋಣವನ್ನು ಕೋಡುಗಲ್ಲಿನ ಆಚೆಗಿದ್ದ ಹೊಂಡದ ಸಮೀಪಕ್ಕೆ ಬದಲಿಸಿದೆ.

ಸಾಮಾನ್ಯವಾಗಿ ಇಂಥ ಹುಲಿಗಳನ್ನು ಶಿಕಾರಿ ಮಾಡುವಾಗ ಎರಡು ವಿಧಾನಗಳನ್ನು ಬಳಸುತ್ತೇವೆ. ಒಂದು; ಹೀಗೆ ಕೋಣವನ್ನು ಕಟ್ಟಿ, ರಾತ್ರಿಗೆ ಸಮೀಪದ ಮರದ ಮೇಲೆ ಗೊತ್ತು ಕೂರುವುದು. ಎರಡು; ಸೋವು ಶಿಕಾರಿ ಮಾಡುವುದು. ಈ ಎರಡೂ ಸಂದರ್ಭದಲ್ಲಿ ಸ್ಥಳಗಳ ಆಯ್ಕೆ ಬಹಳ ಮುಖ್ಯ. ಹಾಗೇ ಕೋಣಗಳನ್ನು ಕಟ್ಟುವ ಹಗ್ಗದ ಬಗ್ಗೆಯೂ ಎಚ್ಚರಿಕೆ ವಹಿಸುತ್ತೇವೆ. ಕೋಣಗಳು ಅದನ್ನು ಹರಿಯುವಂತಿರಬಾರದು, ಹುಲಿಗಳು ಅದರ ಮರ್ಜಿಯನ್ನು ಆಧರಿಸಿ ಸಾಧ್ಯವಾದರೆ ತುಂಡರಿಸಿ ಎಳೆದುಕೊಂಡು ಹೋಗಬಹುದು ಅಥವಾ ಬಿಡಬಹುದು. ಆದರೆ ಅನೇಕ ಬಾರಿ ಹೀಗೆ ಹಗ್ಗವನ್ನು ತುಂಡರಿಸಿ ಶಿಕಾರಿಯನ್ನು ತನಗೆ ಬೇಕಾದ ಕಡೆಗೆ ಹುಲಿ ಎಳೆದುಕೊಂಡು ಹೋದರೆ ಅಲ್ಲೆಲ್ಲೂ ರಾತ್ರಿಗೆ ಗೊತ್ತು ಕೂರುವಂಥ ಮರಗಳು ಸಿಗದಿರಲೂ ಬಹುದು. ಹಾಗಾಗಿ ಈ ಬಾರಿ ನಾನು ಒಂದಿಂಚು ದಪ್ಪದ ಸೆಣಬಿನ ಹಗ್ಗವನ್ನು ಐದು ಪದರಗಳಲ್ಲಿ ಹೊಸೆದು ಕಟ್ಟಿದ್ದೆ.

ಹುಲಿಯನ್ನು ಕೊಲ್ಲಲು ಎರಡು ವಿಧಾನಗಳಿವೆ ಎಂದೆನಲ್ಲ, ಈ ಸಂದರ್ಭದಲ್ಲಿ ಎರಡೂ ಮಾರ್ಗಗಳು ಸಾಧ್ಯವಿರಲಿಲ್ಲ, ನನ್ನ ಗಂಟಲು ಬಹುಮಟ್ಟಿಗೆ ಸುಧಾರಿಸಿತ್ತಾದರೂ ರಾತ್ರಿ ಹೊತ್ತು ದೀರ್ಘಕಾಲ ಕೆಮ್ಮದೆ-ಕ್ಯಾಕರಿಸದೆ ಕೂರುವುದು ಕಷ್ಟವಾಗುತ್ತಿತ್ತು. ಹಾಗೇ ಇಲ್ಲಿನ ಅಗಾಧ ಕಾಡು ಪ್ರದೇಶವನ್ನು ಸೋವಲು ಅಗತ್ಯವಾದ ಸಾವಿರಾರು ಮಂದಿಯನ್ನು ಒಟ್ಟುಗೂಡಿಸಿದ್ದರೂ ಈ ನೆಲದ ಮೇಲ್ಮೈ ಅಸಂಖ್ಯಾತ ಕಣಿವೆ-ಕಂದರಗಳಿಂದ ಕೂಡಿತ್ತಾದ್ದರಿಂದ ಅದೂ ಫಲಕಾರಿಯಾಗುತ್ತಿರಲಿಲ್ಲ. ಆದ್ದರಿಂದ ಹೀಗೆ ಕೋಣಗಳನ್ನು ಕಟ್ಟಿ, ಹುಲಿಯನ್ನು ಆಕರ್ಷಿಸಿಯೇ ಅದನ್ನು ಕೊನೆಗಾಣಿಸಬೇಕಿತ್ತು, ಯಾವ ಅಡಚಣೆಗಳೂ ಇಲ್ಲವೆಂದಾದರೆ ಅದು ನರಭಕ್ಷಕನಾಗಿರಲಿ ಅಥವಾ ಸಾಮಾನ್ಯ ಹುಲಿಯಾಗಿರಲಿ ಕೋಣವನ್ನು ಯಾವ ಹೊತ್ತಿನಲ್ಲಾದರೂ ಹಿಡಿಯಲು ಬರುತ್ತದೆಂದು ನನಗೆ ಗೊತ್ತಿತ್ತು. ಹೀಗಾಗಿ ನಾನು ಇಂತಹ ವಾರ್ತೆಗಳಿಗಾಗಿ ಆಶಾವಾದದಿಂದ ಕಾಯುತ್ತಾ ಕುಳಿತೆ. ಈ ನಡುವೆ ನನ್ನ ಹಾಗೂ ನಮ್ಮ ಘರ್ವಾಲಿಗಳ ಗಂಟಲ ಕಾಯಿಲೆಗಳು ಬಹುಪಾಲು ಹತೋಟಿಗೆ ಬಂದಿದ್ದವು. ಈಗ ಅವರೇ ನಿತ್ಯ ಕೋಣಗಳ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಳ್ಳುತ್ತಿದ್ದರು.

ನಾಲ್ಕನೆಯ ದಿನ ಸಂಜೆ, ನಾನು ಕಂದಕದಾಚೆಯ ದಿಬ್ಬದ ಬಳಿ ಕಟ್ಟಿದ್ದ ಕೋಣವನ್ನು ನೋಡಿಕೊಂಡು ಹಿಂತಿರುಗುವಾಗ ಆಗಲೇ ಸೂರ್ಯ ಅಸ್ತಮಾನಕ್ಕೆ ಹತ್ತಿರಾಗುತ್ತಿದ್ದ. ನಾನು ರಸ್ತೆಗೆ ಚಾಚಿದ್ದ ಕೋಡುಗಲ್ಲಿನಿಂದ ಇನ್ನೂ ಮೂವತ್ತು ಗಜಗಳಷ್ಟು ದೂರದಲ್ಲಿದ್ದೆ. ಈ ಕಾರ್ತ್ ಕಾನೌಲಕ್ಕೆ ನಾನು ಬಂದಮೇಲೆ ಎಂದೂ ಪ್ರಾಣಭಯವನ್ನು ಅನುಭವಿಸಿರಲಿಲ್ಲ. ಇಂದು ಈ ಕ್ಷಣ ಏಕೋ ಮೊಟ್ಟಮೊದಲ ಬಾರಿಗೆ ನಾನು ಪ್ರಾಣಾಪಾಯದಲ್ಲಿದ್ದೇನೆ ಅನಿಸಿತು. ಈ ಪ್ರಾಣಾಪಾಯದ ಮೂಲ ಎದುರಿಗೆ ಚಾಚಿದ ಬಂಡೆಯ ಬಳಿ ಇದೆ ಎಂದೂ ಅನಿಸುತ್ತಿತ್ತು. ಐದು ನಿಮಿಷ ನಿಂತಲ್ಲೇ ಶಿಲಾಸದೃಶನಾಗಿ ನಿಂತುಕೊಂಡೆ. ನನ್ನ ಕಣ್ಣುಗಳು ಕೋಡುಗಲ್ಲಿನ ಮೇಲೆ ನಾಟದ್ದವು, ಅಲ್ಲಿನ ಒಂದು ಸಣ್ಣ ಚಲನೆಯನ್ನು ಹುಡುಕುತ್ತಿದ್ದವು. ನನ್ನ ಕಣ್ಣಿನ ರೆಪ್ಪೆಗಳು ಆತುರದಿಂದ ತೆರೆದುಕೊಂಡಿದ್ದವು. ಒಂದು ಕ್ಷಣ..... ಒಮ್ಮೆ ಕಣ್ಣಿನ ರೆಪ್ಪೆಗಳು ಮುಚ್ಚಿ ತೆಗೆಯುವುದರೊಳಗೆ ಒಂದು ಸಣ್ಣ ಚಲನೆ.... ಕಾಣಿಸಿತು. ಅದು ಒಂದು ಸೆಕೆಂಡೂ ಅಲ್ಲ, ಅದರ ಒಂದು ಹತ್ತನೇ ಒಂದು ಭಾಗ ಸಮಯ. ಮತ್ತೆ ಸುಮಾರು ಹೊತ್ತು ಅಲ್ಲಿಯೇ ನಿಂತೆ, ರೆಪ್ಪೆ ಬಡಿಯದೆ ನೋಡುತ್ತಿದ್ದೆ ಮತ್ತೊಂದು ಚಲನೆ ಇಲ್ಲ, ಆ ಕ್ಷಣದ ಚಲನೆಯನ್ನು ನನ್ನ ಕಣ್ಣುಗಳು ನಿಖರವಾಗಿ ದಾಖಲಿಸಿದ್ದವು. ಖಚಿತವಾಗಿ ನರಭಕ್ಷಕ ಅಲ್ಲಿತ್ತು. ಅದು ಸರಿ....! ಈಗ ನಾನೇನು ಮಾಡುವುದು?!

ಅನುವಾದ:

ಡಾ. ಟಿ.ಎಸ್. ವಿವೇಕಾನಂದ

ತರುಣ ಸಾಗರ ಮುನಿ ಹ್ಯಬ್ಬಾವಿಗೆ ಸಿಕ್ಕಿ ಬರ್ಲಿ ನೋಡನ

"ಆ ಮುಂದೇವುದ ಕಡಿಕ ಬೇಕಾದೋಟು ಮಳ್ಳೂದ ವಂತೆ. ಇಲ್ಲಿಗ್ ಇಲ್ಲ ನೋಡು" ಎಂದ ಕಾಳಮಾವ.

"ತುಂಬ್ಯದೇನು, ಸಿದ್ದುವದದು ಒಂದುದಾಗಲೇ ಸತ್ತನಂತೆ ಕಣಮಾವ" ಎಂದಳು ಜುಮ್ಮಿ.

"ಸಿದ್ದು ವದದ್ರೆ ಸ್ವರಗ ಸಿಕ್ತತಂತೆ ಬುಡು" ಎಂದ ಸೀರ.

"ಅಂಗುಟತಲ್ಲ ನಿಜವೇನ್ಲ ಉಗ್ರಿ?" ಎಂದಳು ಜುಮ್ಮಿ.

"ನಾನು ಅಂಗಂತ ಕೇಳಿದ್ದೀನಿ, ಅದ್ರೆ ಸ್ವರಗಕ್ಕೋದೋರು ನಾನಿಲ್ಲಿಗೆ ಬಂದೆ ಅಂತ ತಿಳಿಸಿದ್ರೆ ತಾನೆ ಗೊತ್ತಾಗದು. ಇವತ್ತಿನವರಿಗೂ ಯಾವನೂ ಹೇಳಿ ಕಳಿಸಿಲ್ಲ."

ಬೆಂಗಾಲಿ ಸೀಮೆಯ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಸಿದ್ದುವದದ್ರೆ, ನಾಗರಾವು ಕಡುದು ಸತ್ರೆ, ಗೋದನಾದು ಸತ್ರೆ ನೇರ ಸ್ವರಗಕ್ಕೋಯ್ತರೆ ಅಂತ ಹೇಳ್ತರಪ್ಪ"

"ಹೇಳೋರಿಗೇನೆ, ಕೇಳೂರು ತಯಾರಾಗಿದ್ರೆ ದಿನಗಟ್ಳೆ ಹೇಳ್ತರೆ. ಅದೆ ನಿಜವ ಅಂಗೆ ಮಾತಾಡಕ್ಕಾದತೇ ಸುಳ್ಳಾದ್ರೆ ಸಾಯಗಂಟ ಹೇಳಿಕಂಡು ತಿರುಗಬವುದು."

"ನಿಜ ಬುಡು, ನಾನು ಸುಳ್ಳೇಳರ ನೋಡಿದ್ದಿನಿ. ಏನು ಮಸಿ ಮಾತಾಡ್ತರೆ?"

"ಇಲ್ಲೆ ತಗೊ, ಕಾಳಮಾವ ಏಟುಬೇಕಾಟು ಮಾತಾಡ್ತನೆ. ಅದೇ ಸೀರು ಮಾವ ಜಾಸ್ತಿ ಮಾತಾಡ್ತನೆ, ಅಂಗೇ ನೋಡಿದ್ರೆ ಕಾಳಮಾವನ ಮಾತಿನ ತೂಕ ಸೀರ ಮಾವನಿಗಿಲ್ಲ."

"ನೀನೇನು ಸತ್ಯ ಹರಿಚಂದ್ರುಲ್ಲ ಸುಮ್ಮನೆ ಕೂತಗಳ್ಳೆ."

"ನಾನರಿಚಂದ್ರು ಅಂದನೆ, ಸುಮ್ಮನೆ ಮಾತಿಗೇಳಿದೆ ಕಣಮಾವ. ಶ್ರವಣಬೆಳಗುಳಕೆ ವಬ್ಬ ಸ್ವಾಮಿ ಬಂದಿದ್ದ ಗಂಟೆ ಅಳ್ಳಾಡಿಸಿಗಂಡು."

"ಅವುನ್ಯಾರ್ಲ ಗಂಟೆ ಅಳ್ಳಾಡಿಸಿಗಂಡು ಬಂದೋನು?"

"ಅವುನು ತರುಣ ಸಾಗರ ಅಂತ ಮುನಿ ಕಣೇ."

"ಮುನಿಗಳ ಅಂಗ್ಯಲ್ಲ ಆಡಿಕಬಾರ್ದು ಕಂಡ್ಯ. ದೇವುಮಾನ್ಯರವುರು. ಅವುರ ಧೈರ್ಯ ನಿನಿಗಿದ್ದತೆ?" ಎಂದ ಕಾಳಮಾವ.

"ಆಡಿಕಳ್ಳಿಲ್ಲ ಕಣಮಾವ ಶ್ರವಣಬೆಳಗುಳದಲ್ಲಿ ಅವರು ಹೊಯ್ತಾಯಿರುವಾಗ, ಸ್ವಾಮಾನು ಅಳ್ಳಾಡಿಕಂಡು ಆಕಡೆ ಈಕಡೆ ತ್ವಡಿಗೆ ತಗುಲ್ತಿತ್ತು. ಅದ ನೋಡಿ ನನಿಗೆ ಗಂಟೆ ಅಳ್ಳಾಡಿದಂಗೆ ಕಾಣ್ತು ಅದಕಂಗಂದೆ."

"ಯಲ್ಲಾರು ಅಂಗೆ ಗಂಟೆ ಅಳ್ಳಾಡುಸ್ತರೆ ಕಂಡ್ಯ, ನಮ್ಮದು ಕಾಣದಿಲ್ಲ ಅವುರ್ದು ಕಾಣತದೆ.ಆ ಧೈರ್ಯ ಮೆಚ್ಚಬೇಕು ನೀನು."

"ಮೆಚ್ಚದಿನಿ ಕಣಮಾವ, ಇವತ್ತಿಗೂ ನಾನು ಚೆಡ್ಡಿಲ್ಲಾಗ್ಲಿ ಕಾಚಾದಲ್ಲಾಗ್ಲಿ ನಮ್ಮೂರಲ್ಲಿ ತಿರುಗಾಡಕ್ಕಾಗಿಲ್ಲ ಅಂದ್ರೆ ಆ ಮುನಿ ಧೈರ್ಯ ಕೊಂಡಾಡಿದ್ದಿನಿ. ಅದಲ್ಲ ನಾನೇಳಿದ್ದು, ಅವುನೇಳತ ಕುಂತಿರೊ ಸುಳ್ಳು ಆಡಿಕಂಡೆ ಅಷ್ಟೆಯ."

"ಅವುರೇನು ಸುಳ್ಳೇಳಿದ್ರೂ?"

"ಗುರುಹಿರಿಯರು ಬರುವಾಗ ಎದ್ದು ನಿಂತು ಗೌರವ ತೋರದೋನು ಹ್ಯಬ್ಬಾವಾಗಿ ಹುಟ್ಟತನಂತೆ."

"ಅಂಗರೆ ಈಗ ಪರಪಂಚದ ಮ್ಯಾಲೆ ಇರೊ ಹ್ಯಬ್ಬಾವ್ಯಲ್ಲ ಹಿಂದಿನ ಜಲುಮದಲ್ಲಿ ಗುರುಹಿರಿಯರಿಗೆ ಗೌರವ ಕೊಡದೇಯಿದ್ದೊರು ಅಂದಂಗಾಯ್ತು?"

"ಅವುರ ಲ್ಯಕ್ಕದಲ್ಲಿ ಅಂಗೆ ಆಯ್ತು."

"ಸರಿ, ವಳ್ಳೆ ಹಾವು, ನಾಗ್ರಾವು, ಕ್ಯಾರೆ ಹಾವು ಇವ್ಯಲ್ಲ ಏನೂ?"


"ಏನಪ್ಪ ಅವುರನೇ ಕೇಳಬೇಕು, ಸೋಮಾರಿಗಳು ಹ್ಯಬ್ಬಾವಾದ್ರೆ ಉಳದಾವು ಏನು ಅಂತವ?"

"ಯಾರಪ್ಪ ಲೇಜಿಪೆಲೋಗಳ್ಳಲ್ಲ ಹ್ಯಬ್ಬಾವು ಅಂದೋರು?" ಎಂದುಕೊಂಡು ವಾಟಿಸ್ಸೆ ಹಾಜರಾದ.

"ತರುಣ ಸಾಗರ ಮುನಿಗಳು ನಿನ್ನಂಥೋರನ್ನಲ್ಲ ಹ್ಯಬ್ಬಾವು ಅಂದವುರೆ ಕಣೊ."

"ಯಾಕಂತೇ?"

"ಅದು ಸೋಮಾರಿಯಂಗೆ, ಬದ್ದಿತ್ತ ಬದ್ದಿರತದಂತೆ, ಚುರುಕಿಲವಂತೆ."



"ಆಹ ಏನು ಮಾತಾಡಿದಾನಯ್ಯ ಆ ತರುಣ. ಆತ ಹೋಗಿ ಯಾವುದಾರ ಹ್ಯಬ್ಬಾವಿಗೆ ಸಿಕ್ಕಿ ತಪ್ಪಿಸಿಕೊಂಡು ಬರ್ಲಿ ನೋಡನ. ಚುರುಕಿಲವಂತ ಚುರುಕು, ಪೂಲಿಷ್ ಫೆಲೊ."

"ಹ್ಯಬ್ಬಾವಿಗೆ ಆಟೊಂದು ಸಗತಿಯೇನ್ಲ?"

"ತೇಜಸ್ವಿಯಿದ್ರೆ ನಿನಿಗೆ ಆದನ್ನಲ್ಲ ಹೇಳೋರು ಕಣಕ್ಕ ಅವುರು ಹೇಳದೆ ಕೇಳದೆ ವಂಟೋದ್ರಿಂದ ಈ ತರುಣ ಸಾಗರನಂಥೋರು ಪ್ರಾಣಿಗಳ ಬಗ್ಗೆ ಮಾತಾಡ್ತರೆ. ಈ ಪ್ರಪಂಚದಲ್ಲಿ ತುಂಬಾ ವೇಗವಾಗಿ ಓಡೋ ಪ್ರಾಣಿ ಚಿರತೆ ಕಣಕ್ಕ."

"ನೀನೆಲ್ಲಿ ನೋಡಿದೆ?"

"ಓದಿಕಂಡಿದ್ದೀನಿ. ತಿಳಕಂಡೋರತ್ರ ಚರ್ಚೆ ಮಾಡಿದ್ದಿ. ಅವುರೇಳೋ ಪ್ರಕಾರ, ಅಂತ ಚಿರತೆನ ಈ ಹ್ಯಬ್ಬಾವು ಮನಗಿದ್ದಾವ್ರುಲೆ ಹಗ್ಗ ಹಾಕಿ ಯಳಕಂಡಂಗೆ ಚಿರತೆಯಳಕತ್ತದೆ. ಎಷ್ಟೇ ಹೋರಾಟ ಮಾಡಿದ್ರೂ ಬುಡಿಸಿಗಳಕ್ಕಾಗದಿಲ್ಲ. ಕಡಿಗೆ ಉಸುರುಕಟ್ಟಿ ಸಾಯಿಸಿಬುಡ್ತದೆ. ಈ ತರುಣ ಸಾಗರನ್ನ ಒಂದು ಸತಿ ಹ್ಯಬ್ಬಾವು ಮನಿಗಿರೊ ಕಡೆ ಕಳುಸಬೇಕು."

"ಕಳಿಸಿದ್ರೆ ತಿರಗ ಎಲ್ಲಿ ಬಂದರೊ. ಅವುರು ಸ್ವರ್ಗ ಸೇರಿಕತ್ತರೆ. ಆಗ ಇದೇ ಶ್ರವಣಬೆಳಗುಳದಲ್ಲಿ ತಿಥಿಕಾರ್ಯ ಮಾಡಬೇಕಾಯ್ತದೆ" ಎಂದ ಉಗ್ರಿ.

"ಅವುರಲ್ಲಿ ತಿಥಿಕಾರ್ಯ ಇಲ್ಲ ಕಣೊ."

"ತಿತಿ ಅಂದೇಟಗೆ ಗ್ಯಾಪ್ಕಕ್ಕೆ ಬತ್ತು ತೇಜಸವಿ ತೀರಿಕಂಡ್ರಲ್ಲ ತಿತಿ ಕಾರ್ಯ ಯಾವಾಗ ಮಾಡ್ತರ್ಲ?" ಎಂದಳು ಜುಮ್ಮಿ.

"ಮಾಡದಿಲ್ಲ ಕಣಕ್ಕ ಅವುರಿಗದರಲ್ಲಿ ನಂಬಿಕೆ ಇರಲಿಲ್ಲ."

"ಅವುರಿಗೆ ನಂಬಿಕಿಲ್ಲ, ಇದ್ದೊರು ಮಾಡಬಾರ್ದೆ?"

"ಅಂಗೇಸಾರ ವಾಡಿದ್ರೆ, ತೇಜಸ್ವಿ ಗಾಳಿಯಾಗಿ ಬಂದು ತಿಥಿ ಮಾಡಿದೋರಿಗ್ಯಲ್ಲ ಗಾಳಿಬುಡುಸ್ತರೆ."

"ಏನೇ ಆದ್ರು ಭೂಶಾಂತಿ ಕಾರ್ಯವ ಮನಿಯೋರಾದ್ರು ಮಾಡಬೇಕು ಕಂಡ್ಯ" ಎಂದ ಕಾಳಮಾವ.

"ಅಂಗೇನ್ನೂ ಮಾಡಬಾರ್ದು ಅಂತ ಹೇಳತಿದ್ರು, ದೊಡಪ್ಪ, ಮಲೆನಾಡಲ್ಲಿ ತಿತಿ ಮಾಡಿ ಹಾಳಾದೋರಾ ಅವುರು ನೋಡಿದ್ರು."

"ಏ ಅಲ್ಲಿಗಂಟ ಯಾಕೋದಿಯೋ, ಇದೇ ಹೊಟ್ಟು ಚಿಕ್ಕಣ್ಣಾರ ಅಪ್ಪ ಸತ್ತು ನಾಕು ಮರಿಕೂದು ತಿತಿ ಮಾಡಿದ. ಆ ಸಾಲ ತೀರಸಕ್ಕೆ ಏಟೊರ್ಸ ಕೂಲಿ ಮಾಡಿದ ಅವುನ್ನೆ ಕೇಳು?" ಎಂದ ಉಗ್ರಿ. ಆಗ ಮುಖದ ಮೇಲೆ ಸಾಹಸದ ಕಳೆತಂದುಕೊಂಡ ಚಿಕ್ಕ.

ಇನ್ಫೋಸಿಸ್ ನಾರಾಯಣಮೂರ್ತಿ 'ಆವರಣ'ದ ಭೈರಪ್ಪ ಕಥಾನಕವು

ಥೂ ಈ ಹಾಳಾದ ಜನರಿಗೆ ಏನು ಆಗಿದೆ ಅಂತೀನಿ. ಲಾಗಾಯ್ತಿನಿಂದಲೂ ಉಚ್ಚ ಸಂಸ್ಕೃತಿಯವರು ಕೀಳು ಸಂಸ್ಕೃತಿಯವರ ಆಚಾರವಿಚಾರಗಳನ್ನು ಹೀಯಾಳಿಸುವುದು ನಡೆಯುತ್ತಲೇ ಬಂದಿದೆ. ಉಚ್ಚ ಸಂಸ್ಕೃತಿಯವರನ್ನು ಓಲೈಸುವುದು, ಅವರ ಗುಲಾಮರ ತರಹ ನಡೆದುಕೊಳ್ಳೋದು ನಮ್ಮ ಪರಂಪರೆಯಲ್ಲಿ ಇದ್ದದ್ದೆ. ಪಾಪ ನಮ್ಮ ನಾರಾಯಣಮೂರ್ತಿ ಎಂತಹ ಧೀಮಂತ ವ್ಯಕ್ತಿ! ಅವರೇನಾದರೂ ಈ ಕರ್ನಾಟಕ ಎಂಬ ಬರಡು ಪ್ರದೇಶದಲ್ಲಿ ಹುಟ್ಟದಿದ್ದರೆ ಇಲ್ಲಿನ ಜನ ಮಣ್ಣು ತಿನ್ನಬೇಕಿತ್ತು! ಏನೋ ಆ ಪುಣ್ಯಾತ್ಮ ಈ ಭೂಮಿಯಲ್ಲಿ ಜನಿಸಿ ಮಾಹಿತಿ ತಂತ್ರಜ್ಞಾನವನ್ನು ಪರಿಚಯ ಮಾಡಿಸಲಾಗಿ ಜನ ಹೊಟ್ಟೆಗೆ ಒಂದಿಷ್ಟು ಹಿಟ್ಟು ಅಂತ ಕಾಣುವ ಹಾಗಾಯ್ತು! ಪತ್ರಿಕೆಗಳಲ್ಲಿ ಬರುವ ಹೇಳಿಕೆಗಳನ್ನು, ಪತ್ರಗಳನ್ನು ನೋಡಿದರೇ ಗೊತ್ತಾಗುತ್ತೆ- ಈ ನಾಡಿನ ಜಲಾಶಯಗಳು, ಅದರಿಂದ ರೈತರಿಗೆ ದೊರೆಯುತ್ತಿರುವ ನೀರು, ಸಂಪರ್ಕ ಸಾಧನೆಯ ರಸ್ತೆಗಳು ಇವೆಲ್ಲ ಅವರು ನೀಡುತ್ತಿರುವ ತೆರಿಗೆ ಹಣದ ಫಲದಿಂದಲೇ ಅಂತ! ಅಂತಹ ಮೂರ್ತಿಯವರ ಬಗ್ಗೆ ಹೀನಾಯ ಮಾತುಗಳನ್ನು ಆಡುವುದು ಎಂದರೆ ಅರ್ಥ ಇದೆಯೆ? ಈ ಕೃತ್ಯದಲ್ಲಿ ತೊಡಗಿರುವವರೆಲ್ಲ ನಕ್ಸಲೀಯರೋ, ಅವರ ಪರವಾಗಿರುವವರೋ ಇಲ್ಲ ಬಿನ್ ಲಾಡೆನ್ ವಂಶಸ್ಥರೋ ಇರಬೇಕು! ಇಲ್ಲ ಅಂದರೆ ದೇವರಂತಹ ಮನುಷ್ಯನನ್ನು ಹೀಗೆ ಹಿಗ್ಗಾಮುಗ್ಗಾ ಜಾಡಿಸುತ್ತಿದ್ದರಾ ಅಂತ.

ಇಷ್ಟಕ್ಕೂ ಮಹಾನ್ ಮೇಧಾವಿ ನಾರಾಯಣಮೂರ್ತಿ ಮಾಡಿದ ಅಪರಾಧ ಆದರೂ ಏನೂ ಅಂತ. ಮೈಸೂರಿನ ಇನ್‌ಫೋಸಿಸ್ ಕ್ಯಾಂಪಸ್ಸಿಗೆ ರಾಷ್ಟ್ರಪತಿ ಅಬ್ದುಲ್ ಕಲಾಂ ಬಂದಿದ್ದರಂತೆ. ಸಮಾರಂಭದಲ್ಲಿ ರಾಷ್ಟ್ರಗೀತೆ ಹಾಡಬೇಕಾಗಿತ್ತಂತೆ. ಭಾರತೀಯ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಮೂರ್ತಿಯವರಿಗೆ ಈ ಹಾಳಾದ ರಾಷ್ಟ್ರಗೀತೆಯನ್ನು ಹಾಡಿ ತಮ್ಮ ಧಣಿಗಳಾದ ವಿದೇಶಿಯರಿಗೆ ಮುಜುಗರ ಮಾಡಲು ಮನಸ್ಸು ಬರಲಿಲ್ಲವಂತೆ. ಹಾಗಂತ ಅದನ್ನು ಸಂಪೂರ್ಣ ಕೈಯ್ಯೂ ಬಿಡಲಿಲ್ಲವಂತೆ. ವಾದ್ಯಗಳ ಮೂಲಕ ರಾಷ್ಟ್ರಗೀತೆ ನುಡಿಸಿ ಕೈತೊಳೆದುಕೊಂಡರಂತೆ. ರಾಷ್ಟ್ರಗೀತೆ ಹಾಡುವ ಮುಜುಗರದಿಂದ ತಪ್ಪಿಸಿಕೊಳ್ಳಲು ಇಂತಹ ಅಭೂತಪೂರ್ವ ಪರ್ಯಾಯ ಸೂತ್ರ ನೀಡಿದ ಅವರು ಅಭಿನಂದನೆಗೆ ಅರ್ಹರೇ ಹೊರತು ದೂಷಣೆ ಅಲ್ಲ!

ಮೂರ್ತಿಯವರಂತೆಯೇ ಚಿಂತಿಸುವ ಹಲವಾರು ವಿವಿಧ ಕ್ಷೇತ್ರಗಳಲ್ಲಿನ ದಿಗ್ಗಜರಿಗೆ ಈ ಹೇಳಿಕೆಯಲ್ಲಿ ಯಾವ ದೋಷವೂ ಕಾಣದಿದ್ದರೂ ಬಹುಪಾಲು ಜನರಿಗೆ [illegible] ದ್ರೋಹವಾಗಿ ಕಾಣಿಸು[illegible] ಆಶ್ಚರ್ಯಕರವಾಗಿದೆ! ವಿಧಾನಮಂಡಲದಲ್ಲಿಯೂ ಈ ವಿಷಯ ಚರ್ಚೆಗೆ ಒಂದು ಮೂರ್ತಿಯವರಂತಹ ಮೇಧಾವಿಯನ್ನೇ ಗಡೀಪಾರು ಮಾಡುವಂತೆ ಒತ್ತಾಯಿಸಿದ್ದಾರೆ. ಅಲ್ಲ, ಗೂಂಡಾಗಳನ್ನು ಗಡೀಪಾರು ಮಾಡಿ ಅಂತ ಒತ್ತಾಯಿಸುವುದನ್ನು ಕೇಳಿದ್ದಿವಿ. ಹಾಗಾದರೆ ಈ ಮೂರ್ತಿನೂ ಗೂಂಡಾನ ಅಂತ ಕೇಳಿದರೆ ಏನು ಹೇಳಬೇಕ್ರಿ ಅವರು. ಹೌದು ಇವ ಬೌದ್ಧಿಕ ಗೂಂಡಾಗಿರಿ ಮಾಡ್ತಾ ಇದಾನೆ ಅನ್ನಬಹುದಾ... ಇಂತಹ ಉದ್ಧಟತನದ ಶಾಸಕರಿಗೆ ಬುದ್ಧಿಜೀವಿಗಳು ಪ್ರಶ್ನೆಗಳ ಸರಣಿಯನ್ನೇ ಬಿಸಾಕ್ತಿದಾರೆ ಅನ್ನಿ. ಅವು ಏನು ಅಂದರೆ... ಈ ಮೂರ್ತಿಯವರು ತಮ್ಮ ಮೇಧಾಶಕ್ತಿ ಉಪಯೋಗಿಸಿ ಮೇಲೆ ಬಂದವರು, ಹಣ ಗಳಿಸಿದವರು; ನೀವು ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ಕೋಟ್ಯಂತರ ರೂಪಾಯಿ ಸಂಪಾದಿಸಿದರಲ್ಲ ಅದು ಹೇಗೆ ಬಂತು? ಏನು ಶ್ರಮ ನಿಮ್ಮದು.... ಇಂತಹವು ಪ್ರಸ್ತುತ ಸಮಸ್ಯೆಗೆ ಇದು ಸಂಬಂಧಿಸಿದ್ದಲ್ಲ ಅಂತ ಕೆಲವರಿಗೆ ಅನ್ನಿಸಬಹುದಾದರೂ ಹೀಗೆ ಪ್ರಶ್ನೆ ಬೀಳುತ್ತಿರುವುದಂತೂ ಸತ್ಯ.



ಈ ಬುದ್ಧಿಜೀವಿಗಳು ಕೇವಲ ಪ್ರಶ್ನೆಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ, ತಮ್ಮ ಟ್ರಸ್ಟಿನ ಮುಖಾಂತರ ಹಲವಾರು ಜನಪರ ಕಾರ್ಯಗಳನ್ನು ಎಸಗುತ್ತಿರುವ (ತೆರಿಗೆ ಪಾವತಿಸಬೇಕಾದ ಹಣ ಉಳಿಸಲೂ ಇರಬಹುದು!) ಈ ದೇವತಾ ಮನುಷ್ಯನ ವಿಷಯದಲ್ಲಿ ಈ ರೀತಿ ಆರೋಪಗಳಿಗೆ, ಪ್ರತಿಭಟನೆಗಳಿಗೆ ಕಾರಣವೇನು ಎಂಬುದರ ಮೂಲ ಕಂಡುಹಿಡಿಯುವ ಪತ್ತೆದಾರಿ ಕೆಲಸಕ್ಕೆ ಕೈ ಹಾಕಿದರು. ಆಗ ಬೆಳಕಿಗೆ ಬಂದದ್ದು ಏನಪ್ಪಾ ಅಂದರೆ... ರಾಷ್ಟ್ರಪತಿಯವರು ಇನ್ಫೋಸಿಸ್ ಕ್ಯಾಂಪಸ್‌ಗೆ ಬಂದಿದ್ದಾಗ 'ನಾರಾಯಣಮೂರ್ತಿ ಮುಂದಿನ ರಾಷ್ಟ್ರಪತಿ ಅಭ್ಯರ್ಥಿಯಾದರೆ ಹೇಗೆ?' ಎಂಬ ಪ್ರಶ್ನೆ ಬಂತಂತೆ. ಕಲಾಂ ಅದಕ್ಕೆ ಏನು ಉತ್ತರಿಸಿಯಾರು? ಇದರ ಚರ್ಚೆ ಆಗುವುದೇ ಬೇರೆ ವೇದಿಕೆಗಳಲ್ಲಿ, ಅದೂ ಅಲ್ಲದೆ ಈ ನಾರಾಯಣಮೂರ್ತಿಯ ಎದುರೇ ಕುಳಿತಿದ್ದಾನೆ. ಅವನ ಮುಂದೇನೆ ಇಲ್ಲ ಅನ್ನುವುದು ಹೇಗೆ ಎಂದೇ ಏನು ಕತೆಯೋ ರಾಷ್ಟ್ರಪತಿಯವರು 'ಅದ್ಭುತ' ಅಂದರಂತೆ. ಇವರನ್ನು ರಾಷ್ಟ್ರಪತಿ ಮಾಡ್ತೀರಾ? ಆ ಸ್ಥಾನಕ್ಕೆ ಗೌರವವೇ ಇಲ್ಲವೆ ಅನ್ನುವ ವ್ಯಂಗ್ಯ ಆ ಮಾತಿನಲ್ಲಿ ಅಡಗಿತ್ತೋ; ಈ ಪ್ರಶ್ನೆ ಕೇಳಲು ಇದು ಸೂಕ್ತ ವೇದಿಕೆಯೇ ಮಂಗಾ ಅನ್ನುವ ತುರ್ತು ಹುದುಗಿತ್ತೋ; ಈತ ಅತ್ಯದ್ಭುತವಾದ ವ್ಯಕ್ತಿ ಎಂಬ ಸೂಚನೆ ಇತ್ತೋ ಅದು ಕಲಾಂ ಅವರಿಗೆ ಗೊತ್ತು, ಆದರೆ ಹಾಗೆ ಅಂದದ್ದು ನಿಜ ಅಂತೆ. ನಮ್ಮ ಪತ್ತೇದಾರಿ ಪುರುಷೋತ್ತಮರ ಕೊನೆಯ ಉದ್ದೇಶ ಕಲಾಂ ಅವರ ಮಾತಿನಿಂದ ಸ್ಪಷ್ಟ ಆಗಿರುವುದನ್ನು ಕಂಡುಹಿಡಿದರು. ಮೂಲವೇ ತಿಳಿದ ಮೇಲೆ ಕಾರಣ ಹುಡುಕುವುದಕ್ಕೆ ಏನು ತೊಂದರೆ.... ಅದೇ ಕಾರಣ! ನಾರಾಯಣಮೂರ್ತಿಯವರನ್ನು ರಾಷ್ಟ್ರಪತಿ ಸ್ಥಾನದಿಂದ ವಂಚಿಸಲು ಈ ಗಲಭೆ!

ನಾರಾಯಣಮೂರ್ತಿಯವರ ಸ್ವಗೋತ್ರಜರಾದ ಎಸ್.ಎಲ್. ಭೈರಪ್ಪನವರಿಗೂ ಅವರಲ್ಲಿ ತಪ್ಪು ಕಾಣುತ್ತಿಲ್ಲದಿರುವುದು ಸಮಾಧಾನಕರ ಸಂಗತಿ! ಅವರು ಈ ಸಮಸ್ಯೆಯ 'ಆವರಣ'ಕ್ಕೆ ಇನ್ನೂ ಆಳವಾಗಿ ಇಳಿದು ಸಂಶೋಧನೆ ನಡೆಸಿದ್ದಾರೆ! ಅವರ ಸಂಶೋಧನೆ ಹೀಗೆ ಹೇಳುತ್ತೆ: ರಾಷ್ಟ್ರಪತಿಗಳಿಗೆ ವಯಸ್ಸಾಗಿದೆ. ಮುದುಕರು, ಚುರುಕಾಗಿ ಓಡಾಡಲಾರರು. ನೀವು ಅವರು ಚುರುಕಾಗಿ ಓಡಾಡುತ್ತಿರುವುದನ್ನು ಕಂಡಿರಬಹುದು. ಅದೆಲ್ಲ ಭ್ರಮೆ! ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಆ ವೃದ್ಧ ಬಳಲಿದ್ದ. ರಾಷ್ಟ್ರಗೀತೆ ಕೇಳಿಸಿಕೊಳ್ಳುವ ಶಕ್ತಿ ಅವರಿಗಿರಲಿಲ್ಲ, ಅದಕ್ಕೇ ಟ್ಯೂನ್‌ನಲ್ಲಿ ಶಾಸ್ತ್ರ ಮುಗಿಸಿದರು.

ಹಾಗೆ ಮಾಡಬಾರದು ಅಂತ ಎಲ್ಲಿ ಹೇಳಿದೆ? ಹಾಗೆ ಮಾಡಿದ್ದರಿಂದ ಏನೇನೂ ತಪ್ಪಿಲ್ಲ!

ಹಳ್ಳಕ್ಕೆ ಬಿದ್ದವನ ಮೇಲೆ ಆಳಿಗೊಂದು ಕಲ್ಲು ಅನ್ನುವ ಹಾಗೆ ಈ ಪಾಪಿಗಳು ಇಲ್ಲದ್ದನ್ನೆಲ್ಲ ಕೆದಕುತ್ತಾ ಕುಳಿತಿವೆ. ನಾರಾಯಣಮೂರ್ತಿ ತನ್ನ ಸಂಸ್ಥೆಯಲ್ಲಿ ಕನ್ನಡಿಗರಿಗೆ ಕೆಲಸಾನೇ ಕೊಡಲ್ಲ ಅಂತ ಕೂಗಾಡುತ್ತಿವೆ. ಎಸ್.ಎಲ್. ಭೈರಪ್ಪನವರ ಸಂಶೋಧನಾ ಕಾರ್ಯ ಈ ಕ್ಷೇತ್ರದಲ್ಲೂ ನಡೆದಿದೆ. ಅವರು ಕೇಳುತ್ತಾರೆ: ಎಲ್ಲಿದ್ದಾರೆ ಪ್ರತಿಭಾವಂತ

ಅನಕ

■ ಎಚ್.ಎಲ್. ಕೇಶವಮೂರ್ತಿ

ಕನ್ನಡಿಗರು? ಇಲ್ಲಿಲ್ಲ. ಹೊರಗಡೆಯವರಿಗೆ ಅವಕಾಶ ನೀಡುತ್ತಾರೆ. ಈ ದೇಶದ ಆರ್ಥಿಕ ನಾಯಕ ಹೀಗೆ ಮಾಡುವುದರಲ್ಲಿ ಏನು ತಪ್ಪಿದೆ?

ಕನ್ನಡಿಗರು ಇದ್ದನ್ನು ಅರ್ಥ ಮಾಡಿಕೊಳ್ಳಬೇಕು. ಶೂದ್ರರಂತೂ ಹಾಳಾಗಲಿ ಬಿಡಿ. ಅವರ ತಲೆಗೆ ಪ್ರತಿಭೆ ಅಂದರೆ ಏನು ಅನ್ನುವುದೇ ಗೊತ್ತಿಲ್ಲ. ಕನ್ನಡಿಗ ಬ್ರಾಹ್ಮಣರಲ್ಲೂ ವಿದೇಶೀಯರ ಸೇವೆ ಮಾಡುವ ಪ್ರತಿಭೆಗಳು ಇಲ್ಲ! ಇದನ್ನು ಅರಿತುಕೊಳ್ಳದೆ ಮೂರ್ತಿಯವರ ಮೇಲೆ ಹರಿಹಾಯುವುದು ಮೂರ್ಖತನ!

ಕಾವೇರಿ ನ್ಯಾಯಮಂಡಳಿಯ ತೀರ್ಪಿನ ವಿರುದ್ಧ ರಾಜ್ಯ ಪ್ರತಿಭಟಿಸಿತಾದರೂ ನಾರಾಯಣಮೂರ್ತಿಯವರ ಕಂಪನಿ ಕೆಲಸ ಮಾಡಿತ್ತು ಯಾಕೆ? ಚಳವಳಿಯಿಂದ ಯಾವುದೇ ಪ್ರಯೋಜನ ಇಲ್ಲ ಅಂತ. ಯಾವತ್ತಾದರೂ ಈ ದೇಶದಲ್ಲಿ ಮೂರ್ತಿಯವರ ಚಿಂತನೆಯುಳ್ಳವರು ಚಳವಳಿಯಲ್ಲಿ ಭಾಗವಹಿಸಿದ್ದನ್ನು ಕಂಡಿದ್ದೀರಾ? ಇಲ್ಲ. ಅಂತಹವರಿಂದ ಅನ್ಯಾಯ ಆಗುತ್ತದೆಯೇ ಹೊರತು ಅಂತಹವರಿಗೆ ಅನ್ಯಾಯ ಆಗೋಲ್ಲ ಎಂದು ಉಡಾಫೆ ಹೊಡೆಯಬೇಡಿ. ಅವರು ಬೀದಿಗಿಳಿಯದಿರಲು ಕಾರಣ-ಚಳವಳಿಗಳೇ ವ್ಯರ್ಥ!

ನಮ್ಮ ಪೊಲೀಸಿನವರನ್ನು ಮೆಚ್ಚಬೇಕು. ನಾರಾಯಣಮೂರ್ತಿ ಪ್ರಸಂಗದ ಸಂಪೂರ್ಣ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರಂತೆ. ಏನು ಮೇಧಾವಿಗಳು ಅಂತೀರಿ. ಯಾವ್ರೋ ತರಲೆಗಳು 'ರಾಷ್ಟ್ರಗೀತೆಗೆ ಅವಮಾನ' 'ಚಳವಳಿಗಾರರಿಗೆ

. "ಅಯ್ಯೋ ಅದೊಂದು ದೃಷ್ಟ ಕತೆ. ನಮ್ಮಪ್ಪನ ತಿತಿಗೆ ಳೀಸಂದ್ರದ ಮೇಸ್ತ್ರು ಅಕ್ಕಿ ಕೊಟ್ಟದ್ರು. ಕಡಿಗೂ ನವುರಿಗೆ ಅಕ್ಕಿ ಕೊಡಕ್ಯಾಗಲೇಯಿಲ್ಲ, ಯಾವ ಸೂಳೆಮಗ ಾಡಿದ್ನಪ್ಪ ಈ ತಿತಿ ಮಾಡದ" ಎಂದ.

"ಅದು ಹಿಂಗೆ ಕಂಡ್ರ ಚಿಕ್ಕ. ಆ ಕಾಲದಲ್ಲಿ ಬೇಕಾದಂಗೆ ್ಳಿತಿದ್ರು. ಜನಸಂಕೆನೂ ಈಗಿನಂಗಿರಲಿಲ್ಲ. ಸತ್ತೋನು ಾದ ಹ್ಯಗ್ಗಾಳವಾಗಿ ಬ್ಯಳದು ಸತ್ತೋನೆಯ. ಅಂಗಾಗಿ ನ ಸೇರಿಸಿ ಅನ್ನ ಹಾಕಿ ಕಳಸೋರು. ಅದು ಮನೆಹಾಳು ಾಡಿಕಳೋ ಮಟ್ಟಕೋಯ್ತದೆ ಅಂತ ಅವುರಿಗೇನು ೂತ್ತೂ? ಈಗ್ಲು ಇದ್ದೋರು ಮಾಡ್ತರೆ, ಇಲ್ದೋರು ್ಬುಬಳ್ಳಿ ಕರದು ಸಣ್ಣದಾಗಿ ಮಾಡಿಕತ್ತರೆ. ಅಂಗೂ ಾಡಲಿಲ್ಲ ಅಂದ್ರೆ ಮನುಸ ಹುಟ್ಟಬಾಳಿ ಬದುಕಿದ್ದೆ ಾರ್ಥಕೇನೂ?" ಎಂದ ಕಾಳಮಾವ.

"ಅಂಗರೆ ತಿಥಿ ಮಾಡಿದ್ರೆ ಸಾರ್ಥಕ ಅನ್ನು?"

"ನಿಮಿಗ್ಯಾರೇಳ್ತರೆ ಹೋಗಿರ್ಲಿ."

"ತೇಜಸವಿ ಸಬಕೆ ಕುಮಾರಸ್ವಾಮಿ ಹೋಗಲಿಲ್ಲವಂತೆ, ಜವುಲ?" ಎಂದ ಸೀರ.

"ಹೋಗಿದ್ನಂತೆ ಕಣಮಾವ" ಎಂದಳು ಜುಮ್ಮಿ.

"ಯಾರೆ ಹೇಳಿದೋರು?" ಎಂದ ಉಗ್ರಿ.

"ತಿ.ವಿ.ಲೆ ಅಂಗಂದ್ರು, ಎಡೂರಪ್ಪ ಕುಮಾರಸ್ವಾಮಿ ಕಾಸಯಲ್ಲ ಇದ್ರು ಅಂಥವ."

"ಆ ಟ.ವಿ ಸೂಳೆಮಕ್ಕಳಂಗೆ ಸದ್ದಿಕೆ ಯಾರೂ ಳ್ಳೇಳತಯಿಲ್ಲ ಕಂಡ್ರೊ. ಎಂ.ಪಿ. ಪ್ರಕಾಶ್ ಹಡಗಲಿಲಿದ್ರು. ಮಾರಸ್ವಾಮಿ ಮಂಗಳೂರಲ್ಲಿದ್ದ."

"ಮಂಗಳೂರಿಗ್ಯಾಕೋಗಿದ್ದಾ ಅವ್ನೂ?"

"ಮಾಟಮಂತ್ರ ಮಾಡಕ್ಕಂತೇ."

"ಯಾರು ಮ್ಯಾಲೆ?"

"ಬಜೆಪಿಗಳು ಹೇಳೊ ಪ್ರಕಾರ ಎಡೂರಪ್ಪನ್ನೆ ತಗಿಯಕ್ಕೆ ಾಡಿದ್ದರಂತೆ. ಅದ್ಕೆ ಎಡೂರಪ್ಪ ಹೆದ್ರಿಕಂಡು ಅವುನೂ ಾಡುಸ್ತಯಿದ್ದನಂತೆ."

"ಇವುರಿಬ್ರು ಮಾಟ ಡಿಕ್ಕಿಯಾಗಿ ಬೇರೆ ಯಾರಾರ ೋಗೇ ಹೋಯ್ತರೆ."

"ನೋಡನಿರು."

-ಬಿ. ಚಂದ್ರೇಗೌಡ

ವಮಾನ' ಅಂತ ಕೂಗಾಕ್ತಿದಾರಲ್ಲ, ಈ ವಿಷಯ ಕುರಿತು ಂದು ಅಕ್ಷರಾನೂ ಬರೆದಿಲ್ಲವಂತೆ. ಯಾಕೆ ಅಂದರೆ ದೆಲ್ಲ ನಡೆದಿರೋರು ಪತ್ರಿಕಾಗೋಷ್ಠಿಯಲ್ಲಿ ನಾವು ಅಲ್ಲಿಗೆ ೋಗಿರಲಿಲ್ಲ ಅಂತಾರಂತೆ! ತಲೆ ಕಾಯುವ ಪೊಲೀಸರು ಂದರೆ ಇವರು!

*****

ಉತ್ತರ ಪ್ರದೇಶದಲ್ಲಿ ಚುನಾವಣೆಗಳು ನಡೆಯುತ್ತಿವೆ. ಲ್ಲಿ ಈಗ ಸಿಡಿಗಳ ಭರಾಟೆ.

ಏನನ್ನು ಕುರಿತ ಸಿಡಿಗಳು ಅವು?

ಕೋಮುದ್ವೇಷ ಬಿತ್ತುವ ಸಿಡಿಗಳು!

ಯಾವ ಪಕ್ಷದ ಸಿಡಿಗಳು ಅವು ಎಂಬ ಪ್ರಶ್ನೆ ದ್ಭವಿಸುವುದೇ ಇಲ್ಲ, ಅವೆಲ್ಲ ಭಾರತೀಯ ಜನತಾ ಕ್ಷದ ಸಿಡಿಗಳು ಎಂಬುದು ಅಂಗೈ ಹುಣ್ಣಿನಷ್ಟೇ ಸ್ಪಷ್ಟ!

ಚುನಾವಣಾ ಆಯೋಗಕ್ಕೆ ಇತರೆ ಪಕ್ಷಗಳ ದೂರು. ಯೋಗದಿಂದ ಸಿಡಿ ವೀಕ್ಷಣೆ. ಆಯೋಗದ ಆಕ್ಷೇಪ. ಕ್ಷದ ಮಾನ್ಯತೆ ರದ್ದುಪಡಿಸಲು ಕ್ರಮ.

ಎಚ್ಚರಗೊಂಡಿತು ಭಾಜಪ. ತನ್ನ ಪಕ್ಷದಿಂದ ಅದು ಡುಗಡೆ ಮಾಡೇ ಇಲ್ಲ ಎಂದರು ಪಕ್ಷದ ಸರದಾರರು.

ಹಾಗಾದರೆ ಅವು ಪ್ರಚಾರಕ್ಕೆ ಬಂದದ್ದು ಹೇಗೆ?

ತಮ್ಮ ಪಕ್ಷದ ಮೇಲಿನ ದ್ವೇಷದಿಂದ ಯಾರೋ ಾಡಿದ್ದಾರೆ.

ಆಹಾ! ಎಂತಹ ಅದ್ಭುತ ಉತ್ತರ!

ಸಿಡಿಗಳನ್ನು ಹಿಂತೆಗೆದುಕೊಂಡಿತು ಪಕ್ಷ. ಆದರೆ ಅಲ್ಲಿಗೇ ಲ್ಲಿಸಲಿಲ್ಲ. ಕೋಮು ದ್ವೇಷ ಬೆಳೆಸದಿದ್ದರೆ ತಾನು ಳೆಯುವುದು ಹೇಗೆ?


ಬಿಡುಗಡೆ ಮಾಡಿತು ಕೋಮು ದ್ವೇಷ ಕಾರುವ ಹೀರಾತು! ಅದರ ಶೀರ್ಷಿಕೆ: 'ಕ್ಯಾ ಇನ್ ಕಾ ಇರಾದ ಕ್ ಹೈ' (ಅವರ ಉದ್ದೇಶ ಸ್ಪಷ್ಟ ಆಗಿದೆಯೆ?!)

ಚುನಾವಣಾ ಆಯೋಗ ಇವೆಲ್ಲದರ ಮೇಲೆ ಕ್ರಮ ಗೊಳ್ಳಬಹುದು. ಅದಕ್ಕೆ ಭಾರತೀಯ ಜನತಾ ಪಕ್ಷದವರಿಗೆ ಂದು ಸಲಹೆ. ಅದು ಏನಪ್ಪ ಅಂದರೆ... ಏನಾದರೂ ೕಳಲು ಹೋದರೆ ಕೋಮುದ್ವೇಷ ಅಂತ ಎದುರು ಕ್ಷದವರು, ಚುನಾವಣಾ ಆಯೋಗ ಮೇಲೆ ಬೀಳುತ್ತವೆ. ದರ ಬದಲು ಕೋಮು ದ್ವೇಷದ ಸಂಗತಿಗಳನ್ನು ರಕ್ತಗತ ಾಡಿಕೊಂಡಿರುವ ಕನ್ನಡದ ಕಾದಂಬರಿಕಾರ ಎಸ್.ಎಲ್. ರಪ್ಪ, ಅವರ 'ಆವರಣ' ಕಾದಂಬರಿಯನ್ನು ಹಿಂದಿಗೆ ಷಾಂತರಿಸಿ ಹಂಚಿಸಬಹುದು. ಸಂಶೋಧಿತ ಸಾಂಸ್ಕೃತಿಕ ಕೃ ಹೆಸರಿನಲ್ಲಿ ಕೋಮುದ್ವೇಷವನ್ನು ಯಶಸ್ವಿಯಾಗಿ ತ್ತಬಹುದಲ್ಲಾ...

-ಎಚ್.ಎಲ್. ಕೇಶವಮೂರ್ತಿ



ಮರೆಯುವ ಮುನ್ನ



■ಪಿ. ಲಂಕೇಶ್ -ನವೆಂಬರ್ 13, 1988

ಅಲೆವ ಮನ

ನನ್ನೆದುರು ಒಂದು ಆತ್ಮಚರಿತ್ರೆ ಇದೆ. ಇದನ್ನು ಓದುತ್ತಿದ್ದಂತೆ ಅನೇಕರ ಒತ್ತಾಯಕ್ಕೆ ಮಣಿದು ನಾನು ಯಾಕೆ ಆತ್ಮಚರಿತ್ರೆ ಬರೆದುಬಿಡಬಾರದು ಅನ್ನಿಸುತ್ತದೆ. ಇಲ್ಲ, ಸದ್ಯಕ್ಕೆ ಬೇಡ. ನಾನೂ ನಿವೃತ್ತನಾದೊಡನೆ ಬರೆಯುವೆ. ಧ್ಯಾನಿಸಿ, ನೆನೆದುಕೊಂಡು, ಮುಪ್ಪಿನ ಕೈ ನಿಧಾನಕ್ಕೆ ಚಲಿಸುತ್ತಿದ್ದಾಗ... ಆದರೆ ನನಗೆ ಯಾವುದರಿಂದ ನಿವೃತ್ತಿ? ಈ ಪ್ರಶ್ನೆಗೆ ಉತ್ತರವೇ ಇಲ್ಲ.

ನನ್ನೆದುರಿರುವುದು ಕಮಲಾದಾಸ್ ಬರೆದ ಆತ್ಮಚರಿತ್ರೆ. ಕವಯಿತ್ರಿ ಈಕೆ, ಒಮ್ಮೆ ನೊಬೆಲ್ ಬಹುಮಾನಕ್ಕೆ ಹೆಸರಿಸಲ್ಪಟ್ಟವಳು. ಪದ್ಯಗಳು ಚೆನ್ನಾಗಿದ್ದರೂ ಅಷ್ಟು ಶ್ರೇಷ್ಠ ಪದ್ಯಗಳಲ್ಲ; ಈಕೆಯ ವ್ಯಕ್ತಿತ್ವ ಕೂಡ ನನಗೆ ಅಷ್ಟು ಇಷ್ಟವಿಲ್ಲ.

ತಾನು ವ್ಯಭಿಚಾರ ಮಾಡಿದ್ದು, ತನ್ನ ಅನೇಕ ಪ್ರಿಯಕರರು, ತನ್ನ ಹೃದ್ರೋಗ, ಮನವೆಂಬ ಮರ್ಕಟದ ಲೀಲೆಗಳು, ಎಲ್ಲವನ್ನೂ ಬರೆಯುತ್ತಾಳೆ ಕಮಲಾದಾಸ್. ಆದರೆ ಈಕೆಯ ರಂಜಕ ನಿರೂಪಣೆಯಲ್ಲಿ ಎಷ್ಟು ನಿಜ,ಎಷ್ಟು ಕಾಲ್ಪನಿಕ ಸಾಹಸಗಳು- ಎಂಬ ಅನುಮಾನ ಉಳಿದೇ ಉಳಿಯುತ್ತದೆ. ಯಾಕೆಂದರೆ ಆತ್ಮಚರಿತ್ರೆ ಬರೆಯುವುದು ತುಂಬ ಕಷ್ಟ, ಯಾಕೆ ಗೊತ್ತೆ? ನಾವು ತುಂಬ ವೇಳೆಯನ್ನು ಕಳೆದಿರುತ್ತೇವೆ- ನಮ್ಮೊಂದಿಗೆ; ಬೇರೆಯವರೆಲ್ಲ ರೂಪು ಪಡೆಯುವುದು ಈ ಅಂತರಂಗದ ಕಲಾಶಾಲೆಯಲ್ಲಿ, ಕನಸು, ನೋವುಗಳೆಲ್ಲ ನಮ್ಮೊಂದಿಗೇ, ಹೀಗಾಗಿ ನಮ್ಮ ಬಗ್ಗೆ ನಾವು ಖಚಿತ, ಸತ್ಯವಂತ ನಿಲುವು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ.

ಅಲ್ಲದೆ ಪ್ರತಿಯೊಂದು ಮಾತನ್ನೂ ಮೆಚ್ಚಿಸಲು ಬರೆಯುವವರು ನನಗಿಷ್ಟವಿಲ್ಲ; ಬೆಚ್ಚಿಬೀಳಿಸಲು, ರಂಜಿಸಲು, ತಲೆದೂಗಿಸಲು ಬರೆಯುತ್ತ ಹೋಗಬಾರದು. ಕಮಲಾದಾಸ್ ಈ ತರಹದ ಪ್ರದರ್ಶನಗಾರ್ತಿ ಕೂಡ.

ಆಗದವರು

ಚಿತ್ರದುರ್ಗದಲ್ಲಿ ಒಬ್ಬ ಹುಡುಗ ಕೇಳಿದ, "ಸರ್, ನಿಮಗಿರುವ ಶತ್ರುಗಳು ಎಷ್ಟು ಜನ ಅಂತ ಗೊತ್ತಾ?" ಅಂದ. ಈತ ತುಂಬ ಪ್ರೀತಿಯ, ಅಭಿಮಾನದ ಹುಡುಗ.

ಆತನ ಪ್ರಶ್ನೆಗೆ "ನಿನಗೆ ಗೊತ್ತಿದ್ದರೆ ಹೇಳು" ಅಂದೆ.

"ಜಗದ್ಗುರುಗಳು, ಜಾತಿವಾದಿಗಳು, ಮೂಢನಂಬಿಕೆಯವರು... ಖದೀಮರು..." ಅಂದ.

ನಾನು ಗಹಗಹಿಸಿ ನಕ್ಕೆ. "ನಿನ್ನ ಪಟ್ಟಿ ತೀರಾ ಚಿಕ್ಕದು. ಆ ಪಟ್ಟಿಯಲ್ಲಿ ಧರ್ಮಸ್ಥಳದ ಹೆಗ್ಗಡೆ, ತಿರುಪತಿಯ ವೆಂಕಟೇಶ, ನಮ್ಮನ್ನು ಕಂಡರಾಗದ ಪತ್ರಕರ್ತರು, ತಾವು ಬುದ್ಧಿಜೀವಿಗಳೆಂದು ತಿಳಿದವರು, ಕಾಂಗೈಗಳು, ಜನತಾದವರು, ಚೆಡ್ಡಿಗಳು..." ಅಂದೆ.

"ಇಷ್ಟೊಂದು ಜನ ಶತ್ರುಗಳ ವಿರುದ್ಧ ರಾಜಕೀಯ ಸಾಧ್ಯವೆ?" ಅಂದ.

"ಇವರೆಲ್ಲ ಸೇರಿದರೆ ಐವತ್ತು ಸಾವಿರ ಜನರಾಗಬಹುದು. ಇವರಿಂದಲೇ ನನ್ನ ಛಲ ಉಗ್ರವಾಗುವುದು. ಕರ್ನಾಟಕದ ಜನಸಂಖ್ಯೆ ಎಷ್ಟು ಗೊತ್ತಲ್ಲ? ನಾಲ್ಕು ಕೋಟಿ ಜನರಲ್ಲಿ ಈ ಐವತ್ತು ಸಾರಿರ ಕಳೆದುನೋಡು" ಅಂದೆ.

ಮದ್ಯದ ರಾಕ್ಷಸರು

ಹಿರಿಯೂರಿಗೆ ಇನ್ನೊಂದು ಮುಖವಿದೆ. ಹಿರಿಯೂರಿನ ಪಕ್ಕದ ಮೂರು ಹಳ್ಳಿಯ ಜನ ನನಗೆ 'ಸಾರ್, ಒಂದು ತಮಾಷೆ ತೋರಿಸ್ತೇವೆ, ದಯವಿಟ್ಟು ಬನ್ನಿ' ಅಂದರು.

ಹಿರಿಯೂರಿನಲ್ಲಿ ಒಂದು ಸಾರಾಯಿ ಕಾರ್ಖಾನೆ ಇದೆ. ಇದು ಸರ್ಕಾರಕ್ಕೆ ಮುಖ್ಯ ಚೈತನ್ಯಕುಮಾರರ ಏಜೆಂಟರ ಬಾಟ್ಲಿಂಗ್ ಕಾರ್ಖಾನೆ ಇರುವುದು ಇಲ್ಲಿಯೇ. ಸಾರಾಯಿ ಕಾರ್ಖಾನೆಯಿಂದ ರಾಸಾಯನಿಕಗಳು ಹರಿದು ಮೂರು ದೊಡ್ಡ ಕೆರೆಯಲ್ಲಿ ನಿಲ್ಲುತ್ತದೆ. ಇದು ವಿಷದಂತೆ. ಈ ವಿಷವನ್ನು ನೋಡುತ್ತಿದ್ದಂತೆ ವಾಸನೆಗೆ ಮೂಗು ಉರಿಯತೊಡಗಿತು. ವಾಕರಿಕೆ ಬಂದಂತಾಯಿತು. ಅಲ್ಲಿಂದ ಅರ್ಧ ಮೈಲಿ ದೂರದ ತೋಟಕ್ಕೆ ಹೋದೆವು. ಅಲ್ಲಿ ಬಾವಿ. ಅದರಿಂದ ಕೆರೆಗಳಲ್ಲಿಯ ರಾಸಾಯನಿಕ ಜಿನುಗಿ ನೀರು ಪೂರ್ತಿ ಗಬ್ಬಾಗಿದೆ; ವಿಷ ಒಸರುತ್ತಿದೆ. ಸರ್ಕಾರಿ ತೆಂಗಿನ ತೋಟದಲ್ಲಿ ಐದು ಸಾವಿರ ಮರಗಳಿವೆ; ಅಲ್ಲಿಗೆ ರಾಸಾಯನಿಕ ನುಗ್ಗುತ್ತಿದೆ. ಸದ್ಯದಲ್ಲೇ ಬೆಳೆದು ಫಲಕ್ಕೆ ಬಂದ ಈ ಮರಗಳೆಲ್ಲ ನಾಶವಾಗಲಿವೆ. ಹಿರಿಯೂರಿನ ಹತ್ತಿರದ ಮೂರು ಹಳ್ಳಿಗಳ ಐನೂರು ಎಕರೆ ಭೂಮಿಯಲ್ಲಿ ಎಲ್ಲಿ ಗುಂಡಿ ತೋಡಿದರೂ ರಾಸಾಯನಿಕ ವಿಷ ಕುಡಿಯಲು ನೀರನ್ನು ದೂರದಿಂದ ತರುತ್ತಿದ್ದಾರೆ.

ಸಾರಾಯಿ ಕಾರ್ಖಾನೆಯ ವಿರುದ್ಧದ ಹೋರಾಟ ಫಲ ನೀಡಿಲ್ಲ, ಸರ್ಕಾರಕ್ಕೆ ಈ ಕಾರ್ಖಾನೆ, ಅದರ ಮಾಲೀಕರು ಬೇಕು. ಚುನಾವಣೆ ಬೇರೆ ಹತ್ತಿರ ಬರುತ್ತಿದೆ. ಜನ ಏನು ಮಾಡಬೇಕು? ಇಂಥ ರಾಕ್ಷಸರ ಸರ್ಕಾರ, ರಾಕ್ಷಸರ ಕಾರ್ಖಾನೆಗೆ ಏನು ಮಾಡಬೇಕು?

ಹೇಗೆ ಆರಂಭಿಸಲಿ?

ಅಂದು ಭಾನುವಾರ. ದಾವಣಗೆರೆಯಲ್ಲಿ ಭಾಷಣ. ಸುಮಾರು ಹತ್ತು ವರ್ಷಗಳ ಬಳಿಕ ಭಾಷಣಕ್ಕಾಗಿ ದಾವಣಗೆರೆಗೆ ಬಂದಿದ್ದೆ. ಇಡೀ ಊರಿನ ತರುಣರು ಬಂದಂತಿತ್ತು-ಶಿಸ್ತಿನಿಂದ, ಕಾತರದಿಂದ, ಅಪಾರ ನಿರೀಕ್ಷೆಯಿಂದ ಬಂದ ಸಹಸ್ರಾರು ಜನ. ನೂರಾರು ತರುಣರು, ಅಧ್ಯಾಪಕರು 'ಪ್ರಗತಿ ರಂಗ'ದ ಸಭೆ ಏರ್ಪಡಿಸಿದ್ದರು. ನಮ್ಮ ರಾಮದಾಸ್, ಷಣ್ಮುಖ, ಎರ್ರಿಸ್ವಾಮಿ ಮಾತಾಡಿದರು. ಕತ್ತಲು ಕವಿಯುತ್ತಿದ್ದಂತೆ ವಿದ್ಯುತ್ ಹೋಯಿತು. ಚಿತ್ರದುರ್ಗದಂತೆ ಇಡೀ ಮೈದಾನ ಕತ್ತಲಾಗಲಿಲ್ಲ, ಬ್ಯಾಟರಿ ಸಹಾಯದಿಂದ ಧ್ವನಿವರ್ಧಕದಲ್ಲಿ ಸಭೆ ಮುಂದುವರಿಸಿದೆವು. ನನ್ನದೊಂದು ಗೋಳಿದೆ. ಹೇಳಿದ್ದೇ ಮತ್ತೆ ಹೇಳುವುದು ಕಷ್ಟ; ಸ್ವಲ್ಪವಾದರೂ ಬದಲಾಗಬೇಕು, ವಸ್ತು ಬೇರೆ ಮಾತಿನಲ್ಲಾದರೂ ಬರಬೇಕು. ಹೇಗೆ ಭಾಷಣ ಶುರು ಮಾಡುವುದೆಂದು ಚಿಂತಿಸಿದೆ.

ಅದು ಸುಲಭವಾಗಿತ್ತು. ಅವತ್ತು ಮಧ್ಯಾಹ್ನ ಹಿರಿಯೂರಿನಲ್ಲಿ ಮಾತಾಡಿದ್ದೆ. ಮಾತಾಡಿದ್ದಕ್ಕಿಂತ ಮುಂಚೆ ಹಿರಿಯೂರಿನ ಸಭೆಯನ್ನು ನಮ್ಮ ಹುಡುಗರು ಸಂಘಟಿಸಿದ್ದು ನನ್ನ ಮನಸ್ಸಿನಲ್ಲಿತ್ತು. ಅವರಲ್ಲಿ ದುಡ್ಡಿರಲಿಲ್ಲ, ತೀರಾ ಬಡ ಹುಡುಗರು, ವಿವಿಧ ಜಾತಿಗೆ ಸೇರಿದವರು. ದುಡ್ಡಿಲ್ಲದೆ ಹೇಗೆ ಸಭೆ ನಡೆಸಲು ಸಾಧ್ಯ?

ಯಾವುದೇ ಸಂಘಟನೆಯಲ್ಲಿ ಹೃದಯ ಸಂವಾದ ಮುಖ್ಯ. ವಿವರಿಸುವುದಕ್ಕೆ ಮುಂಚೆಯೇ ನಿಮ್ಮ ಕಾರ್ಯಕರ್ತರಿಗೆ ಮತ್ತು ಜನಕ್ಕೆ ನಿಮ್ಮ ಉದ್ದೇಶ ಅರ್ಥವಾಗಬೇಕು-ಅದು ಹೃದಯ ಸಂವಾದ, ಅದೃಶ್ಯ ಸೇತುವೆ. ನಮ್ಮ ಹಿರಿಯೂರಿನ ಹುಡುಗರಿಗೆ ಗೊತ್ತಿತ್ತು-ಯಾವ ಶ್ರೀಮಂತನಿಂದಲೂ ಹಣ ಇಸಿದು ಕೊಳ್ಳಕೂಡದು. ಇದನ್ನರಿಯದ ಸ್ಥಳೀಯ ರಾಜಕೀಯ ನಾಯಕರು ಕಾರ್ಯಕರ್ತರನ್ನು ಕರೆದು, "ನಾನು ಅಧ್ಯಕ್ಷತೆ ವಹಿಸ್ತೇನೆ-ಮೈಕಿನ ಖರ್ಚು ಕೊಡುತ್ತೇನೆ", "ನಾನು ಕರಪತ್ರದ ಖರ್ಚು ನೋಡ್ಕೊತ್ತೇನೆ. ಭಾಷಣ ಮಾಡ್ತೇನೆ" ಅಂದರು. ಹುಡುಗರು, 'ಸಹಾಯಬೇಕಾದರೆ ನಿಮ್ಮನ್ನು ಕೇಳ್ತೇವೆ' ಎಂದು ಹೇಳಿ ಮೂವತ್ತು ಜನ ಸೇರಿ ತಲಾ ಮೂರು ರೂಪಾಯಿ ಹಾಕಿಕೊಂಡರು. ತೊಂಭತ್ತಾಯಿತು. 'ಮೇಷ್ಟ್ರಿಗೆ ಹಾರ ಇಷ್ಟವಿಲ್ಲ' ಎಂದು ಹಾರ ತರಲಿಲ್ಲ. ಮೂವತ್ತು ರೂಪಾಯಿಗೆ ಧ್ವನಿವರ್ಧಕ, ನಲವತ್ತಕ್ಕೆ ಕರಪತ್ರ ಮಾಡಿಸಿದರು. ಸರಳ ಊಟ ಏರ್ಪಡಿಸಿದರು. ಇದನ್ನೆಲ್ಲ ಬೇರೆಯವರಿಂದ ಕೇಳಿ ನಾನು ಮಂತ್ರಮುಗ್ಧನಾದೆ.

ಛೀ..... ಅನ್ಯಾಯ!?

ಬೆವರ ದೊರೆಗಳ ಮೂಳೆ ಮ್ಯಾಲೆ
ಅರಮನೆ ಕಟ್ಸಿರೋ
ಈ ಮೇಲ್ಜಾತಿ ಮನುಸ್ಸಾರೋ?
ಮಲಗೋಕೆ ಮಾತ್ರ
ಗುಡಿಸ್ಲೇ ಆಗಬೇಕು.

ಒಂಟಿ ಹೆಂಗ್ಸರ ಹಣಿ ಮ್ಯಾಲೆ
ದಲಿತರ ಚಹರೆ ಇದ್ರ ಸಾಕು
ಗೂಳಿ ನುಗ್ಗಾದ್ಹಂಗೆ ನುಗ್ತಾವ್ರೆ.


ಬೀದೀಲಿ ಚೆಡ್ಡಿ ಬಿಚ್ಕೋ
ಈ ಕಾಮುಕರ ಎದಿ ಮ್ಯಾಲೆ ಭಾರತಾಂಬೆ
ಬೆನ್ನೇಲಿ ಜನೀವಾರ
ಕಾವ್ಲ ಕಾಯ್ತ ಕುಂತಿರುತ್ವೆ
ಮೊಲೆ ಮುದುಡಿ
ತೊಡೆ ಬತ್ತಿ
ಉಸ್ರು ಹಾರೋದ್ ಮ್ಯಾಲೆ
ನಿಮ್ಮ ಎಮ್ಮೆಲ್ಲೆ (mla) ಬಂದು
ಹೆಣದ ಜೊತೆ ಹೆಂಡ್ರಾಟ ಆಡ್ತಾವ್ನೆ

ಎಲ್ಲಾ ಮುಗ್ದೊದ್ಮೇಲೆ ಬರೋ
ಖಾಕಿ ನಾಯ್ಗಳು -
ದೊಡ್ಡೋರು ? ತಿಂದ್ಬುಟ್ಟು ಹೋದ
ಮೂಳೆ ಕಡೀತಾ ಕೂರ್ತಾವೆ.
ಎದಿಯಾಗ ದೀಪ ಹಚ್ಕೊಂಡು
ಸಾಕ್ಷಿಗಳ್ಗೆ ಕಾಯೋ
ಕಣ್ಗಳು ಸುಟ್ಟು ಕರುಕ್ಲಾಗ್ಯಾವೆ.

ಹೆಣಗಳು ಎದ್ಬಂದು ಹೇಳ್ಲಿಲ್ಲ
ಸೀರೆ ಬಿಚ್ಚಿದ ಸುವರ್ಗಳು
ತಪ್ಪು ಒಪ್ಕೋಳಲ್ಲ
ಅಲ್ಲಿವರ್ಗೂ
ನಮ್ಮ ಕೋರ್ಟುಗಳು ತೀರ್ಪು ಕೊಡಲ್ಲ

ದ್ಯಾವ್ರ ಗೂಡ್ನಾಗಿಟ್ಟ ರೇಡಿಯೋ-
ಮಾತಾಡುತ್ತೇ
ಖೈರ್‌ಲಾಂಜಿ ಕೇಸಿಗೂ ಖುಲಾಸೆಯೇ ಗತಿ!?

ಇಷ್ಟೆಲ್ಲಾ ಆದ್ಮೇಲೂ
ಸುಮ್ನೆ ಕುಂತ್ರೆಯಂಗಣ್ಣಾ
ನಿಮ್ಮ ಹೆಂಡ್ರ ಸೀರೆ ಬಿಚ್ಚಿದ ಕೈಗಳ್ನ
ಆರ್ಡರ್..... ಆರ್ಡರ್
ಸುತ್ತಿಗೆ ತಕ್ಕೊಂಡು ಚಚ್ಚರಣ್ಣ.



● ಕೈದಾಳ್ ಕೃಷ್ಣಮೂರ್ತಿ

ಬಿಜೆಪಿಯದು ಆಚಾರವಾದ್ರೆ ಜೆಡಿಎಸ್‌ದು?

ಕಣ್ಣಾ ಮುಚ್ಚಾಲೆ

[illegible], ಬೆಂಗಳೂರು
ಶ್ರೀರಾಮುಲು ರಾಜೀನಾಮೆ ನೀಡಿ ವಾಪಸ್ ಪಡೆದರೆ, ಅಂಬರೀಶ್?
◆ ಸ್ವತಃ ಅಂಬಿಗೇ ಗೊತ್ತಿಲ್ಲ, ಇನ್ನು ನಮ್ಮನ್ನ ಕೇಳ್ತೀರಲ್ರೀ!

ಎಚ್.ಕೆ. ಭಾಗ್ಯಕುಮಾರ್, ಬೆಂಗಳೂರು
ನಮ್ಮ ಕ್ರಿಕೆಟ್ಟಿಗರು 'net practice'ಗಿಂತ, 'net profit' ಗೇ ಹೆಚ್ಚು ಒತ್ತು ಕೊಡುತ್ತಾರಲ್ಲ?
◆ ಇದರಿಂದ '*net loss*' ಏನು ಅಂತ ಜನಕ್ಕೆ ಗೊತ್ತಾಗಿದೆ ಬಿಡ್ರಿ.

ತುರಗಲ್ಲ ಉಮೇಶ, ಸಾಲಹಳ್ಳಿ
ರಾಧಿಕಾ ಗೌಡರ ಸೊಸೆಯಾದರೆ ಜನರಿಗೇಕೆ ಹೊಟ್ಟೆಕಿಚ್ಚು?
◆ ಮುದ್ದೆ, ಸೊಪ್ಪು, ಸಾರು ಜೊತೆ ಚಿಕನ್ ಕಬಾಬು ಸವಿಯೋ ಯೋಗ ಎಲ್ಲರಿಗೂ ಸಿಗಲ್ಲವಲ್ಲಾ!

ಎಂ. ನಿಸರ್ಗ, ದಾವಣಗೆರೆ
ರವಿಶಂಕರ್ ಗುರೂಜಿಗೆ ಭದ್ರಾ ಜಲಾಶಯದ ಬಳಿ 'ಜ್ಞಾನೋ'ದಯ ಆಯ್ತಂತಲ್ಲ?
◆ ಅದು ಕನಕಪುರ ರಸ್ತೆಯಲ್ಲಿ ಅಜ್ಞಾನದ ಅಗ್ರಹಾರವಾಗಿ ಬೆಳೆದಿದೆಯಲ್ಲಾ?!

ಪಿ.ಎನ್. ಶ್ರೀವತ್ಸ, ಬೆಂಗಳೂರು
ಮುಂದೊಂದು ದಿನ 'ಲಂಕೇಶ್' ಹಾಗೂ 'ಲಂಕೇಶ್ ಪತ್ರಿಕೆ' ಒಂದೇ ಆಗುತ್ತವೆಂದು ಆಶಿಸಬಹುದೇ....?
◆ ಆಶೆಯೇ ನಿರಾಶೆಗಳಿಗೆ ಮೂಲ ಕಂದಾ....

ಅಳ್ಳಿಮಾರನಹಳ್ಳಿ ಹರೀಶ್, ಕನಕಪುರ
ಯಡ್ಡಿ ಬಜೆಟ್‌ನಲ್ಲಿ 'ಚೆಡ್ಡಿ'ಗೇ ರಿಯಾಯಿತಿ ಇಲ್ವಲ್ಲಾ?
◆ ಆದರೆ ಕೌಪಿನ ಸ್ವಾಮಿಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಕೊಟ್ಟಿದ್ದಾರಲ್ಲಾ.

ಒದುಸಿದ್ದೇಗೌಡ ಕೆಬ್ಬೇಹಳ್ಳಿ, ಕನಕಪುರ
ಸಾನಿಯಾ ಜೊತೆ ಹೋದ್ರೆ ಹಿಂದೂ ಸೇನೆಯವರು ಹಿಂದೇನೇ ಬರ್ತಾರಲ್ಲಾ?
◆ ಹುಷಾರ್, ಅವರ ಜೊತೆ ರವಿ ಬೆಳಗೆರೆನೂ ಇರಬಹುದು!

ಎಂ. ಮುಕ್ರಂಪಾಷ, ಕೊಳ್ಳೆಗಾಲ
ನಮ್ಮ ಸಿ.ಎಂ. ಇದ್ದಕ್ಕಿದ್ದ-ಹಾಗೆ ಮಾಯವಾಗ್ತಾರಲ್ಲಾ?
◆ ಕರಾವಳಿಯ ಗುಡಿ-ಕುಡಿಗಳ ಪ್ರಭಾವ!

ಟಿ.ಯು. ಕುಮಾರ, ರಾಮದುರ್ಗ
ಜಯಲಲಿತಾ ಕರ್ನಾಟಕ ಮುಖ್ಯಮಂತ್ರಿಯಾದರೆ ಶೋಭಾಳಿಗೆ ಹೊಂದಾಣಿಕೆ ಆದೀತೆ?
◆ ಹಾಗೆ ನೋಡಿದ್ರೆ ಯಡ್ಡಿ ಮತ್ತು ಶಶಿಕಲಾನೇ 'ಪೇರ್' ಮಾಡ್ತಿರಿ ನೀವು!

ಕಾಳೀಹುಂಡಿ ಶಿವಕುಮಾರ್, ಮೈಸೂರು
'ಶತಾಯುಷಿ'ಯಾಗಬೇಕಾದರೆ ಏನು ಮಾಡಬೇಕು?
◆ ನೂರು ವರ್ಷ ಬದುಕಬೇಕು!

ಬಸವರಾಜ ಹೂಗಾರ್, ಸವದತ್ತಿ
ಕುಮಾರಸ್ವಾಮಿಗೆ ಅರಮನೆ ಇದ್ದರೂ ನೆರೆಮನೆ ಮೇಲೇಕೆ ಕಣ್ಣು?
◆ ನೆರೆಮನೆಯವಳಿದ್ದರೆ ಅವರಿಗೆ ಅದೇ ಹನ್ನೆರಡು ಕೋಟಿ ರೂಪಾಯಿ ಅಂತೆ!

ಕವಿತಾ ಮಧುಸೂದನ್, ದಾವಣಗೆರೆ
ಜೆ.ಎಚ್. ಪಟೇಲರಿಗೆ ಹೆಣ್ಣು ಹೆಂಡದ 'ವೀಕ್‌ನೆಸ್' ಇತ್ತು, ಕುಮಾರಸ್ವಾಮಿಗೆ?
◆ ಅಪ್ಪ, ಅಣ್ಣ, ಅನಿತಾ, ಅನೀಲು, ನಿಖಿಲ್ಲು, ರಾಧಿಕಾ... ಪಟ್ಟಿ ತುಂಬಾ ದೊಡ್ಡದು....



ಬಹುಮಾನಿತ ಪ್ರಶ್ನೆ

ರಾಂಚಂದ್ರ ಕೊಪ್ಪಲು, ಶಿವಮೊಗ್ಗ
ಬಿಜೆಪಿಯದು ಆಚಾರವಾದ್ರೆ, ಜೆಡಿಎಸ್‌ದು?
◆ ಬಿಜೆಪಿಯದ್ದು ಅನಾಚಾರ, ಇವರದ್ದು ವಾಮಾಚಾರ!

ಡಿ.ಎಲ್. ಶ್ವೇತ, ಹರಪನಹಳ್ಳಿ
'ಗೌರಿ ಲಂಕೇಶ್‌ರಿಂದ ಬೋಧನೆ, ಪ್ರಚೋದನೆ ಇದೆ, ರಂಜನೆ ಎಲ್ಲಿದೆ?'
◆ ರೋದನೆ ಇಲ್ಲವಲ್ಲಾ, ಅದೇ ನಿಮ್ಮ ಪುಣ್ಯ!

ಎ.ಎನ್. ಸ್ವಾಮಿ, ಶೋರಾಪೂರ
ಹುಡ್ಗೀರ ಸೌಂದರ್ಯ ಹೊಗಳಿ ಕವಿತೆ ಬರೆದರೆ ಅವರು ಒಲಿಯುತ್ತಾರಂತೆ?
◆ ನುಲಿಯುತ್ತಾರೆ ಎಂಬುದಂತೂ ಗೊತ್ತು!

ವಾರದ ಪ್ರಶ್ನೆ:
ಇನ್ಫೋಸಿಸ್ ನಾಣಿ ಪ್ರಕಾರ ದೇಶಭಕ್ತಿ ಅಂದರೇನು?

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಏಪ್ರಿಲ್ 14ರ ಸಂಚಿಕೆಯ ನಮ್ಮ ಪ್ರಶ್ನೆ: ಪೂರ್ಣಚಂದ್ರ ಅಸ್ತಮಿಸಿದ ನಂತರ ಮುಂದೇನು?
ನಿಮ್ಮ ಉತ್ತರ: ಅಮಾವಾಸ್ಯೆ ನಂತರ ಹುಣ್ಣಿಮೆ ಬಂದೇ ಬರುತ್ತೆ ಎಂಬ ಆಶಯ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕುಮಾರಸ್ವಾಮಿ, ಕನಕಪುರ

ಮರೆಯಾದ ಪೂರ್ಣಚಂದ್ರ: ಒತ್ತಿ ಬರುವ ನೆನಪುಗಳು

ಹೊಗಳಿಕೆ ತೆಗಳಿಕೆ

1983 ರಲ್ಲಿ ನಾನು ಬಿಎಸ್ಸಿ ಓದುವಾಗ 'ಕರ್ವಾಲೋ' ನಮಗೆ ಪಠ್ಯವಾಗಿತ್ತು, ಅದನ್ನು ಓದಿದ ಮೇಲೆ ನಾನು ಅವರ ಎಲ್ಲಾ ಪುಸ್ತಕಗಳನ್ನು ಓದುತ್ತಾ ಬಂದೆ. ನನ್ನ ಅಚ್ಚುಮೆಚ್ಚಿನ ಲೇಖಕರಾದರು. ಬಹುತೇಕ ಎಲ್ಲಾ ಕಥೆಗಳಲ್ಲೂ ನವಿರಾದ ಹಾಸ್ಯವನ್ನು ಸೇರಿಸಿ ರಂಜಿಸುತ್ತಿದ್ದರು.

ಅವರ 'ಜುಗಾರಿಕ್ರಾಸ್' ಕತೆಯನ್ನು ಸಿನಿಮಾ ಮಾಡುತ್ತಾರೆಂದು ತಿಳಿದಾಗ ನಾನು ಅವರಿಗೊಂದು ಪತ್ರ ಬರೆದಿದ್ದೆ, ಅದಕ್ಕೆ ಅವರು ಮರುಪತ್ರವನ್ನು ಬರೆದಿದ್ದರು. ಅದು ನನ್ನ ಬಳಿ ಇದೆ. ಆಮೇಲೆ ನಾನು ಅವರ ಭೇಟಿ ಮಾಡಲು ಅನುಮತಿ ಕೋರಿ ಪತ್ರ ಬರೆದೆ. ಒಪ್ಪಿದ್ದರೂ ಕೂಡ ಅನಿವಾರ್ಯ ಕಾರಣಗಳಿಂದ ಅವರನ್ನು ಭೇಟಿ ಮಾಡಲು ಸಾಧ್ಯವಾಗಲೇ ಇಲ್ಲ.

ಕೊನೆಗೆ ಅಂತಿಮ ದರ್ಶನವನ್ನಾದರೂ ಪಡೆಯಬೇಕೆಂದು ಕುಪ್ಪಳ್ಳಿಗೆ ಹೋದೆ. ಶುಕ್ರವಾರ ಬೆಳಿಗ್ಗೆಯೇ ತುಮಕೂರಿನಿಂದ ನಾನು ನನ್ನ ಸ್ನೇಹಿತ ಹೊರಟರೂ ಅಲ್ಲಿಗೆ ತಲುಪಿದಾಗ ಆಗಲೇ ಚಿತೆಗೆ ಅಗ್ನಿಸ್ಪರ್ಶ ಮಾಡಿದ್ದರು. ಆ ಚಿತೆಗೆ ನಾನು ಒಂದೆರಡು ಸೌದೆಯನ್ನು ಹಾಕಿದೆ. ನನ್ನ ಮೆಚ್ಚಿನ ಲೇಖಕರಿಗೆ ಅಂತಿಮ ನಮನ ಸಲ್ಲಿಸಿ ಹಿಂತಿರುಗಿದೆ. ಅಪಾರ ಅಭಿಮಾನಿಗಳ ನಡುವೆ ನಾನೂ ಒಬ್ಬನಾಗಿ ಗೌರವ ಸಲ್ಲಿಸಿ ಬಂದೆ.


ಈ ವಾರದ ಪತ್ರಿಕೆಯಲ್ಲಿ ತೇಜಸ್ವಿಯವರ ಬಗ್ಗೆ ಎಲ್ಲಾ ಲೇಖನಗಳೂ ಅವರಿಗೆ ಸಲ್ಲುವ ಗೌರವ....

-ಎಂ. ಸದಾಶಿವ, ತುಮಕೂರು

ಮೊನ್ನೆ ಸಂಭವಿಸಿದ ಅನಿವಾರ್ಯ ಆದರೆ ಅನಿರೀಕ್ಷಿತ-ತೇಜಸ್ವಿ ಇನ್ನಿಲ್ಲದ ಸ್ಥಿತಿಯಲ್ಲಿ ಟೀವಿ ವರದಿಗಳಲ್ಲಿ ನಿಮ್ಮನ್ನು ಕಂಡೆ. ನಾನೂ ಕಿಂಚಿತ್ ತೇಜಸ್ವಿಯ ಒಡನಾಡಿನವನೇ ಆದರ ಬಲದಲ್ಲಿ ಅವಸರಕ್ಕೆ ಮೂರು ಟಿಪ್ಪಣಿಗಳನ್ನು ಮೊನ್ನೆಯೇ (ಉದಯವಾಣಿಯವರು ಕೇಳಿದ್ದರಿಂದ) ಬರೆದು ಕೊಟ್ಟೆ. ನಿನ್ನೆ ಪ್ರಕಟವೂ ಆಯ್ತು. ಅದರ ಜೊತೆಗೇ ಇತರ ವರದಿಗಳಲ್ಲಿ ನನ್ನ ಕಣ್ಣು ಚುಚ್ಚಿದ್ದು ಸಚಿವರ (ಮಹಾದೇವ ಪ್ರಸಾದ್ ಇರಬೇಕು) ಘೋಷಣೆ- 'ಸರ್ಕಾರ ತೇಜಸ್ವಿಯವರ ಸಮಗ್ರ ಕೃತಿಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತದೆ.' ಡಿವಿಜಿ ಸಮಗ್ರ, ಕಾರಂತ ಸಮಗ್ರ ಘೋಷಿಸಿ ಹೊಲಸು ಮಾಡಿರುವುದು ನಿಮಗೆ ಗೊತ್ತಿರಬಹುದು. ಕುವೆಂಪು ಹಸ್ತಪ್ರತಿ 'ರಾಮಾಯಣ ದರ್ಶನಂ'ನ್ನೂ, ಸರ್ಕಾರ ಕೆಡಿಸಿದರೂ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ತೇಜಸ್ವಿ ಕಾವಲಿದ್ದರು. ಆದರೂ ಬೇಕಾಬಿಟ್ಟಿ ಬೆಲೆಯಿಡುವುದು, ರಿಯಾಯಿತಿ ಘೋಷಿಸುವುದು ಮಾಡಿ ನಿಜ ಸಾಮಾನ್ಯ ಓದುಗನಿಗೆ ಮುಟ್ಟಿದ್ದು ಇಷ್ಟೇ. ಕಳೆದ ಮೂವತ್ತೆರಡು ವರ್ಷಗಳಿಂದ ಪುಸ್ತಕೋದ್ಯಮದಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡ ಮತ್ತು ಅದರ ಕುರಿತು ಸದಾ ವೈಚಾರಿಕವಾಗಿ ಮಾತಾಡಿ, ಬರೆದ ಬಲದಲ್ಲಿ ಈ ಮಾತುಗಳನ್ನು ಹೇಳುತ್ತಿದ್ದೇನೆ. ಪುಸ್ತಕೋದ್ಯಮಕ್ಕೆ ಸಂಬಂಧಪಟ್ಟಂತೆ ನಾನು ಬರೆದ ಪ್ರಕಟಿಸಿದ 'ಪುಸ್ತಕ ಮಾರಾಟ ಹೋರಾಟ' (1999 ರ ಪ್ರಕಟಣೆ-ಸದ್ಯ ನನ್ನಲ್ಲಿ ಪ್ರತಿಗಳು ಉಳಿದಿಲ್ಲ, ಆ ಸುಮಾರಿಗೆ ನಾನು ಬೆಂಗಳೂರಿಗೆ ಬಂದಾಗ ನಿಮ್ಮ ತಂದೆಯನ್ನು ಭೇಟಿಯಾಗಿ ಒಂದು ಗೌರವಪ್ರತಿ ಕೊಟ್ಟಿದ್ದೆ. ಕಾಲಾನುಕ್ರಮ ಅದರ ಕುರಿತು ಪತ್ರಿಕೆಯಲ್ಲಿ ಯೋಗಪ್ಪನವರು ತೀರಾ ತೆಳುವಾದ ವಿಮರ್ಶೆಯನ್ನು ಬರೆದು ಪ್ರಕಟಿಸಿದ್ದರು ಬಿಡಿ) ನಿಮಗೆಲ್ಲಾದರೂ ಸಿಕ್ಕರೆ ನೋಡಿ.

ಇಷ್ಟೆಲ್ಲಾ ನಿಮಗ್ಯಾಕೆ ಬರೆದೆನೆಂದರೆ: ಈ ಸರ್ಕಾರಿ ಘೋಷಣೆಯನ್ನು ಎಲ್ಲರೂ ಖಂಡಿಸಬೇಕು. ತೇಜಸ್ವಿಯವರು ಪುಸ್ತಕ ಪ್ರಕಾಶನ ಹಾಗೂ ಉತ್ತರಾಧಿಕಾರಿಯಾಗಿ ಉದಯರವಿ ಪ್ರಕಾಶನವನ್ನು ಬಲು ಸಮರ್ಥವಾಗಿ, ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದಿದ್ದಾರೆ. ನನಗೆ ತಿಳಿದಂತೆ ಮುಂದುವರಿಸಿಕೊಂಡು ಹೋಗುವ ಜನಗಳನ್ನೂ (ಪ್ರೊ. ಶ್ರೀರಾಮ್) ಹೊಂದಿದ್ದಾರೆ. ಪುಢಾರಿಗಳ ಭಾವನಾತ್ಮಕ ಮೈಲೇಜ್ ಪಡೆಯುವ ಹುಚ್ಚಿನಲ್ಲಿ ಅದು ಕೆಡುವುದು ಬೇಡ ಎಂಬುದಷ್ಟೇ ನನ್ನ ಹಾರೈಕೆ. ಶ್ರೀರಾಮ್ ಅವರು ಮಾನಸಿಕ ಸ್ತಿಮಿತವನ್ನು ಗಳಿಸಿದ ಮೇಲೆ ಈ ಕುರಿತು ಅವರಿಗೂ ನಾನು ಬರೆಯುತ್ತೇನೆ. ಈ ವಿಷಯ ಕುರಿತು ಸಾರ್ವಜನಿಕರಿಗೆ ಮುಟ್ಟಿಸುವ ಕೆಲಸ ನಿಮ್ಮಿಂದ ಮಾತ್ರ ಸಾಧ್ಯ. ಚಮಚಾಗಿರಿ ನಡೆಸುವಲ್ಲಿ ಪೈಪೋಟಿ ನಡೆಸುವ ಯಾವ ದೈನಿಕ ಪತ್ರಿಕೆಗಳನ್ನೂ ಇಂದು ನೆಚ್ಚುವಂತಿಲ್ಲ ಎನ್ನುವ ದುಃಖಕ್ಕೆ ಇಷ್ಟುದ್ದ ಕೊರೆದೆ. ಕ್ಷಮಿಸಿ.

-ಜಿ.ಎನ್. ಅಶೋಕಾವರ್ಧನ,
ಅತ್ರಿ ಬುಕ್ ಸೆಂಟರ್, ಮಂಗಳೂರು



ಅಕ್ಷರ ಲೋಕದ ವಿಸ್ಮಯ ಜಂಗಮರೆಂದೆನಿಸಿಕೊಂಡಿದ್ದ ಪೂರ್ಣಚಂದ್ರ ತೇಜಸ್ವಿ ಅವರು ಕಳೆದ ಗುರುವಾರ ಈ ಲೋಕಕ್ಕೆ ಪರ್ಮನೆಂಟ್ ಆಗಿ ರಜೆ ಹಾಕಿ ಹೋದ ಸಂಗತಿ ಕೇಳಿ ಹೃದಯ ಭಾರವೆನಿಸಿತು. ಇದೇ ಸಂದರ್ಭದಲ್ಲಿ ಅವರೊಂದಿಗಿನ ಎರಡು ಪ್ರಸಂಗಗಳು ಕಣ್ಣೆದುರಿಗೆ ಬಂದವು.

ಒಂದು....

ಆಗ ನನಗಿನ್ನೂ ಹದಿನಾರು ತುಂಬಿರಲಿಲ್ಲ. ಪಿ. ಲಂಕೇಶರು ಬೆಂಗಳೂರಿನಲ್ಲಿ ಕರೆದಿದ್ದ ಪ್ರಗತಿರಂಗದ ಸಭೆಗೆ ಅಪ್ಪನೊಂದಿಗೆ ಬಂದಿದ್ದೆ. ಅಲ್ಲಿ ಕೆ. ರಾಮದಾಸ್, ಪೂರ್ಣಚಂದ್ರ ತೇಜಸ್ವಿ ಮುಂತಾದ ಪ್ರಗತಿಪರರೆಲ್ಲರೂ ಸೇರಿದ್ದರು. ಅಷ್ಟೊತ್ತಿಗಾಗಲೇ ಹೈಸ್ಕೂಲ್‌ನಲ್ಲಿ 'ತೇಜಸ್ವಿ' ಅವರ 'ಸುಸ್ಮಿತಾ ಮತ್ತು ಹಕ್ಕಿಮರಿ' ಎಂಬ ಪಾಠವನ್ನು ಓದಿದ್ದ ನನಗೆ ಅವರನ್ನು ಕಣ್ಣಾರೆ ನೋಡುವ ಭಾಗ್ಯ ಒದಗಿಬಂತಲ್ಲಾ ಎಂದು ಒಳಗೊಳಗೆ ಖುಷಿಪಟ್ಟಿದ್ದೆ. ಅದೇ ಸಂಭ್ರಮದಲ್ಲಿ ಅವರ ಹತ್ತಿರ ಒತ್ತಿಕೊಂಡು ಬಂದು ನಿಂತೆ! ಇದನ್ನು ಕಂಡು ಅವರು ಮುಖ ಸಿಂಡರಿಸಿಕೊಂಡರು ಮಾತ್ರವಲ್ಲ ಸಿಡಿಮಿಡಿಕೊಂಡರು. ಅವರ ಆ ಮುಖಭಾವ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ. ತೇಜಸ್ವಿಯವರನ್ನು ನೋಡಿದುದಲ್ಲದೆ ಅವರನ್ನು ಮುಟ್ಟಿ ಬಂದ ಸುದ್ದಿಯನ್ನು ಆಗ ಊರಲ್ಲೆಲ್ಲಾ ಟಾಂ ಟಾಂ ಮಾಡಿದ್ದೆ!

ಎರಡು....

ನನ್ನ ಚಿಕ್ಕಪ್ಪ ಹಾಗೂ ಇತರರೊಂದಿಗೆ ಕಳೆದೆರಡು ತಿಂಗಳ ಹಿಂದೆ ಶಿವಮೊಗ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಹೋದಾಗ ತೇಜಸ್ವಿಯವರನ್ನು ಕಂಡುಬಂದರಾಯಿತೆಂದು ಅವರಿಗೆ ಫೋನಾಯಿಸಿದಾಗ, 'ಸುಮ್ನೆ ಯಾಕ್ರಯ್ಯಾ ನನ್ನ ನೋಡಲಿಕ್ಕೆ ಬರ್ತೀರಿ' ಎಂದಿದ್ದರು. ನಾವು ದೂರದ ಗುಲ್ಬರ್ಗಾದಿಂದ ಬಂದಿದ್ದೇವೆ ಎಂಬುದನ್ನು ತಿಳಿಸಿದಾಗ ಮಧ್ಯಾಹ್ನ 1.30 ಕ್ಕೆ ಬರಲು ಹೇಳಿದ್ದರು. ಅವರ ಮನೆಯಂಗಳದಲ್ಲಿ ಕಾಲಿಟ್ಟಾಗ ಅವರಿರಲಿಲ್ಲ. ಪೇಟೆಗೆ ಹೋಗಿದ್ದ ಅವರನ್ನು ಕಾಣುತ್ತಲೇ ನಮಸ್ಕಾರ ಹೇಳಿ ಮನೆಯೊಳಗಡೆ ಪ್ರವೇಶಿಸಿದೆವು.


"ಯಾಕೆ ಸಾರ್ ನೀವು ಸಮ್ಮೇಳನಕ್ಕೆ ಬರಲ್ವೇ?" ಎಂಬ "ನಮ್ಮ ಪ್ರಶ್ನೆಗೆ ನಾನು ಹೋಗುವುದಿಲ್ಲ ಯಾಕೆಂದರೆ, ಹಿಂದಿನ ಸಮ್ಮೇಳನದಿಂದಿಡಿದು ಇಂದಿನವರೆಗೂ ಅವೇ ಗೊತ್ತುವಳಿ ಪಾಸು ಮಾಡುವುದು, ಒತ್ತಾಯ ಮಾಡುವುದಾಗಿದೆ. ಅವುಗಳಲ್ಲಿ ಯಾವೂ ಕಾರ್ಯಗತಗೊಂಡಿಲ್ಲ, ನೀವಾದ್ರೂ ಯಾಕ್ರಯ್ಯಾ ಅಷ್ಟು ದೂರದಿಂದ ಬರ್ಲಿಕ್ಕ ಹೋದ್ರಿ' ಎಂದು ಪ್ರಶ್ನಿಸಿದ್ದರು. ಇದೇ ಸಂದರ್ಭದಲ್ಲಿ ಸುಭಾಷ್ ಪಾಳೇಕಾರರ ಸಹಜ ಕೃಷಿಯ ಬಗ್ಗೆ ಕೇಳಿದಾಗ, "ಒಬ್ಬೊಬ್ರು ಒಂದೊಂದು ರೀತಿಯಲ್ಲಿ ಹೇಳ್ತಾರೆ. ಆದರೆ ನನಗೆ ತಿಳಿದಿರುವಂತೆ ಈ ಪ್ರಕೃತಿ ತನ್ನ ಕೆಲಸ ತಾನು ಮಾಡುತ್ತದೆ. ಮನುಷ್ಯ ಇದರಿಂದ ದೂರ ಇರಬೇಕು" ಎಂದು ಹೇಳುತ್ತಾ ತಮ್ಮ ತೋಟದಲ್ಲಿ ಬೆಳೆದ ಪೇರಲ ಹಣ್ಣು ಕೊಟ್ಟು ಪಾನಕ ಕುಡಿಸಿ ಕಳಿಸಿದರು. ಇದೇ ಸಂದರ್ಭದಲ್ಲಿ "ಲಿಂಗಣ್ಣ ಈ ಕಡೆ ಬಂದರೆ ಭೇಟಿಯಾಗಲು ಹೇಳು" ಎಂದು ನನ್ನ ತಂದೆಯವರನ್ನು ನೆನಪಿಸಿದರು.

ಮೇಲಿನ ಈ ಎರಡೂ ಘಟನೆಗಳು ತೇಜಸ್ವಿಯವರು ಮರೆಯಾದಾಗ ಮೇಲಿಂದ ಮೇಲೆ ನನ್ನ ಮನದಾಳದಲ್ಲಿ ಸುಳಿದು ಹೋದವು. ಇದೇ ಸಂದರ್ಭದಲ್ಲಿ ಲಂಕೇಶರ ಸಾವು ಕೂಡಾ ನನ್ನನ್ನು ಕಾಡದಿರಲಿಲ್ಲ. ಹೊಸಕನ್ನಡ ಸಾಹಿತ್ಯದ ಎರಡನೇ ತಲೆಮಾರಿನ ಮೊದಲನೆ ಸಾಲಿನ ಈ ಲೇಖಕರ ಗೈರು ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವೆಂದೇ ನಾನು ಭಾವಿಸಿದ್ದೇನೆ.

-ಶಿವರಂಜನ್ ಸತ್ಯಂಪೇಟೆ

ನಾಗಾರ್ಜುನ ಉಷ್ಣವಿದ್ಯುತ್ ಸ್ಥಾವರದ ದುಷ್ಪರಿಣಾಮಗಳ ಬಗ್ಗೆ ವಿವರವಾದ ಲೇಖನವನ್ನು ಪ್ರಕಟಿಸಿದ್ದಕ್ಕೆ ಕೃತಜ್ಞತೆಗಳು. ಮೀನುಗಾರರ ಮತ್ತು ರೈತರ ಬದುಕಿಗೆ ಮಾರಕವಾಗಲಿರುವ ಈ ಸ್ಥಾವರ ನಮ್ಮ ರಾಜ್ಯದ ಭ್ರಷ್ಟ ರಾಜಕಾರಣಿಗಳ ಕೊಡುಗೆಯಾಗಿದೆ. ಮಹಾಮಾರಿ ಕಲ್ಲಿದ್ದಲು ಸ್ಥಾವರ ಕರಾವಳಿಯಂತಹ ಸೂಕ್ಷ್ಮ ಪ್ರದೇಶಕ್ಕೆ ತಕ್ಕುದ್ದಲ್ಲವೆಂದು ತಜ್ಞರುಗಳು ಹೇಳುತ್ತಿದ್ದರೂ, ಉದ್ಯಮಿಗಳ ಎಂಜಲು ಕಾಸಿಗೆ ಕೈಯೊಡ್ಡುವ ರಾಜಕಾರಣಿಗಳಿಂದ ಬೇರೆ ಏನನ್ನೂ ನಿರೀಕ್ಷಿಸುವಂತಿಲ್ಲ. ಮೊನ್ನೆ ಮಾರ್ಚ್ 17 ರಂದು ಉಭಯ ಜಿಲ್ಲೆಗಳ ಮೀನುಗಾರರು ಸತತ 10 ಗಂಟೆಗಳ ಅವಧಿಗೆ, 150 ಕಿ.ಮೀ. ಉದ್ದವ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಆಕ್ರೋಶವನ್ನು ತೋರ್ಪಡಿಸಿದರೂ ಆಳುವ ಮಂದಿ ಮೇಲೆ ಪರಿಣಾಮ ಬೀರಿದಂತಿಲ್ಲ. ಪಶ್ಚಿಮ ಬಂಗಾಲದ ನಂದಿಗ್ರಾಮದಲ್ಲಿ ನಡೆದ ರಕ್ತಸಿಕ್ತ ಪ್ರತಿಭಟನೆಯೊಂದೇ ಸೂಕ್ತ ಮಾರ್ಗವೆಂದು ತೋರುತ್ತದೆ. ಹೆಮ್ಮೆಯ 'ಲಂಕೇಶ್' ಪತ್ರಿಕೆಯಲ್ಲಿ ಇಂತಹ ಲೇಖನ ಓದಿ ಸಂತೋಷವಾಯಿತು.

-ಶರಣ್ ಗುದ್ದೆಕೊಪ್ಪ,
ಅಧ್ಯಕ್ಷರು, ಕರ್ನಾಟಕ ಕರಾವಳಿ
ಸಾಂಪ್ರದಾಯಿಕ ನಾಡದೋಣಿ
ಮೀನುಗಾರರ ಒಕ್ಕೂಟ



ಕಾಡಿನಲ್ಲಿ ಅಪ್ಪಾಜಿ ನಾಡಿನಲ್ಲಿ ನಮ್ಮ ಕಣ್ಣೀರು

ನಾನಂದು ಇನ್ನೂ ಮುಂಜಾನೆಯ ಸಿಹಿ ನಿದ್ರೆಯಲ್ಲಿದ್ದೆ. ಆಗ ಸಮಯ ಬಹುಶಃ ನಾಲ್ಕು ಗಂಟೆ ಇರಬೇಕು. ಅಷ್ಟೊತ್ತಿಗೆ ಎಂದೂ ಟ್ರಿನ್ ಟ್ರಿನ್ ಮಾಡದ ನಮ್ಮ ಮನೆಯ ಫೋನು ಶಬ್ದ ಮಾಡಿತು. ನಾನು ಮತ್ತು ನನ್ನ ಪತ್ನಿ ಗೀತಾ ಒಮ್ಮೆಲೇ ಗಾಬರಿಯಿಂದ ಎದ್ದು ಫೋನು ಎತ್ತಿಕೊಂಡೆವು. ಆ ಕಡೆಯಿಂದ ನನ್ನ ಅಮ್ಮ ಗದ್ಗದಿತ ಧ್ವನಿಯಲ್ಲಿ "ಸ್ವಲ್ಪ ಮನೆ ಕಡೆ ಬಾಪ್ಪ.." ಎಂದು ಹೇಳಿದರು. ಮನೆಯಲ್ಲಿ ಏನೋ ಅನಾಹುತ ಆಗಿರಬೇಕೆಂದು ಭಾವಿಸಿ "ಏನಾಯ್ತಮ್ಮ" ಎಂದು ಕೇಳಿದೆ. "ಮನೆಗೇ ಬಂದ್ಬಿಡು ಎಲ್ಲಾ ಹೇಳ್ತೀನಿ..." ಎಂದರು. ತಕ್ಷಣ ನಾನು ಮತ್ತು ಗೀತಾ ಅಪ್ಪಾಜಿ ಮನೆಗೆ ಧಾವಿಸಿದೆವು.

ನಮ್ಮ ಮನೆಯಿಂದ ಅಪ್ಪಾಜಿ ಮನೆಗೆ ಕೇವಲ ಒಂದು ನಿಮಿಷದ ದಾರಿ. ಆ ಒಂದು ನಿಮಿಷದ ಅವಧಿಯಲ್ಲೇ ನನ್ನ ಮನಸ್ಸಿನಲ್ಲಿ ನೂರಾರು ಕೆಟ್ಟ ಆಲೋಚನೆಗಳು ಬಂದುಹೋದವು. ಮನೆಗೆ ತಲುಪಿದಾಕ್ಷಣ ನಾನು ಮೊದಲಿಗೆ ಗಮನಿಸಿದ್ದೇ ಅಲ್ಲಿ ಅಪ್ಪಾಜಿಯ ಗೈರುಹಾಜರಿ. ಇಂಥ ಸಂದರ್ಭದಲ್ಲೆಲ್ಲಾ ಸಾಮಾನ್ಯವಾಗಿ ಅವರೇ ಮುಂದಿರುತ್ತಿದ್ದರಿಂದ ನನ್ನ ಕಣ್ಣುಗಳು ಅವರನ್ನೇ ಹುಡುಕುತ್ತಿದ್ದವು. ಅಷ್ಟೊತ್ತಿಗೆ ಅಮ್ಮ ನಿಧಾನವಾಗಿ ವಿಷಯವನ್ನು ಹೇಳಿದರು. "ವೀರಪ್ಪನ್ ಅಪ್ಪಾಜಿಯನ್ನು ಕಿಡ್ನಾಪ್ ಮಾಡಿದ್ದಾನೆ" ಎಂದು ಅಮ್ಮ ಹೇಳಿದಾಕ್ಷಣ ನನಗರಿವಿಲ್ಲದಂತೇ ನಾನು ಜೋರಾಗಿ ಅಳಲು ಶುರುಮಾಡಿದೆ. ನನಗಿಂತ ಜೋರಾಗಿ ಗೀತಾ ಅಳುತ್ತಿದ್ದಳು. ನನಗೆ ಆ ಸುದ್ದಿ ನಂಬಲಿಕ್ಕೆ ಸಾಧ್ಯವಾಗಲೇ ಇಲ್ಲ. ಅಮ್ಮ ಕಿಡ್ನ್ಯಾಪ್ ವಿಷಯ ಹೇಳುತ್ತಿದ್ದಂತೆ ನನ್ನ ಮೈ ನಡುಗಿಹೋಯಿತು. ಗೀತಾ ಮತ್ತು ನನ್ನೊಂದಿಗೆ ಅಮ್ಮನೂ ಅಳುತ್ತಾ ಕುಳಿತರು. ರಾಘು, ಅಪ್ಪು ಹೀಗೆ.... ಮನೆಯವರೆಲ್ಲರೂ ಕೋರಸ್‌ನಲ್ಲಿ ಆ ಬೆಳಗಿನ ಜಾವ ಅಳುತ್ತಿದ್ದೆವು. ಅಳು ಬಿಟ್ಟರೆ ನಮ್ಮ ನಡುವೆ ಯಾವುದೇ ಮಾತುಕತೆ ನಡೆಯಲೇ ಇಲ್ಲ.


ಇಂತಹ ಸಂದರ್ಭದಲ್ಲಿ ನಾವೇನು ಮಾಡಬೇಕು, ಸಹಾಯಕ್ಕಾಗಿ ಯಾರನ್ನು ಕೇಳಬೇಕು ಎಂದು ತೋಚಲೇ ಇಲ್ಲ. ಕೊನೆಗೆ ಅಳುವುದನ್ನು ನಿಲ್ಲಿಸಿ ಆಲೋಚಿಸಿದೆವು. ಅಷ್ಟೊತ್ತಿಗೆ ರಾಘು ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಫೋನು ಮಾಡಿ ವಿಷಯ ತಿಳಿಸಿದ್ದ. ನಾವೆಲ್ಲಾ ಎಸ್.ಎಂ. ಕೃಷ್ಣ ಅವರ ಮನೆಗೆ ಆ ಕ್ಷಣ ಹೊರಟುನಿಂತೆವು.

ಜುಲೈ 31 ನನ್ನ ಜೀವನದ ಕರಾಳ ದಿನ. ಅಂದು ಬೆಳಿಗ್ಗೆ ನಾನು 'ಮದುವೆಯಾಗೋಣ ಬಾ' ಚಿತ್ರೀಕರಣಕ್ಕಾಗಿ ಹೊರಡಬೇಕಿತ್ತು. ಆದರೆ ವಿಧಿಯ ಆಟವೇ ಬೇರೆಯಾಗಿತ್ತು. ಎಸ್ಸೆಂ ಕೃಷ್ಣರವರ ಮನೆಗೆ ಹೋದ ನಂತರ ಸರ್ಕಾರ ಸಂಪೂರ್ಣ ಮುತುವರ್ಜಿ ವಹಿಸಿಕೊಂಡಿತು. "ನೀವು ತಾಳ್ಮೆಯಿಂದ ಇರಿ. ನಾವು ಅಣ್ಣಾವ್ರನ್ನು ಸುರಕ್ಷಿತವಾಗಿ ವಾಪಾಸು ಕರೆದುಕೊಂಡು ಬರುತ್ತೇವೆ" ಎಂದು ಮುಖ್ಯಮಂತ್ರಿಗಳು ಸಮಾಧಾನದ ಮಾತುಗಳನ್ನಾಡಿದರು.

ಅಷ್ಟೊತ್ತಿಗೆಲ್ಲಾ ಅಪ್ಪಾಜಿ ಕಿಡ್ನ್ಯಾಪ್ ಆಗಿದ್ದ ಸುದ್ದಿ ಮಾಧ್ಯಮದವರಿಗೆ ತಲುಪಿತ್ತು. ಮುಂದಿನ ಎರಡು ಗಂಟೆಗಳ ಕಾಲ ನಮಗೆ ಮಾಧ್ಯಮದವರಿಗೆ ವಿಷಯ ಹೇಳುವುದೇ ದೊಡ್ಡ ಕೆಲಸವಾಗಿತ್ತು. ಬೆಳಗಿನ ಜಾವ ಎಲ್ಲಾ ಮಾಧ್ಯಮಗಳಲ್ಲಿ ಸುದ್ದಿ ಬಂದಾಕ್ಷಣ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಅಭಿಮಾನಿಗಳು ರೊಚ್ಚಿಗೆದ್ದ ಸುದ್ದಿಗಳು ಬರಲಾರಂಭಿಸಿದವು. ನಮ್ಮ ನೋವಿನ ನಡುವೆ ಅಭಿಮಾನಿಗಳನ್ನು ಸಮಾಧಾನಪಡಿಸುವುದೇ ನಮಗೆ ದುಸ್ತರದ ಸಂಗತಿಯಾಯಿತು. ಬಿಬಿಸಿ ಎಂತಹ ವಿದೇಶಿ ಚಾನೆಲ್‌ಗಳು ಕೂಡ ಬೆಳಗಿನ ಜಾವ ಆರು ಗಂಟೆಗೆಲ್ಲಾ ಫೋನ್ ಮಾಡಿ ಅಪ್ಪಾಜಿಯ ಕಿಡ್ನ್ಯಾಪ್ ವಿಷಯದ ಬಗ್ಗೆ ನನ್ನಿಂದ ಮಾಹಿತಿ ಪಡೆಯಲಾರಂಭಿಸಿದರು.

ನಿರೂಪಣೆ: ಸದಾಶಿವ ಶೆಣೈ

48




ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ನಮ್ಮ ಜೀವನದಲ್ಲೇ ಇಂತಹ ಒಂದು ದೊಡ್ಡ ದುರಂತವನ್ನು ಎದುರಿಸಲು ನಾವು ಮಾನಸಿಕವಾಗಿ ಸಮರ್ಥರಾಗಿರಲಿಲ್ಲ. ಆ ಸಂದರ್ಭದಲ್ಲಿ ಅಪ್ಪಾಜಿ ಎಲ್ಲಿದ್ದಾರೆ, ಹೇಗಿದ್ದಾರೆ, ಅವರನ್ನು ಸುರಕ್ಷಿತವಾಗಿ ಕರೆತರಲು ಯಾರನ್ನು ಅಪ್ರೋಚ್ ಮಾಡಬೇಕು ಎಂಬುದೂ ನಮಗೆ ಗೊತ್ತಿರಲಿಲ್ಲ. ನಮಗೆ ಸಲಹೆ ನೀಡುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಹೀಗಾಗಿ ಆಯಾ ಸಂದರ್ಭಕ್ಕೆ ಯಾರ್ಯಾರು ಏನೇನು ಹೇಳುತ್ತಿದ್ದರೋ ಅದೆಲ್ಲವನ್ನೂ ಮಾಡಿಕೊಂಡು ಹೋಗುವುದಷ್ಟೇ ನಮಗೆ ಉಳಿದ ಏಕೈಕ ದಾರಿಯಾಗಿತ್ತು. ಆದರೂ ಇದೊಂದು ನಮ್ಮ ಕುಟುಂಬದ ಸಮಸ್ಯೆಯಾಗಿರಲಿಲ್ಲ. ಬದಲಿಗೆ ಇಡೀ ಕರ್ನಾಟಕದ ಸಮಸ್ಯೆ ಎಂಬಂತೆ ಜನರು ಕಾಳಜಿ ತೋರಿಸಿದ್ದರಿಂದ ನಮಗೆ ಒಂದು ರೀತಿಯ ಭರವಸೆ ಸೃಷ್ಟಿಯಾಯಿತು. ಆ ಸಂದರ್ಭದಲ್ಲಿ ಪೊಲೀಸರು, ಮೀಡಿಯಾದವರು, ರಾಜಕಾರಣಿಗಳು, ಕಲಾವಿದರು, ಸ್ವಾಮೀಜಿಗಳು.... ಹೀಗೆ ಎಲ್ಲರೂ ಧೈರ್ಯ ಹೇಳುತ್ತಿದ್ದರಿಂದ ಇಂದಲ್ಲಾ ನಾಳೆ ಅಪ್ಪಾಜಿ ಮತ್ತೆ ಬರಬಹುದೆಂಬ ಭರವಸೆಯ ಆಶಾಕಿರಣದಲ್ಲೇ ಮೊದಲಿನ ಐದಾರು ದಿನಗಳನ್ನು ಕಳೆದೆವು.

ಇದೇ ಸಂದರ್ಭದಲ್ಲಿ ರಾಘು ಒಮ್ಮೆ ಮದ್ರಾಸಿಗೆ ಹೋಗಿ ಅಲ್ಲಿನ ಮುಖ್ಯಮಂತ್ರಿ ಕರುಣಾನಿಧಿಯವರೊಂದಿಗೆ ಮಾತುಕತೆ ನಡೆಸಿ ಬಂದ. ಆಗ ನಮಗೆ ಇನ್ನಷ್ಟು ಧೈರ್ಯ ಬಂತು. ಆತ ಬಂದ ಎರಡೇ ದಿನಕ್ಕೆ ನಾನೊಮ್ಮೆ ಮದ್ರಾಸಿಗೆ ಹೋಗಿ ಅಲ್ಲಿಯ ನನ್ನ ಹಳೆಯ ಗೆಳೆಯರೊಂದಿಗೆ ಮಾತನಾಡಿಕೊಂಡು ಬಂದೆ. ಮುಖ್ಯಮಂತ್ರಿಯವರನ್ನು ಭೇಟಿಯಾದೆ. ಎಲ್ಲರೂ ಸಕಾರಾತ್ಮಕವಾಗಿ ಮಾತನಾಡಿದ್ದರಿಂದ ನಮ್ಮ ಮನೆಯವರಿಗೆಲ್ಲಾ ದುಃಖವನ್ನು ಸ್ವಲ್ಪವಾದರೂ ಹಿಮ್ಮೆಟ್ಟಿಸಲು ಸಾಧ್ಯವಾಯಿತು.

ಅಪ್ಪಾಜಿ ಕಿಡ್ನ್ಯಾಪ್ ಆಗಿ ಹತ್ತು ದಿನವಾಗಿರಬೇಕು.... ಅಂದು ರಾತ್ರಿ ಬೆಂಗಳೂರಿನಲ್ಲಿ ಧಾರಾಕಾರವಾಗಿ ಮಳೆ ಸುರಿಯಿತು. ಹಾಗೆ ಮಳೆ ಸುರಿಯುತ್ತಿದ್ದಂತೆ ನಮ್ಮ ಮನೆಯಲ್ಲಿದ್ದವರ ತಾಳ್ಮೆಯ ಕಟ್ಟೆ ಒಡೆದುಹೋಯಿತು. ಅಮ್ಮನ ಸಮೇತ ಎಲ್ಲರೂ ಒಂದೇ ಸಮನೆ ಜೋರಾಗಿ ಅತ್ತುಬಿಟ್ಟೆವು. ಅಪ್ಪಾಜಿ ಈ ಮಳೆಗೆ ಕಾಡಿನಲ್ಲಿ ಹೇಗಿರುತ್ತಾರೋ? ಅಪ್ಪಾಜಿಯನ್ನು ವೀರಪ್ಪನ್ ಹೇಗೆ ನೋಡಿಕೊಳ್ಳುತ್ತಾನೋ ಎಂದು ಪ್ರತಿಯೊಬ್ಬರೂ ನೆನೆಸಿಕೊಳ್ಳುತ್ತಾ ಅಳಲಾರಂಭಿಸಿದರು. ಅತ್ತ ಮನೆಯ ಹೊರಗಡೆ ಮಳೆಯ ನೀರು ಇತ್ತ ಮನೆಯ ಒಳಗಡೆ ಕಣ್ಣೀರು.

ಕ್ಷಮಿಸಿ ಆ ದಿನಗಳನ್ನು, ಆ ನೋವುಗಳನ್ನು ನಾನು ಎಷ್ಟು ಅನುಭವಿಸಿದ್ದೇನೆಂದರೆ, ಅದನ್ನು ನಾನು ವರ್ಣಿಸಲೂ ಸಾಧ್ಯವಿಲ್ಲ. ಆ ಸಂದರ್ಭದಲ್ಲಿ ನಾವೆಲ್ಲಾ ಹೇಗೆ ಬದುಕಿದೆವು? ಹೇಗೆ ಉಸಿರಾಡಿದೆವು? ಎಂದು ನಮಗೇ ಗೊತ್ತಿರಲಿಲ್ಲ. ಎಷ್ಟೋ ಬಾರಿ ನಾವು ಹಾಸಿಗೆಯಿಂದ ಬೆಳಿಗ್ಗೆ ಏಳುವಾಗ ಅಳುತ್ತಲೇ ಏಳುತ್ತಿದ್ದೆವು. ಇನ್ನೆಷ್ಟೋ ಬಾರಿ ರಾತ್ರಿ ಮಲಗುವಾಗ ನಮ್ಮ ಮನೆಯಲ್ಲಿ ಹೆಣ್ಣು ಮಕ್ಕಳೆಲ್ಲಾ ಅಳುತ್ತಾ ಅಳುತ್ತಲೇ ಮಲಗುತ್ತಿದ್ದರು. ಅಪ್ಪಾಜಿ ಕಾಡಲ್ಲಿದ್ದಷ್ಟೂ ದಿನ ನಾವು ಮನೆಯಲ್ಲಿ ಅಡುಗೆ ಕೂಡಾ ಮಾಡಿಲ್ಲ. ಯಾರೋ ತಂದುಕೊಟ್ಟ ಊಟವನ್ನೇ



ಗಾಜನೂರಿನ ಹಳೇ ಮನೆಯಲ್ಲಿ ದುಃಖದ ಛಾಯೆ

ತಿನ್ನುತ್ತಿದ್ದೆವು. ಊಟ, ತಿಂಡಿ, ಸ್ನಾನ.... ಈ ದಿನಚರಿಯೆಲ್ಲಾ ತಲೆಕೆಳಗಾಗಿದ್ದವು. ಊಟವೇ ಮಾಡದ, ಸ್ನಾನವೇ ಮಾಡದ ದಿನಗಳೇ ಹೆಚ್ಚು. ಮನೆಯಲ್ಲಿ ಮೊಮ್ಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ. ಅವರನ್ನು ಸಮಾಧಾನಪಡಿಸುವುದೂ ನಮ್ಮ ಇನ್ನೊಂದು ಜವಾಬ್ದಾರಿಯಾಗಿತ್ತು. ಕಡೆಕಡೆಗೆ ನಮ್ಮ ಮನಸ್ಸು ಎಷ್ಟು ಗಟ್ಟಿಯಾಯಿತೆಂದರೆ ಯಾರೂ ಅತ್ತರೂ, ಯಾರು ಬಿಕ್ಕಳಿಸುತ್ತಿದ್ದರೂ ನಮಗೇನೂ ಅನ್ನಿಸುತ್ತಲೇ ಇರಲಿಲ್ಲ. ಯಾಕೆಂದರೆ ನಮಗೆ ಅವರನ್ನು ಸಮಾಧಾನಿಸುವುದಕ್ಕಿಂತ ಇನ್ನೂ ಮುಖ್ಯವಾದ ಕೆಲಸಗಳು ಬೇಕಾದಷ್ಟು ಇರುತ್ತಿತ್ತು.

ಬೆಂಗಳೂರಿನಲ್ಲಿ ಧಾರಾಕಾರವಾಗಿ ಮಳೆ ಸುರಿದ ಮರುದಿನ ನಮ್ಮ ಮನೆಯಲ್ಲಿ ಹೋಮವಿತ್ತು. ಆ ದಿನ ಅಪ್ಪಾಜಿಯ ರೂಮಿನಲ್ಲಿ ಹೋಮ ನಡೆಯುತ್ತಿದ್ದರೆ, ಹೊರಗಡೆ ಗಾರ್ಡನ್‌ನಲ್ಲಿ ಕ್ರಿಶ್ಚಿಯನ್ ಪಾದ್ರಿಗಳು ಜಪ ಮಾಡುತ್ತಿದ್ದರು. ಮುಸ್ಲಿಂ ಬಾಂಧವರು ಕಾರ್ ಶೆಡ್‌ನಲ್ಲಿ ನಮಾಜ್ ಮಾಡುತ್ತಿದ್ದರು. ಸಿಖ್ ಬಾಂಧವರು ಮನೆಯ ಮುಂಭಾಗದಲ್ಲಿ ಭಜನೆ ನಡೆಸುತ್ತಿದ್ದರು. ಒಂದೇ ಮನೆಯಲ್ಲಿ ಬೇರೆ ಬೇರೆ ಧರ್ಮದ ಜನರು ಏಕಕಾಲಕ್ಕೆ ಪೂಜೆ ಮಾಡುವುದನ್ನು ಕಂಡು ನಾನು ವಿಸ್ಮಯನಾಗಿಹೋದೆ.



ಗಾಜನೂರಿನಲ್ಲಿ ಕಟ್ಟಿಸಿದ್ದ ಹೊಸ ಮನೆ

ಬಹುಶಃ ಇಂತಹ ದೃಶ್ಯ ಬೇರೆ ಎಲ್ಲೂ ಯಾರೂ ನೋಡಲು ಸಾಧ್ಯವೇ ಇಲ್ಲ. ಅವತ್ತು ನನಗೆ ನಮ್ಮ ಅಪ್ಪಾಜಿ ಜೀವನ ನಡೆಸಿದ ಈ ಮನೆ ಬರೀ ಮನೆಯಲ್ಲ ಇದೊಂದು ದೇವ ಮಂದಿರ ಎಂದೆನಿಸಿತು. ಆದರೆ ಆ ದೇವಮಂದಿರದಲ್ಲಿ ದೇವರೇ ಇರಲಿಲ್ಲವಲ್ಲ.....

ಒಂದೆಡೆ ಸರ್ಕಾರ ತೀವ್ರವಾದ ಮುತುವರ್ಜಿ ವಹಿಸಿದ ಬಗ್ಗೆ ನಮಗೆ ಸಮಾಧಾನವಿದ್ದರೂ ಅಪ್ಪಾಜಿ ಇನ್ನೂ ಬಿಡುಗಡೆಯಾಗಲಿಲ್ಲವಲ್ಲ ಎಂಬ ನೋವು ಕಾಡುತ್ತಿತ್ತು. ಆ ಸಂದರ್ಭದಲ್ಲೇ ನಾವು 'ನಕ್ಕೀರನ್' ಪತ್ರಿಕೆಯ ಸಂಪಾದಕ ಗೋಪಾಲ್ ಅವರನ್ನು ಭೇಟಿಯಾಗಲು ಮದ್ರಾಸಿಗೆ ಹೋದೆವು.

ಆ ಸಂದರ್ಭದಲ್ಲಿ ನಕ್ಕೀರನ್ ಗೋಪಾಲ್ ಅವರನ್ನು ಭೇಟಿಯಾಗುವುದು ಸರಿಯಲ್ಲ ಎಂದು ಕೆಲವರು ಹೇಳಿದ್ದು ನಮ್ಮ ಕಿವಿಗೆ ಬಿತ್ತು. ಆದರೆ ವೀರಪ್ಪನ್‌ನನ್ನು ಭೇಟಿಯಾಗಬಲ್ಲ ಏಕೈಕ ವ್ಯಕ್ತಿ ಎಂದರೆ ಆತ ಮಾತ್ರ.... ಎರಡೂ ಸರ್ಕಾರದ ಯಾವುದೇ ಅಧಿಕಾರಿಗಳು ವೀರಪ್ಪನ್‌ನನ್ನು ಭೇಟಿಯಾಗಲು ಸಾಧ್ಯವಿಲ್ಲದ ಪರಿಸ್ಥಿತಿ ಅದಾಗಿತ್ತು. ಇಂತಹ ಸಂದರ್ಭದಲ್ಲಿ ಗೋಪಾಲ್‌ರನ್ನು ಭೇಟಿಯಾದರೆ ತಪ್ಪೇನಿದೆ? ನಾವು ಬೇರೆ ಏನನ್ನು ಮಾಡಬಹುದು? ನಮಗೆ ನಮ್ಮ ಅಪ್ಪಾಜಿ ಯಾವ ಸ್ಥಿತಿಯಲ್ಲಿದ್ದಾರೆ? ಅವರ ಆರೋಗ್ಯ ಹೇಗಿದೆ ಎಂಬುದನ್ನು ತಿಳಿಯುವುದಷ್ಟೇ ಆಗ ಮುಖ್ಯವಾಗಿತ್ತು. ಹೀಗಾಗಿ ನಾವು ಗೋಪಾಲ್ ಅವರನ್ನು ಭೇಟಿಯಾಗುವುದು ಸರಿಯೋ ತಪ್ಪೋ ಎಂದು ವಿಶ್ಲೇಷಿಸಲು ಹೋಗಲೇ ಇಲ್ಲ. ಗೋಪಾಲ್‌ಅನ್ನು ಭೇಟಿಯಾಗಿ ಅದೇನಾಗುತ್ತೋ ನೋಡೋಣ ಎಂದು ರಾಘಣ್ಣನಿಗೆ ಸಲಹೆ ನೀಡಿದ್ದೇ ನಾನು.

ಹಾಗೆ ಗೋಪಾಲ್‌ರನ್ನು ಭೇಟಿಯಾದ ನಂತರ ನಮಗೆ ಸ್ವಲ್ಪ ಸಮಾಧಾನವಾಯಿತು. ಇಡೀ ಪ್ರಕರಣದ ಒಂದು ಒಳನೋಟ ಅರಿಯಲು ನಮಗೆ ಇದು ಸಹಕಾರಿಯಾಗಿತ್ತು. ಅಷ್ಟೇ ಅಲ್ಲ, ಅಪ್ಪಾಜಿ ಆರೋಗ್ಯದಿಂದಿದ್ದಾರೆ ಎಂಬ ಮೊದಲ ಮಾಹಿತಿ ನಮಗೆ ದೊರಕಿದ್ದರಿಂದ ನಾವೆಲ್ಲ ಸ್ವಲ್ಪಮಟ್ಟಿಗೆ ನೆಮ್ಮದಿ ಹೊಂದಿದೆವು. ಅಂದು ಆತ ಅಪ್ಪಾಜಿ ಮಾತನಾಡಿದ ಧ್ವನಿ ಮುದ್ರಿಕೆಯನ್ನು ತಂದಿದ್ದಾನೆ ಎಂದಾಕ್ಷಣ ನಾನೇ ಚೆನ್ನೈಗೆ ವಿಮಾನದಲ್ಲಿ ಹೋಗಿ ಅಪ್ಪಾಜಿಯ ಧ್ವನಿಯನ್ನು ಖಚಿತಪಡಿಸಿಕೊಂಡೆ. ಆ 'ಧ್ವನಿ ಮುದ್ರಿಕೆ' ಕೇಳಿದ ನಂತರ ಮದ್ರಾಸಿನಲ್ಲಿ ಒಂದು ಹೋಟೆಲಿಗೆ ಹೋಗಿ ಒಂದು ಕಪ್ ಕಾಫಿಯನ್ನು ಕುಡಿದು ಆಲೋಚಿಸುತ್ತಾ ಕುಳಿತೆ. ನನ್ನ ಮುಂದೆ ಕುಳಿತಿದ್ದ ರಾಘು ನನ್ನ ಮುಖವನ್ನೇ ನೋಡುತ್ತಿದ್ದ. ಅಲ್ಲೇ ನಾವು ನಮ್ಮ ಮುಂದಿನ ಕಾರ್ಯತಂತ್ರವನ್ನು ರೂಪಿಸಿದ್ದು. ಈ ಕಾರ್ಯತಂತ್ರದ ರೂಪುರೇಷೆ ಹಾಗೂ ಒಟ್ಟಾರೆ ಮಾಸ್ಟರ್ ಪ್ಲಾನ್‌ಅನ್ನು ನಾವು ಅಂದು ಬಹಿರಂಗಗೊಳಿಸಿರಲಿಲ್ಲ. ಇಂದು ನಿಮ್ಮ ಮುಂದೆ ನಾನು ಅದನ್ನೆಲ್ಲಾ ಹೇಳಬಿಟ್ಟರೆ ನನಗೆ ನಾನೇ ದ್ರೋಹ ಬಗೆದಂತಾಗುತ್ತದೆ....

(ಮುಂದುವರೆಯುತ್ತದೆ)

ಅಪ್ಪಾಜಿ ಕಿಡ್ನ್ಯಾಪ್ ಆಗಿ ಹತ್ತು ದಿನವಾಗಿರಬೇಕು.... ಅಂದು ರಾತ್ರಿ ಬೆಂಗಳೂರಿನಲ್ಲಿ ಧಾರಾಕಾರವಾಗಿ ಮಳೆ ಸುರಿಯಿತು. ಹಾಗೆ ಮಳೆ ಸುರಿಯುತ್ತಿದ್ದಂತೆ ನಮ್ಮ ಮನೆಯಲ್ಲಿದ್ದವರ ತಾಳ್ಮೆಯ ಕಟ್ಟೆ ಒಡೆದುಹೋಯಿತು. ಅಪ್ಪಾಜಿ ಈ ಮಳೆಗೆ ಕಾಡಿನಲ್ಲಿ ಹೇಗಿರುತ್ತಾರೋ? ಅಪ್ಪಾಜಿಯನ್ನು ವೀರಪ್ಪನ್ ಹೇಗೆ ನೋಡಿಕೊಳ್ಳುತ್ತಾನೋ ಎಂದು ಪ್ರತಿಯೊಬ್ಬರೂ ನೆನೆಸಿಕೊಳ್ಳುತ್ತಾ ಅಳಲಾರಂಭಿಸಿದರು. ಅತ್ತ ಮನೆಯ ಹೊರಗಡೆ ಮಳೆಯ ನೀರು ಇತ್ತ ಮನೆಯ ಒಳಗಡೆ ಕಣ್ಣೀರು.

R.B.P. LANKESH, Kannada Weekly Price Rs. 10/- 25-4-2007 RNI No. KARKAN2005/14648 Regd.No.KA/BG(S)/2036/2005-07





ಐಟಂ ಸಾಂಗ್‌ಗಳೆಂಬ ಲಂಚ!

'ಲಂಚ ಸಾಮ್ರಾಜ್ಯ' ಎಂಬ ಚಿತ್ರ ನೋಡಿದಾಗ ಅನ್ನಿಸಿದ್ದು ಇಷ್ಟು: ನಿವೃತ್ತ ಲೋಕಾಯುಕ್ತ ವೆಂಕಟಾಚಲರವರು ನಟಿಸಿರುವ ಭಾಗ ಡಾಕ್ಯುಮೆಂಟರಿ ಮಾದರಿಯಲ್ಲಿದ್ದರೆ, ಮಾಸ್ಟರ್ ಹಿರಣ್ಣಯ್ಯ ನಟಿಸಿರುವ ಭಾಗಗಳು ನಾಟಕದ ಮಾದರಿಯಲ್ಲಿದ್ದು ಇನ್ನುಳಿದಿರುವ ಸ್ವಲ್ಪ ಭಾಗ ಸಿನಿಮಾದ ಥರ ಕಾಣಿಸುತ್ತದೆ.... ಅತ್ತ ನಾಟಕವೂ ಅಲ್ಲದ, ಇತ್ತ ಡಾಕ್ಯುಮೆಂಟರಿಯೂ ಅಲ್ಲದ ಸಿನಿಮಾವೆಂಬ ಈ ಸಿನಿಮಾ ಪಡ್ಡೆಹುಡುಗರಿಗೆ ಇಷ್ಟವಾಗಲಿ ಎಂದು ಬರೋಬ್ಬರಿ ಮೂರುವರೆ ಐಟಂ ಸಾಂಗ್‌ಗಳನ್ನು ತುರುಕಲಾಗಿದೆ. ಸಾಧಾರಣವಾಗಿ ಒಂದೇ ಐಟಂ ಸಾಂಗಿಗೆ ಪರ್ಮಿಷನ್ ಕೊಡುವ ಸೆನ್ಸಾರ್ ಅಧಿಕಾರಿಗಳು ಈ ಚಿತ್ರಕ್ಕೆ ಧಾರಾಳವಾಗಿ ವಿನಾಯ್ತಿ ನೀಡಿದ್ದಾರೆ.

ಅಂದಹಾಗೆ ಭ್ರಷ್ಟಾಚಾರ ಮತ್ತು ರಾಜಕೀಯದ ಕತೆ ಸಮಕಾಲೀನವಾದರೂ ನಿರ್ದೇಶಕ ಬೂದಾಳ್ ಕೃಷ್ಣಮೂರ್ತಿಯವರ ನಿರೂಪಣೆ ಹಸಿಹಸಿಯಾಗಿರುವುದರಿಂದ ಚಿತ್ರ ಬೋರಾಗುತ್ತದೆ.



ಮೂವತ್ತು ಕೋಟಿ ಗಳಿಸಲಿರುವ ಮುಂಗಾರು

'ಮುಂಗಾರು ಮಳೆ' ಹಂಡ್ರೆಡ್ ಡೇಸ್ ದಾಟಿದ್ದರೂ ಇನ್ನೂ ಟೂ ಹಂಡ್ರೆಡ್ ಡೇಸ್ ಓಡುವ ಲಕ್ಷಣಗಳು ಕಾಣುತ್ತಿವೆ. ಅಂದಹಾಗೆ, ಈ ಚಿತ್ರದ ನಿರ್ಮಾಪಕರು ಇನ್ನೊಂದು ದಾಖಲೆಯನ್ನು ಸ್ಥಾಪಿಸಿದ್ದಾರೆ. ಈ ಹಿಂದೆ 'ಜೋಗಿ' ಚಿತ್ರದ 81 ಪ್ರಿಂಟ್‌ಗಳನ್ನು ಹಾಕಿಸಿ ರೆಕಾರ್ಡ್ ಮಾಡಿದ್ದರೆ, ಈಗ 'ಮುಂಗಾರು..' ಚಿತ್ರದ 102 ಪ್ರಿಂಟ್‌ಗಳನ್ನು ಹಾಕಿದ್ದಾರೆ. ಅಂದರೆ, ಪ್ರಿಂಟ್ ವಿಷಯದಲ್ಲೂ ಈ ಚಿತ್ರ ಸೆಂಚುರಿ ಬಾರಿಸಿದೆ.

ಚಿತ್ರರಂಗದ ಪಂಡಿತರ ಪ್ರಕಾರ ಈ ಚಿತ್ರ ಕನಿಷ್ಠವೆಂದರೂ ಮೂವತ್ತು ಕೋಟಿ ರೂಪಾಯಿ ಗಳಿಸುವುದು ಗ್ಯಾರಂಟಿಯಾಗಿದೆ. ಇದು ಕನ್ನಡ ಚಿತ್ರರಂಗದ ಮಟ್ಟಿಗೆ ಯಾರೂ, ಎಂದೂ ನಿರೀಕ್ಷಿಸದ ಮ್ಯಾಜಿಕ್ ಫಿಗರ್. ಈ ಮ್ಯಾಜಿಕ್‌ಅನ್ನು ಒಬ್ಬ ಹೀರೋ-ಹೀರೋಯಿನ್ ಬದಲಿಗೆ ಚಿತ್ರತಂಡದ ಸದಸ್ಯರೆಲ್ಲರೂ ಸೇರಿ ಮಾಡಿರುವುದು ವಿಶೇಷ. ಮುಂಗಾರು ಮಳೆ ಬರುವ ಮೊದಲೇ ಚಿತ್ರರಂಗದ ಈ 'ಮುಂಗಾರು ಮಳೆ' ರಾಜ್ಯಾದ್ಯಂತ ಎಲ್ಲರ ಮನಸ್ಸನ್ನು ಪ್ರೀತಿಯಿಂದ ತೊಯ್ಸಿದೆ.



ತಿಮ್ಮನಿಂದ ತಿರುಪತಿ ನಾಮ

ಮೊನ್ನೆ ಬಿಡುಗಡೆಯಾದ 'ತಿಮ್ಮ' ಎಂಬ ಸಿನಿಮಾ ನಡೆಯುತ್ತಿರುವ ಚಿತ್ರಮಂದಿರದ ಮುಂದೆ ತಿರುಪತಿ ಬೆಟ್ಟ ಮತ್ತು ಅದರ ಮೇಲಿರುವ ದೇವಸ್ಥಾನದ ಮಾಡೆಲ್ ಅನ್ನು ಮಾಡಿ ಇಟ್ಟಿದ್ದಾರೆ. ಆದರೆ ಸಿನಿಮಾ ನೋಡಿ ಹೊರಬರುತ್ತಿರುವ ಜನ ಮಾತ್ರ ಆ ಮಾಡಲ್ ಅನ್ನು ನೋಡಿ "ಈ ಚಿತ್ರದ ನಿರ್ಮಾಪಕನಿಗೆ ತಿರುಪತಿ ನಾಮವೇ ಗತಿ" ಎಂದು ವಿಮರ್ಶೆ ಮಾಡುತ್ತಿದ್ದಾರೆ, ನಾರಾಯಣ, ನಾರಾಯಣ!



ಹೀಗೊಂದು ದುರಂತ

ಮಾಸ್ಟರ್ ವಿನಾಯಕ ಜೋಷಿ ಎಂಬ ಬಾಲ ನಟನನ್ನು ಹೀರೋ ಮಾಡಲು ಅವರ ತಂದೆ ಜೋಷಿ ತುಂಬಾ ಪ್ರಯತ್ನ ಪಟ್ಟರು. ಅವರು ರಿಯಲ್ ಎಸ್ಟೇಟ್ ಬಿಸಿನೆಸ್ಸಿನಲ್ಲಿ ಗಳಿಸಿದ್ದನ್ನೆಲ್ಲ ತಮ್ಮ ಮಗ ಹೀರೋ ಆಗಿ ನಟಿಸಿದ್ದ ಚಿತ್ರಕ್ಕೆ ಸುರಿಸಿದರು. ಆದರೆ ಆ ಚಿತ್ರ ಸಂಪೂರ್ಣವೂ ಆಗಲಿಲ್ಲ, ಅದನ್ನು ಮುಗಿಸುತ್ತೇವೆ ಎಂದು ಹೇಳಿದ್ದ ಜನರು ಜೋಷಿಯನ್ನು ಮೋಸ ಮಾಡುವುದನ್ನೂ ನಿಲ್ಲಿಸಲಿಲ್ಲ.

ಸಿನಿಮಾ ರಂಗದಲ್ಲಿ ಹೀಗೆ ಹಣ ಕಳೆದುಕೊಂಡವರಿಗೆ ಲೆಕ್ಕವಿಲ್ಲ, ಆದರೆ ಜೋಷಿಯವರ ದುರಂತ ಯಾವುದೆಂದರೆ ಅವರ ಬಳಿ ಕೊನೆಕೊನೆಗೆ ತಮ್ಮ ಆರೋಗ್ಯವನ್ನು ರಕ್ಷಿಸಿಕೊಳ್ಳುವಷ್ಟೂ ಹಣ ಇಲ್ಲದಿದ್ದದ್ದು. ಮೂತ್ರಪಿಂಡದ ರೋಗದಿಂದ ನರಳುತ್ತಿದ್ದ ಜೋಷಿಯವರು ನಿನ್ನೆ ಶನಿವಾರ ರಾತ್ರಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.




ರಮ್ಯಾ ಈಗ ಎಲ್ಲಿದ್ದಾಳೆ?

ಈ ಪ್ರಶ್ನೆ ಗಾಂಧಿನಗರದವರನ್ನು ಕಾಡುತ್ತಿದೆ. ಆಕೆ ಟಿ.ಎನ್. ಸೀತಾರಾಂ ನಿರ್ದೇಶನದ 'ಮೀರಾ, ಮಾಧವ, ರಾಘವ' ಚಿತ್ರದ ನಂತರ ಯಾವುದೇ ಹೊಸ ಚಿತ್ರಕ್ಕೆ ಸಹಿ ಮಾಡಿದ ಸುದ್ದಿ ಎಲ್ಲೂ ಕೇಳಿಬಂದಿಲ್ಲ. ಕಳೆದ ವರ್ಷ ಹ್ಯಾಟ್ರಿಕ್ ಸೆಂಚುರಿ ಬಾರಿಸಿದ ಈ ಮಂಡ್ಯದ ಬೆಡಗಿ ಈ ವರ್ಷ ಎಷ್ಟು ಬೇಗನೆ ತೆರೆಮರೆಗೆ ಸರಿದಿದ್ದಾಳೆಂದರೆ ಆಶ್ಚರ್ಯವಾಗುತ್ತದೆ. ಇದಕ್ಕೆ ಕಾರಣ ಆಕೆಯ ಪ್ರತಿಭೆ, ಗ್ಲಾಮರ್ ಅಲ್ಲವೇ ಅಲ್ಲ.

ಚಿತ್ರರಂಗದಲ್ಲಿ ಹೊಸಬರ ತಂಗಾಳಿ ಬೀಸುತ್ತಿರುವ ಈ ದಿನಗಳಲ್ಲಿ ರಮ್ಯಾ ಸೀನಿಯರ್ ಆಗಿ ಕಾಣಿಸುತ್ತಿದ್ದಾಳೆ. ಈಗಾಗಲೇ ಮತ್ತೊಮ್ಮೆ ಪ್ರೇಮ್ ಜೊತೆ ನಾಯಕಿಯಾಗಿ ನಟಿಸುವುದಿಲ್ಲ ಎಂದಿದ್ದಾಳೆ. ಈಗ ಕಾಮಿಡಿ ಗಣೇಶ್, 'ದುನಿಯಾ' ವಿಜಯ್, 'ಪಿಕ್ಸರ್' ಖ್ಯಾತಿಯ ಪ್ರಜ್ವಲ್‌ನಂತಹ ಹೊಸ ಹುಡುಗರ ಎದುರು ಈಕೆ ನಾಯಕಿಯಾಗುವ ಸಾಧ್ಯತೆ ಕಡಿಮೆ. ಇದಲ್ಲದೆ ಆಕೆ ಈಗಾಗಲೇ ಸುದೀಪ್ ಜೊತೆ ಟೂ ಬಿಟ್ಟಿದ್ದಾಳೆ. ದರ್ಶನ್ ತೂಗುದೀಪ್ ಜೊತೆ ಮುಂಗೋಪ ವ್ಯಕ್ತಪಡಿಸಿದ್ದಾಳೆ. ಹಾಗಾದರೆ ಇನ್ನು ರಮ್ಯಾ ಯಾರ ಜೊತೆ ನಟಿಸುತ್ತಾಳೆ?



ಕಿರಣ್ ರಾಥೋಡ್ 'ಕ್ಷಣ ಕ್ಷಣ'



ಬಾಬು ಉಪ್ಪಿಯ ಬ್ಯಾಂಗ್ ಬ್ಯಾಂಗ್ ಪ್ಲಾನ್

ಹಲವಾರು ಸೋಲುಗಳನ್ನು ಕಂಡಿರುವ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಮತ್ತು ನಟ ಉಪೇಂದ್ರ ಜೊತೆಗೂಡಿದ್ದಾರೆ. ಸದ್ಯದಲ್ಲೇ ಅವರಿಬ್ಬರ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಎಂಬ ಹೊಸ ಚಿತ್ರ ಸೆಟ್ಟೇರಲಿದೆ. ಚಿತ್ರದ ಹೆಸರು ನೋಡಿ ಇದು ಇಂಗ್ಲಿಷ್ ಚಿತ್ರ ಎಂದು ಭಾವಿಸಬೇಡಿ. ಅಚ್ಚ ಕನ್ನಡದಲ್ಲೇ ಚಿತ್ರೀಕರಣ ನಡೆಯಲಿದೆ.

ಈ ಚಿತ್ರದ ಕತೆ ಕೇಳಿದರೆ, ಸೋಲಿನ ಸರದಾರರಾಗಿರುವ ಸಿಂಗ್ ಬಾಬು ಮತ್ತು ಉಪ್ಪಿಯ ಅಭಿರುಚಿ ಬದಲಾಗಿದೆ ಎನಿಸುತ್ತದೆ. ಏಕೆಂದರೆ ಇದು ಸುಮಾರು ಇಪ್ಪತ್ತು ವರ್ಷಗಳ ಹಿಂದ ಬಾಬು ತಯಾರಿಸಿದ್ದ ಕತೆ. 'ನಾಗರಹೊಳೆ' ಮತ್ತು 'ಸಿಂಹದ ಮರಿ ಸೈನ್ಯ'ದ ಮಾದರಿಯಲ್ಲಿರುವ ಈ ಸಿನಿಮಾದಲ್ಲಿ ನಾಯಕನಟ ಉಪೇಂದ್ರ ಓರ್ವ ಸ್ಟಂಟ್ ಮಾಸ್ಟರ್. ಆತ ಐವರು ಮಕ್ಕಳನ್ನು ಅಪಾಯದಿಂದ ಹೇಗೆ ಕಾಪಾಡುತ್ತಾನೆ ಎಂಬುದೇ ಚಿತ್ರದ ತಿರುಳು. ಕತೆ ಕರ್ನಾಟಕದಲ್ಲಿ ಆರಂಭವಾಗಿ ಕಾಶ್ಮೀರದ ತನಕ ಹೋಗಿ ಮತ್ತೆ ಕರ್ನಾಟಕಕ್ಕೆ ವಾಪಸ್ಸಾಗುತ್ತದೆಯಂತೆ.

ಏನೇ ಇರಲಿ, ಇಪ್ಪತ್ತು ವರ್ಷಗಳ ಹಳೆಯ ಕತೆಯನ್ನು ಹೊಸ ರೀತಿಯಲ್ಲಿ ಹೇಳಲು ಹೊರಟಿದ್ದಾರೆ ಬಾಬು. ಅಂದಿನ ಕತೆಗೆ ಇಂದಿನ ಗ್ರಾಫಿಕ್ಸ್ ವೈಭವ ಸೇರಿದರೆ ಖಂಡಿತವಾಗಿಯೂ ಅದು ಪ್ರೇಕ್ಷಕರಿಗೆ ಇಷ್ಟವಾಗಬಹುದು.



ರೋಗ ಹಿಡಿದಿರುವ ಇಲಾಖೆ

ವಾರ್ತಾ ಇಲಾಖೆಯಲ್ಲಿ ಎಲ್ಲವೂ ಸರಿಯಾಗಿ ನಡೆಯುತ್ತಿಲ್ಲ ಎಂಬುದಕ್ಕೆ ಇತ್ತೀಚೆಗೆ ಮತ್ತೊಂದು ಉದಾಹರಣೆ ಸಿಕ್ಕಿದೆ. ಮೊನ್ನೆ ಬಿ.ಆರ್. ಕೇಶವ ಎಂಬ ನಿರ್ದೇಶಕ ತನ್ನ ಚಿತ್ರವನ್ನು ಸಬ್ಸಿಡಿ ಪಟ್ಟಿಗೆ ಸಲ್ಲಿಸಿದ್ದರೂ ಅದನ್ನು ಮಾರ್ಚ್ 31ರ ಒಳಗಿನ ಸಬ್ಸಿಡಿ ಪಟ್ಟಿಗೆ ಸೇರಿಸಿಲ್ಲ ಎಂದು ವಾರ್ತಾ ಇಲಾಖೆಯ ವಿರುದ್ಧ ಬಂಡೆದ್ದಿದ್ದ.



ಇದಾದ ಕೆಲವೇ ದಿನಗಳ ನಂತರ ವಾರ್ತಾ ಇಲಾಖೆಯ ಉದ್ಯೋಗಿಯೇ ಆಗಿರುವ ಶಿವರುದ್ರಯ್ಯ ನಿರ್ದೇಶಿಸಿರುವ 'ಯಜ್ಞ' ಎಂಬ ಚಿತ್ರವನ್ನು ಕೊನೇ ದಿನಾಂಕದ ನಂತರ ಸಲ್ಲಿಸಿದ್ದರೂ ಅದನ್ನು ಸಬ್ಸಿಡಿ ಪಟ್ಟಿಗೆ ಸೇರಿಸಲಾಗಿದೆ. ಹೀಗಾಗಿ ಕೇಶವನ ಆರ್ಭಟಕ್ಕೆ ಪುಷ್ಟಿ ದೊರೆ ತಂತಾಗಿದೆ.

ಈ ಹಿನ್ನಲೆಯಲ್ಲಿ ಬಾದಾಮಿ ಹೌಸ್‌ನಲ್ಲಿರುವ ವಾರ್ತಾ ಇಲಾಖೆಯ ಅಧಿಕಾರಿಗಳ ಬಗ್ಗೆ ವಿಚಾರಣೆ ನಡೆಯುತ್ತಿದೆ. ನಿವೃತ್ತಿಯ ಅಂಚಿನಲ್ಲಿರುವ ಅಧಿಕಾರಿ ಸೋಮಶೇಖರ್ ಎತ್ತಂಗಡಿಯಾಗುವ ಸುದ್ದಿ ಕೇಳಿಬರುತ್ತಿದೆ. ಆದರೆ ವಾಸ್ತವವಾಗಿ ಇಡೀ ವಾರ್ತಾ ಇಲಾಖೆಯೇ ರಿಪೇರಿ ಆಗಬೇಕೇ ವಿನಃ ಒಬ್ಬ ಅಧಿಕಾರಿಯಲ್ಲ, ಇದು ಸರಕಾರಕ್ಕೆ ಅರ್ಥವಾಗದ ಅಂತ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44